ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ
ಬೆಳಗಿನ ಪ್ರಾದೇಶಿಕ ದಿನಪತ್ರಿಕೆ
ಫೆಬ್ರವರಿ 28 ಬುಧವಾರ 2024
ಸಂಪುಟ: 44 | ಸಂಚಿಕೆ: 311 | ಪುಟಗಳು: 12
ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com
₹4

ಪವಾಡವೇನು ನಡೆಯಲಿಲ್ಲ...!! ಬಿಜೆಪಿ–ಜೆಡಿಎಸ್ ಮೈತ್ರಿಗೆ ಮುಖಭಂಗ...!!!

ಅಡ್ಡ ಮತದಾನದ ಮೂಲಕ ಎಸ್.ಟಿ.ಸೋಮಶೇಖರ್; ಗೈರು ಹಾಜರಿ ಮೂಲಕ ಶಿವರಾಂ ಹೆಬ್ಬಾರ್ ಬಿಜೆಪಿಗೆ ಬರೆ!!!

ನಿರೀಕ್ಷೆಯಂತೆ ವಿಧಾನಸಭೆಯಿಂದ ರಾಜ್ಯಸಭೆಗೆ

ಕಾಂಗ್ರೆಸ್ 3, ಬಿಜೆಪಿ ಒಬ್ಬರು ಆಯ್ಕೆ

ಕಾಂಗ್ರೆಸ್‌ನ ಅಜಯ್ ಮಾಕೆನ್–47, ನಾಸೀರ್ ಹುಸೇನ್–47, ಜಿ.ಸಿ.ಚಂದ್ರಶೇಖರ್–45, ಬಿಜೆಪಿಯ ನಾರಾಯಣಸಾ ಬಾಂಡಗೆ–47 ರಾಜ್ಯಸಭೆ ಪ್ರವೇಶ

●ಮೈತ್ರಿ ಅಭ್ಯರ್ಥಿ ಕುಪೇಂದ್ರ ರೆಡ್ಡಿ–36 ಹೀನಾಯ ಸೋಲು; ಇದು ಸತತ ಮೂರನೇ ಪರಾಜಯ ●ಬಿಜೆಪಿ–ಜೆಡಿಎಸ್ ತಂತ್ರಕ್ಕೆ: ಸಿಎಂ ಸಿದ್ದರಾಮಯ್ಯ, ಡಿಸಿಎಂ ಡಿ.ಕೆ.ಶಿವಕುಮಾರ್ ಯಶಸ್ವಿ ರಣತಂತ್ರ

ಬೆಂಗಳೂರು, ಫೆ.27(ಕೆಎಂಶಿ)–ವಿಧಾನಸಭೆಯಿಂದ ರಾಜ್ಯಸಭೆಯ ನಾಲ್ಕು ಸ್ಥಾನಗಳಿಗೆ ನಡೆದ ಚುನಾವಣೆಯಲ್ಲಿ ಪವಾಡವೇನು ನಡೆಯಲಿಲ್ಲ. ವಾಸ್ತವ ಅಂಕಿ ಸಂಖ್ಯೆಯಂತೆ ಹಾಗೂ ನಿರೀಕ್ಷೆಯಂತೆ ಕಾಂಗ್ರೆಸ್‌ನ ಮೂವರು, ಬಿಜೆಪಿಯ ಒಬ್ಬರು ಜಯ ಗಳಿಸಿದ್ದಾರೆ.

ಬಿಜೆಪಿಯ ಎಸ್.ಟಿ.ಸೋಮಶೇಖರ್ ಅಡ್ಡ ಮತದಾನ ಮಾಡಿ ಕಾಂಗ್ರೆಸ್ ಅಭ್ಯರ್ಥಿಗೆ ಮತ ಚಲಾಯಿಸಿದರೆ, ಅದೇ ಪಕ್ಷದ ಮತ್ತೊಬ್ಬ ಶಾಸಕ ಶಿವರಾಂ ಹೆಬ್ಬಾರ್ ಮತದಾನದಿಂದಲೇ ದೂರ ಉಳಿಯುವ ಮೂಲಕ ಕಾಂಗ್ರೆಸ್ ಅಭ್ಯರ್ಥಿಗಳು ಭರ್ಜರಿ ಜಯಗಳಿಸಲು ಪರೋಕ್ಷವಾಗಿ ಸಹಕರಿಸಿದರು. ಪಕ್ಷೇತರರಾದ ಗಾಲಿ ಜನಾರ್ಧನ ರೆಡ್ಡಿ, ದರ್ಶನ್ ಪುಟ್ಟಣ್ಣಯ್ಯ, ಪುಟ್ಟಸ್ವಾಮಿ ಗೌಡ, ಲತಾ ಮಲ್ಲಿಕಾರ್ಜುನ್ ಕಾಂಗ್ರೆಸ್ ಅಭ್ಯರ್ಥಿಗಳಿಗೆ ಮತ ಚಲಾಯಿಸಿದರು. ವಿಧಾನಸಭೆಯಲ್ಲಿ 223 ಸದಸ್ಯ ಬಲ ಇದ್ದು, 222 ಮತಗಳಷ್ಟೇ ●9ನೇ ಪುಟಕ್ಕೆ



ಅಜಯ್ ಮಾಕೆನ್ ನಾಸೀರ್ ಹುಸೇನ್ ಜಿ.ಸಿ.ಚಂದ್ರಶೇಖರ್ ನಾರಾಯಣಸಾ ಬಾಂಡಗೆ

ನಾಸೀರ್ ಹುಸೇನ್ ಬೆಂಬಲಿಗರಿಂದ ವಿಧಾನಸೌಧದಲ್ಲಿ 'ಪಾಕಿಸ್ತಾನ್ ಜಿಂದಾಬಾದ್' ಘೋಷಣೆ ಆರೋಪ



ಬೆಂಗಳೂರು: ರಾಜ್ಯಸಭಾ ಚುನಾವಣೆಯಲ್ಲಿ ಗೆದ್ದ ಬಳಿಕ ಕಾಂಗ್ರೆಸ್‌ನ ನಾಸೀರ್ ಹುಸೇನ್ ಬೆಂಬಲಿಗರು ವಿಧಾನಸೌಧದಲ್ಲೇ ಪಾಕಿಸ್ತಾನ ಪರ ಘೋಷಣೆ ಕೂಗಿದ ಆರೋಪ ಕೇಳಿ ಬಂದಿದೆ. ನಾಸೀರ್ ಹುಸೇನ್ 47 ಮತಗಳನ್ನು ಪಡೆದು ಜಯಗಳಿಸುತ್ತಿದ್ದಂತೆ ವಿಧಾನಸೌಧದಲ್ಲಿ ನೆರೆದಿದ್ದ ಅವರ ಅಪಾರ ಬೆಂಬಲಿಗರು ನಾಸೀರ್ ಹುಸೇನ್ ಪರ ಘೋಷಣೆ ಕೂಗುವ ಸಂದರ್ಭದಲ್ಲಿ 'ಪಾಕಿಸ್ತಾನ ಜಿಂದಾಬಾದ್' ಎಂದು ಘೋಷಣೆ ಕೂಗಿದ್ದಾರೆಂದು ಹೇಳಲಾಗುತ್ತಿದೆ. ಈ ವೇಳೆ ಮಾಧ್ಯಮದವರು ನಾಸೀರ್ ಹುಸೇನ್ ಅವರನ್ನು ಪ್ರಶ್ನಿಸಿದಾಗ, 'ನಾಸೀರ್ ಹುಸೇನ್ ಜಿಂದಾಬಾದ್' ಎಂದು ಕೂಗಿದ್ದಷ್ಟೇ ಎಂದು ಪ್ರತಿಕ್ರಿಯಿಸಿದ್ದಾರೆ. ವಿಧಾನಸೌಧದಲ್ಲೇ ಪಾಕಿಸ್ತಾನ್ ಜಿಂದಾಬಾದ್ ಘೋಷಣೆ ಕೂಗಿದ ಆರೋಪಕ್ಕೆ ಆಕ್ರೋಶ ವ್ಯಕ್ತಪಡಿಸಿ ಬಿಜೆಪಿ ನಾಯಕರು ಕೆಪಿಸಿಸಿ ಕಚೇರಿಗೆ ಮುತ್ತಿಗೆ ಹಾಕಿ, ಆಕ್ರೋಶ ವ್ಯಕ್ತಪಡಿಸಿದರು. ಅವರ ವಿರುದ್ಧ ಕಾಂಗ್ರೆಸ್ ಹೈಗ್ರೌಂಡ್ಸ್ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದೆ.



ಸೋಮಶೇಖರ್ 'ಆತ್ಮಸಾಕ್ಷಿ' ಮತ!

ಬೆಂಗಳೂರು, ಫೆ. 27– ತಾವು ಅಡ್ಡಮತದಾನ ಮಾಡಿದ್ದನ್ನು ಬಿಜೆಪಿ ಶಾಸಕ ಎಸ್.ಟಿ.ಸೋಮಶೇಖರ್ ಸಮರ್ಥಿಸಿಕೊಂಡಿದ್ದಾರೆ. ಎನ್‌ಡಿಎ ಮೈತ್ರಿಕೂಟದ ನಾಯಕರು ಆತ್ಮಸಾಕ್ಷಿ ಮತದಾನ ಮಾಡುವಂತೆ ಕರೆಕೊಟ್ಟಿದ್ದರು. ಅದರಂತೆಯೇ ನಾನು ಮತ ಚಲಾಯಿಸಿದ್ದೇನೆ ಎಂದು ತಿಳಿಸಿದ್ದಾರೆ.

ಮೈತ್ರಿ ಸರ್ಕಾರದಲ್ಲಿ ಅಭಿವೃದ್ಧಿ ಆಗುತ್ತಿಲ್ಲ ಎಂದು ಬಾಂಬೆಗೆ ಓಡಿ ಹೋದವರು ಈಗ ಅಭಿವೃದ್ಧಿ ಆಗಿದ್ದಾರೆ ಎಂದು ತಮ್ಮ ವಿರುದ್ಧ ಟೀಕಾಪ್ರಹಾರ ನಡೆಸಿದ ಮಾಜಿ ಮುಖ್ಯಮಂತ್ರಿ ಹಾಗೂ ಜೆಡಿಎಸ್ ನಾಯಕ ಹೆಚ್.ಡಿ. ಕುಮಾರಸ್ವಾಮಿಗೆ ಎದಿರೇಟು ನೀಡಿದ ಸೋಮಶೇಖರ್, ಅವರು ಒಮ್ಮೆ ಕಾಂಗ್ರೆಸ್ ಮತ್ತೊಮ್ಮೆ ಬಿಜೆಪಿಯೊಂದಿಗೆ ಮೈತ್ರಿ ಮಾಡಿಕೊಂಡು ಮುಖ್ಯಮಂತ್ರಿ ಆಗಿರಲಿಲ್ಲವೇ, ಸರ್ಕಾರ ರಚನೆ ಮಾಡಿರಲಿಲ್ಲವೇ, ಆಗ ಇವರ ಆತ್ಮಸಾಕ್ಷಿ ಎಲ್ಲಿ ಹೋಗಿತ್ತು ಎಂದು ವಾಗ್ದಾಳಿ ನಡೆಸಿದರು.

ಫಲಿಸಿದ ಸಿಎಂ ಸಿದ್ದರಾಮಯ್ಯ, ಡಿಸಿಎಂ ಡಿ.ಕೆ.ಶಿವಕುಮಾರ್ ರಣತಂತ್ರ



ಬೆಂಗಳೂರು, ಫೆ. 27– ರಾಜ್ಯಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಸೇಫ್ ಗೇಮ್ ಆಡಿ ತನ್ನ ಮೂವರು ಅಭ್ಯರ್ಥಿಗಳನ್ನು ಗೆಲ್ಲಿಸಿಕೊಡುವುದರೊಂದಿಗೆ ಎನ್‌ಡಿಎ ಮೈತ್ರಿಕೂಟಕ್ಕೆ ತೀವ್ರ ಮುಖಭಂಗ ಉಂಟು ಮಾಡಿದೆ. ಹಲವು ಲೆಕ್ಕಾಚಾರದೊಂದಿಗೆ ಜೆಡಿಎಸ್–ಬಿಜೆಪಿ 5ನೇ ಅಭ್ಯರ್ಥಿಯಾಗಿ ಕುಪೇಂದ್ರ ರೆಡ್ಡಿಯವರನ್ನು ಕಣಕ್ಕಿಳಿಸಿದ್ದವು. ಸಹಜವಾಗಿ ಆಡಳಿತಾರೂಢ ಕಾಂಗ್ರೆಸ್‌ಗೆ ಅಡ್ಡಮತದಾನದ ಭೀತಿ ಎದುರಾಗಿತ್ತು. ಇದರಿಂದ ಎಚ್ಚೆತ್ತ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ರಣತಂತ್ರ ರೂಪಿಸಿ ತಮ್ಮ ಪಕ್ಷದ ಶಾಸಕರನ್ನು ಹಿಡಿದಿಟ್ಟುಕೊಳ್ಳುವುದರ ಜೊತೆಗೆ ಬಿಜೆಪಿ ಹಾಗೂ ಪಕ್ಷೇತರ ಶಾಸಕರ ಮತಗಳನ್ನು ಸೆಳೆದುಕೊಳ್ಳುವುದರಲ್ಲಿ ಯಶಸ್ವಿಯಾಗಿದ್ದಾರೆ.

ಕೆಆರ್‌ಪಿಪಿ ಜನಾರ್ಧನರೆಡ್ಡಿ, ರೈತ ಸಂಘದ ದರ್ಶನ್ ಪುಟ್ಟಣ್ಣಯ್ಯ, ಪಕ್ಷೇತರರಾದ ಪುಟ್ಟಸ್ವಾಮಿಗೌಡ ಹಾಗೂ ಲತಾ ಮಲ್ಲಿಕಾರ್ಜುನ್ ಕಾಂಗ್ರೆಸ್ ಬೆಂಬಲಿಸಿ, ಆ ಪಕ್ಷದ ಅಭ್ಯರ್ಥಿ ಪರ ಮತ ಚಲಾಯಿಸಿದ್ದಾರೆ.

ಚಾಮರಾಜನಗರದ ಶಿಕ್ಷಕರಿಗೆ ಪ್ರಶಸ್ತಿ



ಮೈಸೂರು,ಫೆ.27–ರೀಜನಲ್ ಇನ್‌ಸ್ಟಿಟ್ಯೂಟ್ ಆಫ್ ಇಂಗ್ಲಿಷ್ ಸೌತ್ ಇಂಡಿಯಾ ಜ್ಞಾನಭಾರತಿ ಬೆಂಗಳೂರು ವಿಶ್ವವಿದ್ಯಾಲಯದಲ್ಲಿ 17 ದಿನಗಳ ಪ್ರೊಫೆಷನಲ್ ಡೆವಲಪ್ಮೆಂಟ್ ತರಬೇತಿಯಲ್ಲಿ ಪ್ರತಿ ಜಿಲ್ಲೆಯಿಂದ ಇಬ್ಬರು ಇಂಗ್ಲಿಷ್ ಶಿಕ್ಷಕರಂತೆ ರಾಜ್ಯದಿಂದ 35 ಜಿಲ್ಲೆಯ 68 ಇಂಗ್ಲಿಷ್ ಶಿಕ್ಷಕರು ಭಾಗವಹಿಸಿದ್ದರು. ಅವರಲ್ಲಿ ಚಾಮರಾಜನಗರ ಜಿಲ್ಲೆಯಿಂದ ನಾಗರಾಜ ಆರ್‌ಜಿಪಿಟಿ ಇಂಗ್ಲಿಷ್ ನಲ್ಲೂರು ಮೋಳೆ ಮತ್ತು ಶಿವರಾಜ್ ನಾಯಕ್ ಜಿಎಚ್‌ಪಿಎಸ್ ಮೇಗಳಹುಂಡಿ ಇವರಿಬ್ಬರು ಚಾಮರಾಜನಗರದಿಂದ ಭಾಗವಹಿಸಿದ್ದರು. ಆದರೆ ರೀಜನಲ್ ಇನ್‌ಸ್ಟಿಟ್ಯೂಟ್ ಆಫ್ ಇಂಗ್ಲಿಷ್ ಸಂಸ್ಥೆಯು ನೀಡಿರುವ ಏಕೈಕ ಪ್ರಶಸ್ತಿ "ದ ಬೆಸ್ಟ್ ರೀಡರ್ ಆಫ್‌ಆರ್‌ಐಇ ಲೈಬ್ರರಿ" ಪ್ರಶಸ್ತಿಗೆ ನಮ್ಮ ಚಾಮರಾಜನಗರ ಜಿಲ್ಲೆಯ ನಾಗರಾಜ್ ಆರ್. ಜಿಪಿಟಿ ಇಂಗ್ಲಿಷ್ ಶಿಕ್ಷಕರು ನೆಲ್ಲೂರು ಮೋಳೆ ಇವರಿಗೆ ಪ್ರಶಸ್ತಿ ಲಭಿಸಿದೆ.

ಬಸವನಗುಡಿ ಪಾರ್ಕ್‌ನಲ್ಲಿ ಉಚಿತ ಆರೋಗ್ಯ ಶಿಬಿರ

ಮೈಸೂರು, ಫೆ. 27– ಇಎಸ್‌ಐ ಆಸ್ಪತ್ರೆ ಐಸಿಟಿಸಿ ವಿಭಾಗ ಮತ್ತು ಎನ್‌ಜೆ ಆಸ್ಪತ್ರೆ ವತಿಯಿಂದ ಮಾರ್ಚ್ 1ರಂದು ಬಸವನಗುಡಿ ಪಾರ್ಕ್‌ನಲ್ಲಿ ಉಚಿತ ಸಮುದಾಯ ಆಧಾರಿತ ಆರೋಗ್ಯ ಶಿಬಿರವನ್ನು ಆಯೋಜಿಸಲಾಗಿದೆ. ಈ ಆರೋಗ್ಯ ಮೇಳದಲ್ಲಿ ಬಿಪಿ, ಶುಗರ್, ಟಿಬಿ, ಓಬಿಜಿ, ಗ್ಯಾಸ್ಟ್ರಿಕ್ ಸಮಸ್ಯೆ, ಹೆಚ್.ಐ.ವಿ, ತಂಬಾಕು, ಮೂಳೆ, ಗರ್ಭಕೋಶ ತೊಂದರೆ, ಕ್ಯಾನ್ಸರ್ ಸರ್ಜರಿ, ಇ.ಎನ್.ಟಿ, ಕಣ್ಣಿನ ತಪಾಸಣೆ, ಜನರಲ್ ತಪಾಸಣೆ, ಹಾಗೂ ಅಭಾ ಕಾರ್ಡ್,ಇ–ಶಾಮ್ ಕಾರ್ಡನ್ನು ಮಾಡಲಾಗುವುದು ಎಂದು ಪತ್ರಿಕಾ ಪ್ರಕಟಣೆ ತಿಳಿಸಿದೆ.

ಕಂಪ್ಯೂಟರ್ ಸೈನ್ಸ್ ಎಂ.ಟೆಕ್‌ನಲ್ಲಿ ಎಂ.ಪಿ.ಲಿಖಿತಾ ಮೊದಲ ರ್‍ಯಾಂಕ್

ಮೈಸೂರು,ಫೆ.27–ಮೈಸೂರಿನ ಜಯ ಚಾಮರಾಜೇಂದ್ರ ತಾಂತ್ರಿಕ ವಿಶ್ವವಿದ್ಯಾನಿಲಯದ 2023–24ನೇ ಶೈಕ್ಷಣಿಕ ವರ್ಷದಲ್ಲಿ ಸ್ನಾತಕೋತ್ತರ ಪದವಿ ಕಂಪ್ಯೂಟರ್ ಸೈನ್ಸ್ ಎಂಟೆಕ್ ವಿಭಾಗದಲ್ಲಿ ಎಂ.ಪಿ.ಲಿಖಿತಾ ಶೇಕಡಾ 9.8 ಗ್ರೇಡ್‌ನೊಂದಿಗೆ ಚಿನ್ನದ ಪದಕದೊಂದಿಗೆ ಪ್ರಥಮ ರ್‍ಯಾಂಕ್ ಗಳಿಸಿದ್ದಾರೆ. ಶನಿವಾರ ಕಾಲೇಜಿನಲ್ಲಿ ನಡೆದ ಘಟಿಕೋತ್ಸವ ಸಮಾರಂಭದಲ್ಲಿ ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಚಿನ್ನದ ಪದಕ ವಿತರಿಸಿದರು. ಈಕೆ ಮೈಸೂರಿನ ಶ್ರೀರಾಂಪುರದ ನಿವಾಸಿ ಬಿ.ಎಂ.ಪರಮೇಶ್ ಮತ್ತು ಆರ್.ಶೈಲಜಾ ಕುಮಾರಿ ದಂಪತಿ ಸುಪುತ್ರಿ. ಈ ಇಬ್ಬರು ಶಿಕ್ಷಣ ಇಲಾಖೆಯಲ್ಲಿ ಶಿಕ್ಷಕರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ.





ಮೈಸೂರು ತಾಲೂಕಿನ ಜಯಪುರ ಹೋಬಳಿಯ ಉದ್ಬೂರಿನ ಶ್ರೀ ಲಕ್ಷ್ಮಿನಾರಾಯಣ ಸ್ವಾಮಿ ದೇವಾಲಯದ ಜೀರ್ಣೋದ್ಧಾರಕ್ಕೆ ವೈಯಕ್ತಿಕವಾಗಿ ಲಕ್ಷ ರೂ. ದೇಣಿಗೆ ನೀಡಿದ ಸಮಾಜ ಸೇವಕ ಹಾಗೂ ಉದ್ಯಮಿ ಎಸ್.ಶ್ರೀಕಾಂತ್, ಉದ್ಯಮಿ ಕೆ.ಎಸ್. ದಿನೇಶ್ ಅವರನ್ನು ಗ್ರಾಮಸ್ಥರು ಅಭಿನಂದಿಸಿದರು. ಮುಖಂಡರಾದ ಉದ್ಬೂರು ಕೃಷ್ಣ, ಉದ್ಬೂರು ಮಹದೇವಸ್ವಾಮಿ, ಹಿರಿಯ ಯಜಮಾನರಾದ ನಾಗನಾಯಕ, ಚೌಡಯ್ಯ, ಸೋಮನಾಯಕ, ದೇವನಾಯಕ, ನಾರಾಯಣಪ್ಪ ಹಾಗೂ ಗ್ರಾಮಸ್ಥರು ಉಪಸ್ಥಿತರಿದ್ದರು.

ಅಂತರ ಕಾಲೇಜು ಕ್ರೀಡಾ ಸ್ಪರ್ಧೆಯಲ್ಲಿ ಶೇಷಾದ್ರಿಪುರಂ ಪದವಿ ಕಾಲೇಜಿಗೆ ಬಹುಮಾನ



ಮೈಸೂರು,ಫೆ.27–ಮೈಸೂರಿನ ಶೇಷಾದ್ರಿಪುರಂ ಪದವಿ ಕಾಲೇಜು ವಿದ್ಯಾರ್ಥಿಗಳು ಮೈಸೂರು ವಿಶ್ವವಿದ್ಯಾನಿಲಯದ ಅಂತರ ಕಾಲೇಜು ವಿವಿಧ ಕ್ರೀಡಾ ಸ್ಪರ್ಧೆಗಳಲ್ಲಿ ಭಾಗವಹಿಸಿ ಬಹುಮಾನ ಪಡೆದಿದ್ದಾರೆ.

ಫೆ.19ರಂದು ನಡೆದ ಮಹಿಳಾ ಹ್ಯಾಂಡ್ ಬಾಲ್ ಸ್ಪರ್ಧೆಯಲ್ಲಿ ದ್ವಿತೀಯ ಸ್ಥಾನ ಪಡೆದಿದ್ದಾರೆ. ಫೆ.20ರಂದು ನಡೆದ ಮಹಿಳಾ ವಿಭಾಗದ ಕರಾಟೆ ಹಾಗೂ ಕಿಕ್ ಬಾಕ್ಸಿಂಗ್ ಸ್ಪರ್ಧೆಯಲ್ಲಿ ಪ್ರಥಮ ಬಿಬಿಎ ವಿದ್ಯಾರ್ಥಿ ರಕ್ಷಿತಾ ದ್ವಿತೀಯ ಸ್ಥಾನ ಗಳಿಸಿದ್ದಾರೆ. ಹಾಗೆ ಬಾಲಕರ ವಿಭಾಗದ ಕಿಕ್ ಬಾಕ್ಸಿಂಗ್ ಸ್ಪರ್ಧೆಯಲ್ಲಿ ದ್ವಿತೀಯ ಬಿಕಾಂ ವಿದ್ಯಾರ್ಥಿ ಶುಶ್ರುತ್ ಪ್ರಥಮ ಸ್ಥಾನ, ತೃತೀಯ ಬಿಸಿಎ ವಿದ್ಯಾರ್ಥಿ ಕೌಶಿಕ್ ಪ್ರಥಮ ಸ್ಥಾನ ಪಡೆದಿದ್ದಾರೆ.


ಪುರುಷರ ವಿಭಾಗದ ಕರಾಟೆ ಮತ್ತು ಕಿಕ್ ಬಾಕ್ಸಿಂಗ್ ಸ್ಪರ್ಧೆಯಲ್ಲಿ ಪ್ರಥಮ ಬಿಕಾಂ ವಿದ್ಯಾರ್ಥಿ ವಿಜಯ್ ಸೂರ್ಯ ಎರಡು ಸ್ಪರ್ಧೆಯಲ್ಲಿ ಪ್ರಥಮ ಸ್ಥಾನವನ್ನು ಪಡೆದಿದ್ದಾರೆ. ವಿಜೇತ ವಿದ್ಯಾರ್ಥಿಗಳನ್ನು ಕಾಲೇಜಿನ ಆಡಳಿತ ಮಂಡಳಿ ಪ್ರಾಂಶುಪಾಲರಾದ ಡಾ.ಕೆ.ಸೌಮ್ಯ ಈರಪ್ಪ, ದೈಹಿಕ ಶಿಕ್ಷಣ ಭಾಗದ ನಿರ್ದೇಶಕ ಡಾ.ರಾಘವೇಂದ್ರ ಹಾಗೂ ಕಾಲೇಜಿನ ಸಿಬ್ಬಂದಿ ವರ್ಗದವರು ಅಭಿನಂದಿಸಿದರು.

ಉಚಿತ ತಾಂತ್ರಿಕ ಕೌಶಲ್ಯಾಭಿವೃದ್ಧಿ ತರಬೇತಿ

ಮೈಸೂರು,ಫೆ.27–ಎಐಟಿಟಿ– ಎಸ್‌ಸಿಪಿ ಮತ್ತು ಟಿಎಸ್‌ಪಿ ಯೋಜನೆಯಡಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಅರ್ಹ ಯುವಕ ಯುವತಿಯರಿಗಾಗಿ ಉದ್ಯೋಗ ಆಧಾರಿತ ಉಚಿತ ತಾಂತ್ರಿಕ ಕೌಶಲ್ಯಾಭಿವೃದ್ಧಿ ತರಬೇತಿಗಳಿಗೆ ಅರ್ಜಿ ಆಹ್ವಾನಿಸಲಾಗಿದೆ. ಟೂಲ್ ಡಿಸೈನ್‌ನಲ್ಲಿ ಪೋಸ್ಟ್ ಡಿಪ್ಲೊಮಾ, ಟೂಲ್ ರೂಮ್ ಮೆಷಿನಿಸ್ಟ್, ಸಿಎನ್‌ಸಿ ತಂತ್ರಜ್ಞಾನ ಅಥವಾ ಸಿಎಂಎಂ, ಸಿಎನ್‌ಸಿ ಪ್ರೋಗ್ರಾಮರ್ ವಿಎನ್‌ಸಿ ಅಥವಾ ಟರ್ನಿಂಗ್, ಡಿಸೈನರ್ ಮೆಕ್ಯಾನಿಕಲ್, ಎಲೆಕ್ಟ್ರಿಷಿಯನ್, ಕನ್ವೆನಷನಲ್ ಮೆಷಿನ್ಸ್ ಅಥವಾ ಕ್ವಾಲಿಟಿ ಇನ್‌ಸ್ಪೆಕ್ಟರ್ ಮತ್ತು ಸಿಎನ್‌ಸಿ ಮೆಷಿನ್ ಆಪರೇಟರ್ ತರಬೇತಿಗಳಿದ್ದು, ಆಸಕ್ತರು ಮಾ.5ರೊಳಗೆ ಅರ್ಜಿ ಸಲ್ಲಿಸಬಹುದು. ಹೆಚ್ಚಿನ ಮಾಹಿತಿಗಾಗಿ 9945349638 ಅಥವಾ 9900864686 ಅನ್ನು ಸಂಪರ್ಕಿಸಬಹುದು.

ನಿಧನ

ಕೆ.ಎಲ್.ವೆಂಕಟಸುಬ್ಬಯ್ಯ



ಮೈಸೂರು, ಫೆ. 27– ಮೈಸೂರಿನ ದಟ್ಟಗಳ್ಳಿ ನಿವಾಸಿ ಅಂಚೆ ಮತ್ತು ತಂತಿ ಇಲಾಖೆಯ ನಿವೃತ್ತ ನೌಕರ ಕೆ.ಎಲ್.ವೆಂಕಟಸುಬ್ಬಯ್ಯ (90) ಭಾನುವಾರ ನಿಧನರಾದರು. ಸೋಮವಾರವೇ ಅವರ ಅಂತಿಮ ವಿಧಿವಿಧಾನಗಳು ನಡೆದವು. ಹಾಸನ ಜಿಲ್ಲೆಯ ಕೌಶಿಕದಲ್ಲಿ ಜನಿಸಿದ ಅವರು, 4 ದಶಕಗಳ ಕಾಲ ಅಂಚೆ ಮತ್ತು ಟೆಲಿಗ್ರಾಫ್ಸ್ ಇಲಾಖೆಯಲ್ಲಿ ಸೇವೆ ಸಲ್ಲಿಸಿದ್ದರು. ನಾನಾ ಸಾಮಾಜಿಕ ಮತ್ತು ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದ ಅವರು ತಮ್ಮ ಹತ್ತಿರದ ಬಂಧುಗಳಿಗೆ ಮತ್ತು ಆತ್ಮೀಯರಿಗೆ ಸಮಾಜಕ್ಕೆ ಒಳ್ಳೆಯ ಕೊಡುಗೆ ನೀಡಲು ಪ್ರೇರೇಪಿಸುತ್ತಿದ್ದರು. ಅವರು ಪತ್ನಿ ವಸಂತಲಕ್ಷ್ಮಿ, ನಗರದ ಖ್ಯಾತ ನೇತ್ರ ಶಸ್ತ್ರಚಿಕಿತ್ಸಕ ಡಾ.ರವಿಶಂಕರ್ ವೆಂಕಟಸುಬ್ಬಯ್ಯ ಸೇರಿದಂತೆ ಇಬ್ಬರು ಪುತ್ರರನ್ನು, ಓರ್ವ ಪುತ್ರಿ, ಸೊಸೆಯಂದಿರು, ಅಳಿಯ ಹಾಗೂ 8 ಮೊಮ್ಮಕ್ಕಳು, ಅಪಾರ ಬಂಧು ಮಿತ್ರರನ್ನು ಅಗಲಿದ್ದಾರೆ.

ಮೈಸೂರು ಮೃಗಾಲಯದಿಂದ ಬನ್ನೇರುಘಟ್ಟಕ್ಕೆ ಜಿರಾಫೆ 'ಶಿವಾನಿ'

ಮೈಸೂರು,ಫೆ.27(ಎಂಟಿವೈ)– ಮೈಸೂರು ಮೃಗಾಲಯದಿಂದ ಹೆಣ್ಣು ಜಿರಾಫೆಯೊಂದನ್ನು ಬೆಂಗಳೂರಿನ ಬನ್ನೇರುಘಟ್ಟ ಜೈವಿಕ ಉದ್ಯಾನವನಕ್ಕೆ ರವಾನಿಸಲಾಯಿತು.


ಕೇಂದ್ರ ಮೃಗಾಲಯ ಪ್ರಾಧಿಕಾರದ ಅನುಮತಿ ಮೇರೆಗೆ 1.7 ವರ್ಷದ ಹೆಣ್ಣು ಜಿರಾಫೆ 'ಶಿವಾನಿ'ಯನ್ನು ಬನ್ನೇರುಘಟ್ಟ ಜೈವಿಕ ಉದ್ಯಾನವನದಲ್ಲಿರುವ ಗಂಡು ಜಿರಾಫೆ 'ಯದುವೀರ್'ಗೆ ಸಂಗಾತಿಯಾಗಿಸಲು ಮೈಸೂರು ಮೃಗಾಲಯದಿಂದ ಸ್ಥಳಾಂತರಿಸಲಾಯಿತು. ಇತ್ತೀಚಿನ ವರ್ಷಗಳಲ್ಲಿ ಮೈಸೂರು ಮೃಗಾಲಯದಲ್ಲಿ ವಿವಿಧ ಪ್ರಾಣಿ ಮತ್ತು ಪಕ್ಷಿ ಸಂಕುಲದಲ್ಲಿ ಸಂತಾನೋತ್ಪತ್ತಿ ಪ್ರಕ್ರಿಯೆ ಯಶಸ್ವಿಯಾಗಿ ಸಾಗುತ್ತಿದ್ದು, ಅಗತ್ಯಕ್ಕಿಂತ ಹೆಚ್ಚಿನ ಸಂಖ್ಯೆ ಪ್ರಾಣಿಗಳನ್ನು ಬೇಡಿಕೆ ಮೇರೆಗೆ ರಾಜ್ಯ ಹಾಗೂ ದೇಶದ ಇತರೆ ಮೃಗಾಲಯಗಳಿಗೆ ಸ್ಥಳಾಂತರಿಸಲಾಗುತ್ತಿದೆ. ಇತ್ತೀಚೆಗಷ್ಟೇ ಕಾಳಿ ಹುಲಿ ಸಂರಕ್ಷಿತ ಪ್ರದೇಶಕ್ಕೆ ಮೃಗಾಲಯದಿಂದ 40 ಚುಕ್ಕಿ ಜಿಂಕೆಗಳನ್ನು ಕೊಂಡೊಯ್ದು ಬಿಡಲಾಗಿತ್ತು. ಇದೀಗ ಜಿರಾಫೆಯೊಂದನ್ನು ಬನ್ನೇರುಘಟ್ಟಕ್ಕೆ ಕೊಂಡೊಯ್ಯಲಾಗಿದೆ.



ಮೈಸೂರು ಮೃಗಾಲಯದಿಂದ ಶಿವಾನಿ ಹೆಣ್ಣು ಜಿರಾಫೆಯನ್ನು ಮಂಗಳವಾರ ಬೆಂಗಳೂರಿನ ಬನ್ನೇರುಘಟ್ಟ ಜೈವಿಕ ಉದ್ಯಾನವನಕ್ಕೆ ರವಾನಿಸಲಾಯಿತು.

ಮೈಸೂರು ಮೃಗಾಲಯದ ಸಿಬ್ಬಂದಿ ಕಾಳಜಿ ಹಾಗೂ ಆರೈಕೆಯಿಂದಾಗಿ ಜಿರಾಫೆ ಸಂತತಿ ವೃದ್ಧಿಸಿದೆ. ಈ ಹಿನ್ನೆಲೆಯಲ್ಲಿ ದೇಶ ಹಾಗೂ ವಿದೇಶಗಳ ವಿವಿಧ ಮೃಗಾಲಯಗಳಿಗೂ ಜಿರಾಫೆ ಕೊಡುಗೆ ನೀಡಿದ ಕೀರ್ತಿ ಮೈಸೂರು ಮೃಗಾಲಯಕ್ಕೆ ಸಂದಿದೆ. 2018ರಲ್ಲಿ 'ಗೌರಿ' ಹೆಸರಿನ ಜಿರಾಫೆಯನ್ನು ಬನ್ನೇರುಘಟ್ಟ ಜೈವಿಕ ಉದ್ಯಾನವನಕ್ಕೆ, 2019ರಲ್ಲಿ 'ಜಯ ಚಾಮರಾಜ' ಹೆಸರಿನ ಜಿರಾಫೆಯನ್ನು ಅಸ್ಸಾಂ

ಬೃಹತ್ ಟ್ರಕ್‌ನಲ್ಲಿ ರವಾನೆ



ಗೌಹಾತಿ ಮೃಗಾಲಯಕ್ಕೆ ಕಳುಹಿಸಲಾಗಿತ್ತು. 2020ರಲ್ಲಿ ಜಿರಾಫೆ 'ಯದುವೀರ್'ನನ್ನು ಬೆಂಗಳೂರಿನ ಬನ್ನೇರುಘಟ್ಟಕ್ಕೆ, 2021ರಲ್ಲಿ ಎರಡು ಗಂಡು ಜಿರಾಫೆಗಳಾದ 'ಆಧ್ಯವೀರ್' ಮತ್ತು 'ಬಾಲಾಜಿ'ಯನ್ನು ಸಿಂಗಾಪುರದ ಸಿಂಗಪುರ್ ಜೂಲಾಜಿಕಲ್ ಗಾರ್ಡನ್‌ಗೆ ಕಳುಹಿಸಲಾಗಿತ್ತು. 2024ರಲ್ಲಿ 'ಶಂಕರ' ಜಿರಾಫೆಯನ್ನು ವಿಜಯನಗರದ ಕಮಲಾಪುರದ ಅಟಲ್ ಬಿಹಾರಿ ವಾಜಪೇಯಿ ಜೂಲಾಜಿಕಲ್ ಪಾರ್ಕ್ ಹಾಗೂ ಇದೀಗ 'ಶಿವಾನಿ' ಜಿರಾಫೆಯನ್ನು ಬನ್ನೇರುಘಟ್ಟ ಉದ್ಯಾನವನಕ್ಕೆ ಕಳುಹಿಸಿದ ದಾಖಲೆ ಮೈಸೂರು ಮೃಗಾಲಯ ಹೊಂದಿದೆ.

ಇಂದು ಬೆಳಗ್ಗೆ 7.30ಕ್ಕೆ ಮೈಸೂರು ಮೃಗಾಲಯದಿಂದ ಬನ್ನೇರುಘಟ್ಟದ ನಿರ್ದೇಶಕ ಸೂರ್ಯ ಸೇನ್, ಮೈಸೂರು ಮೃಗಾಲಯದ ಸಹಾಯಕ ನಿರ್ದೇಶಕ ಡಾ.ಜಿ.ಎಲ್.ಶ್ರೀನಿವಾಸ್, ಕರ್ನಾಟಕ ಮೃಗಾಲಯ ಪ್ರಾಧಿಕಾರದ ಪಶುವೈದ್ಯಕೀಯ ಸಲಹೆಗಾರ ಡಾ.ಕೆ.ವಿ.ಮದನ್, ಆರ್‌ಎಫ್‌ಓ ವಿ.ಮುನಿರಾಜು, ದಿನೇಶ್, ಪಶುವೈದ್ಯಾಧಿಕಾರಿ ಡಾ.ಎಂ.ಎಸ್.ರೋಷನ್ ಕೃಷ್ಣ ಹಾಗೂ ಪ್ರಾಣಿಪಾಲಕರು, ಸಿಬ್ಬಂದಿಯೊಂದಿಗೆ ಶಿವಾನಿ ಜಿರಾಫೆಯನ್ನು ರವಾನಿಸಲಾಯಿತು. ಮೃಗಾಲಯದ ಕಾರ್ಯನಿರ್ವಾಹಕ ನಿರ್ದೇಶಕ ಡಿ.ಮಹೇಶ್ ಕುಮಾರ್, ಉಪನಿರ್ದೇಶಕರಾದ ರೋಷನಿ ಹಾಗೂ ಇನ್ನಿತರರು ಬೀಳ್ಕೊಟ್ಟರು.

ಶಾಲಾ ಶಿಕ್ಷಣ ಪದಾಧಿಕಾರಿಗಳ ಕಾರ್ಯಾಗಾರ



ಮೈಸೂರಿನ ಹೆಬ್ಬಾಳು ರಿಂಗ್‌ರೋಡ್‌ನ ಖಾಸಗಿ ಹೋಟೆಲ್‌ನಲ್ಲಿ ಮೈಸೂರು ಮತ್ತು ಮಂಡ್ಯ ಜಿಲ್ಲಾ ಶಾಲಾ ಶಿಕ್ಷಣ ಪದಾಧಿಕಾರಿಗಳ ಕಾರ್ಯಾಗಾರ ನಡೆಯಿತು.

ಮೈಸೂರು,ಫೆ.27–ಅಸೋಸಿಯೇಷನ್ ಆಫ್ ಅಲೈಯನ್ಸ್ ಕ್ಲಬ್ ಇಂಟರ್‌ನ್ಯಾಷನಲ್ ಮೈಸೂರು ಜಿಲ್ಲೆ 255 ಮತ್ತು ಮಂಡ್ಯ ಜಿಲ್ಲೆ 268 (ದಕ್ಷಿಣ) ಈ ಎರಡು ಜಿಲ್ಲೆಗಳ ಪದಾಧಿಕಾರಿಗಳಿಗೆ ಶಾಲಾ ಶಿಕ್ಷಣ (ಸ್ಕೂಲಿಂಗ್) ಒಂದು ದಿನದ ಕಾರ್ಯಾಗಾರವನ್ನು ಇತ್ತೀಚೆಗೆ ಮೈಸೂರಿನ ಹೆಬ್ಬಾಳು ರಿಂಗ್‌ರೋಡ್‌ನ ಖಾಸಗಿ ಹೋಟೆಲ್‌ನಲ್ಲಿ ಆಯೋಜಿಸಲಾಗಿತ್ತು.

ಕಾರ್ಯಕ್ರಮದ ಉದ್ಘಾಟನೆಯನ್ನು ಅಂತರರಾಷ್ಟ್ರೀಯ ನಿರ್ದೇಶಕರಾದ (ಎಐಸಿಐ) ಡಾ.ಅಲೈ ನಾಗರಾಜ್ ವಿ.ಭೈರಿ ನೆರವೇರಿಸಿದರು. ಈ ಸಂದರ್ಭದಲ್ಲಿ ಮಾಜಿ ಅಂತರರಾಷ್ಟ್ರೀಯ ನಿರ್ದೇಶಕರಾದ ಅಲೈ ದಿವಾಕರ್ ಹಾಗೂ ಇಂಟರ್‌ನ್ಯಾಷನಲ್ ಕಮಿಟಿ ಚೇರ್‌ಮನ್‌ಗಳಾದ ಅಲೈ ಮುನಿಯಪ್ಪ, ಅಲೈ ಅಜಂತ ರಂಗಸ್ವಾಮಿ, ಮೈಸೂರು ಜಿಲ್ಲೆ 255ರ ರಾಜ್ಯಪಾಲರಾದ ಅಲೈ ನಂಜುಂಡಸ್ವಾಮಿ ಹಾಗೂ ಒಂದನೇ ಉಪ ರಾಜ್ಯಪಾಲರಾದ ಅಲೈ ಸಿರಿಬಾಲು, ಎರಡನೇ ಉಪ ರಾಜ್ಯಪಾಲರಾದ ಎಸ್.ವೆಂಕಟೇಶ್, ಜಿಲ್ಲಾ ಸಂಪುಟ ಕಾರ್ಯದರ್ಶಿ ಎಂ.ಎಸ್.ಸಂತೋಷ್‌ಕುಮಾರ್, ಜಿಲ್ಲಾ ಸಂಪುಟ ಖಜಾಂಚಿ ಎನ್.ಗಂಗಾಧರಪ್ಪ, ಪಿಆರ್‌ಓ ಟಿ.ಎಸ್.ರವೀಂದ್ರನಾಥ್ ಇವರುಗಳು ಉಪಸ್ಥಿತರಿದ್ದರು.

ಈ ಕಾರ್ಯಾಗಾರದಲ್ಲಿ ಸುಮಾರು 110ಕ್ಕೂ ಹೆಚ್ಚು ಪದಾಧಿಕಾರಿಗಳು ಪಾಲ್ಗೊಂಡು ಇದರ ಸದುಪಯೋಗ ಪಡೆದರು. ಇದೇ ಸಂದರ್ಭದಲ್ಲಿ ಮಂಡ್ಯ ಜಿಲ್ಲೆಯ 268ರ ರಾಜ್ಯಪಾಲರಾದ ಕೆ.ಟಿ. ಹನುಮಂತು, ಹಾಗೂ ಒಂದನೇ ಉಪ ರಾಜ್ಯಪಾಲರಾದ ಮಾದೇಗೌಡ, ಎರಡನೇ ಉಪರಾಜ್ಯಪಾಲ ಶಶಿಧರ್ ಈಚ್ಗೆರೆ ಹಾಗೂ ಸಂಪುಟ ಕಾರ್ಯದರ್ಶಿ ಆರ್.ರಮೇಶ್, ಸಂಪುಟ ಖಜಾಂಚಿ ಕೆ.ಜಿ.ಚಂದ್ರಶೇಖರ್, ಪಿಆರ್‌ಓ ಅಪ್ಪಾಜಿ ಉಪಸ್ಥಿತರಿದ್ದರು.

ಶ್ರೀ ಅರ್ಧನಾರೀಶ್ವರಸ್ವಾಮಿ ದೇವಸ್ಥಾನ ಉದ್ಘಾಟನೆ



ಮೈಸೂರು,ಫೆ.27–ಮೈಸೂರಿನ ಹೆಬ್ಬಾಳು ಲೋಕನಾಯಕನಗರದಲ್ಲಿನ 8ನೇ ಕ್ರಾಸ್‌ನಲ್ಲಿ ನಿರ್ಮಿಸಿರುವ ಶ್ರೀ ಅರ್ಧನಾರೀಶ್ವರ ಸ್ವಾಮಿ ದೇವಸ್ಥಾನವನ್ನು ಉದ್ಘಾಟಿಸಲಾಯಿತು.

ಶ್ರೀ ಶಿವಪಾರ್ವತಿ ಸೇವಾ ಟ್ರಸ್ಟ್ ವತಿಯಿಂದ ಶ್ರೀ ಮಹಾಗಣಪತಿ, ಶ್ರೀ ಸುಬ್ರಮಣ್ಯೇಶ್ವರ ಸಹಿತ ನಿರ್ಮಿಸಿರುವ ಶ್ರೀ ಅರ್ಧನಾರೀಶ್ವರಸ್ವಾಮಿ ದೇವಸ್ಥಾನವನ್ನು ಆದಿಚುಂಚನಗಿರಿ ಶಾಖಾಮಠದ ಶ್ರೀ ಸೋಮೇಶ್ವರನಾಥ ಸ್ವಾಮೀಜಿ ಉದ್ಘಾಟಿಸಿದರು. ಶ್ರೀ ಅರ್ಧನಾರೀಶ್ವರಸ್ವಾಮಿಯ ವಿಗ್ರಹ, ಕಳಸ ಪ್ರತಿಷ್ಠಾಪನೆ ಹಾಗೂ ವಿಶೇಷ ಪೂಜೆ ನೆರವೇರಿಸುವ ಮೂಲಕ ದೇವಸ್ಥಾನ ಉದ್ಘಾಟಿಸಲಾಯಿತು. ಬಳಿಕ ನೂರಾರು ಭಕ್ತರಿಗೆ ಪ್ರಸಾದ ವಿನಿಯೋಗ ಮಾಡಲಾಯಿತು. ಇದೇ ವೇಳೆ ಶ್ರೀ ಕೆಂಡಗಣ್ಣಸ್ವಾಮಿ ಗದ್ದಿಗೆ ಕ್ಷೇತ್ರದ ಕೆಂಡಗಣ್ಣ ಗುಡ್ಡಪ್ಪ, ಹುಣಸೂರು ಕ್ಷೇತ್ರದ ಶಾಸಕ ಜಿ.ಡಿ.ಹರೀಶ್‌ಗೌಡ, ಮಾಜಿ ಶಾಸಕ ಎಲ್.ನಾಗೇಂದ್ರ, ನಗರಪಾಲಿಕೆ ಮಾಜಿ ಸದಸ್ಯರಾದ ಪೈಲ್ವಾನ್ ಶ್ರೀನಿವಾಸ್, ರಮೇಶ್, ಸಂಜೀವಿನಿ ಸಂಘದ ಅಧ್ಯಕ್ಷ ಕುಮಾರ್, ಅರುಣ್‌ಕುಮಾರ್, ಕೆಆರ್.ಪೇಟೆ ರಮೇಶ್, ಜಯನಗರ ವಸಂತಣ್ಣ, ಶ್ರೀಧರ್, ನಾರಾಯಣಪ್ಪ, ಸಂಬಾಜೀ ರಾವ್ ಶಾಸ್ತ್ರಿ, ಕೆ.ಜಿ.ಕೊಪ್ಪಲು ರೇವಣ್ಣ, ಶ್ರೀ ಶಿವಪಾರ್ವತಿ ಸೇವಾ ಟ್ರಸ್ಟ್ ಗೌರವಾಧ್ಯಕ್ಷ ಲಾರಿ ಭೈರಪ್ಪ, ಅಧ್ಯಕ್ಷ ಶ್ರೀನಿವಾಸ್, ಪ್ರಧಾನ ಕಾರ್ಯದರ್ಶಿ ಪಂಚಾಕ್ಷರಿ, ಸಹಕಾರ್ಯದರ್ಶಿ ನವೀನ, ಸಂಘಟನಾ ಕಾರ್ಯದರ್ಶಿ ಕೆ.ಕುಮಾರ್, ಖಜಾಂಚಿ ಬಿ.ಪ್ರಕಾಶ್ ಮತ್ತಿತರರು ಉಪಸ್ಥಿತರಿದ್ದರು.

ಮೀನುಗಾರಿಕೆಯಿಂದ ಆರ್ಥಿಕ ಸ್ವಾವಲಂಬನೆ ಸಾಧ್ಯ

ತರಬೇತಿ ಕಾರ್ಯಕ್ರಮದಲ್ಲಿ ಮೀನುಗಾರಿಕೆ ಇಲಾಖೆ ಉಪನಿರ್ದೇಶಕ ಮಂಜುನಾಥ್ ಅಭಿಮತ

ಮೈಸೂರು, ಫೆ.27– ಮೀನುಗಾರಿಕೆಗೆ ವ್ಯಾಪಕ ಮಾರುಕಟ್ಟೆ ಇದ್ದು, ವ್ಯವಸಾಯಕ್ಕೆ ಯೋಗ್ಯವಲ್ಲದ ಭೂಮಿಯಲ್ಲಿ ಮೀನುಗಾರಿಕೆ ಮಾಡುವುದರಿಂದ ಆರ್ಥಿಕವಾಗಿ ಸ್ವಾವಲಂಬನೆ ಸಾಧ್ಯ ಎಂದು ಮೀನುಗಾರಿಕೆ ಇಲಾಖೆ ಉಪ ನಿರ್ದೇಶಕ ಜಿ.ಹೆಚ್.ಮಂಜುನಾಥ್ ಹೇಳಿದರು.

ಮೀನುಗಾರಿಕೆ ಇಲಾಖೆ ಸಹಯೋಗದೊಂದಿಗೆ ಶ್ರೀ ಗಂಗಾ ಚಾರಿಟೇಬಲ್ ಟ್ರಸ್ಟ್ ವತಿಯಿಂದ ಆಯೋಜಿಸಿದ್ದ 'ಒಳನಾಡು ಮೀನು ಕೃಷಿಕೊಳ ನಿರ್ಮಾಣ ಹಾಗೂ ಸಾಕಾಣಿಕೆ', 'ಮೀನುಮರಿ ಪಾಲನೆ, ಕೊಳಗಳ ನಿರ್ಮಾಣ ಹಾಗೂ ಸಾಕಾಣಿಕೆ' ಮತ್ತು ಅಲಂಕಾರಿಕ ಮೀನು ಕೃಷಿ ಮತ್ತು ಮಾರಾಟ ಮಳಿಗೆ ಉದ್ಯಮ' ಕುರಿತ ಎರಡು ದಿನಗಳ ತರಬೇತಿ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಸಬ್ಸಿಡಿಯೊಂದಿಗೆ ಮೀನುಗಾರಿಕೆ ಉದ್ದಿಮೆ ಆರಂಭಿಸಿ ಸ್ವಾವಲಂಬಿಗಳಾಗಿ ಎಂದು ಕರೆ ನೀಡಿದರು.

ಸಾಮಾನ್ಯ ವರ್ಗದವರಿಗೆ ಶೇ.40ರಷ್ಟು, ಮಹಿಳೆಯರು, ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದವರಿಗೆ ಶೇ.60ರಷ್ಟು ಸಬ್ಸಿಡಿ ನೀಡಲಾಗುವುದು. ಸಬ್ಸಿಡಿ ಹಣದೊಂದಿಗೆ ತಮ್ಮಲ್ಲಿರುವ ಆರ್ಥಿಕ ಸಂಪನ್ಮೂಲವನ್ನು ಬಳಸಿಕೊಂಡು ಉತ್ತಮ ಗುಣಮಟ್ಟದ ಮೀನುಗಾರಿಕೆ ಉದ್ಯಮ ಆರಂಭಿಸಬಹುದಾಗಿದೆ. ಮೀನುಗಾರಿಕೆಯೂ ಸಮಗ್ರ ಕೃಷಿ ಬೇಸಾಯದಲ್ಲಿ ಒಂದಾಗಿದ್ದು, ಕೃಷಿಯೊಂದಿಗೆ ಪರ್ಯಾಯವಾಗಿ ಆದಾಯ ತರುವ ಮೂಲವಾಗಿದೆ ಎಂದರು.



ಮೀನುಗಾರಿಕೆ ಇಲಾಖೆ ಸಹಯೋಗದೊಂದಿಗೆ ಶ್ರೀ ಗಂಗಾ ಚಾರಿಟೆಬಲ್ ಟ್ರಸ್ಟ್ ವತಿಯಿಂದ ಆಯೋಜಿಸಿದ್ದ ಎರಡು ದಿನಗಳ ತರಬೇತಿ ಕಾರ್ಯಕ್ರಮವನ್ನು ಮೀನುಗಾರಿಕೆ ಇಲಾಖೆ ಉಪ ನಿರ್ದೇಶಕ ಜಿ.ಹೆಚ್.ಮಂಜುನಾಥ್ ಉದ್ಘಾಟಿಸಿದರು.

ಮತ್ಸ್ಯಗಿರಿ ಮೀನು ಉತ್ಪಾದಕ ಕಂಪನಿಯ ನಂಜೇಗೌಡ ಮಾತನಾಡಿ, ಮೀನುಗಾರಿಕೆಯಿಂದ ಕಬಾಬ್ ಕ್ರಾಂತಿಯಾಗಿದೆ. ಎಲ್ಲಿ ನೋಡಿದರೂ ಬೋನ್‌ಲೆಸ್ ಫಿಶ್ ಕಬಾಬ್ ದೊರೆಯಲಿದ್ದು, ಸಾಕಷ್ಟು ಜನರು ಇದನ್ನೇ ಉದ್ಯಮವನ್ನಾಗಿ ಮಾಡಿಕೊಂಡು ಉತ್ತಮವಾಗಿ ಜೀವನ ನಡೆಸುತ್ತಿದ್ದಾರೆ. ರಾಜ್ಯದಲ್ಲಿ ಮೀನುಗಾರಿಕೆ ಶೇ.20ರಷ್ಟಿದ್ದು, ಇನ್ನುಳಿದ ಶೇ.80ರಷ್ಟು ಆಂಧ್ರಪ್ರದೇಶದಿಂದ ಬರಲಿದೆ. ಆದ್ದರಿಂದ ಮೀನುಗಾರಿಕೆಗೆ ಸರ್ಕಾರ ಹೆಚ್ಚಿನ ಆದ್ಯತೆ ನೀಡಬೇಕು. ಅದರಂತೆ ನಿರುದ್ಯೋಗಿ ಯುವಕ–ಯುವತಿಯರು, ಪಾಳು ಜಮೀನು ಹೊಂದಿರುವ ರೈತರು ಮೀನುಗಾರಿಕೆಯಿಂದ ಒಳ್ಳೆಯ ಲಾಭ ಪಡೆಯಬಹುದಾಗಿದೆ ಎಂದು ಹೇಳಿದರು.

ಕೌಶಲ್ಯಾಭಿವೃದ್ಧಿ ಇಲಾಖೆ ಸಹಾಯಕ ನಿರ್ದೇಶಕ ಸಿ.ಎಸ್.ಸುದರ್ಶನ್, ಅಲಂಕಾರಿಕ ಮೀನು ಕೃಷಿ ಮತ್ತು ಮಾರಾಟ ಮಳಿಗೆ ಉದ್ಯಮ ಕುರಿತು ಮಾಹಿತಿ ನೀಡಿದರು. ಮೀನುಗಾರಿಕೆ ಇಲಾಖೆ ಸಹಾಯಕ ನಿರ್ದೇಶಕರಾದ ಸಿ.ಎನ್. ಭವಾನಿ, ಎಲ್.ಯೋಗೇಶ್, ಕೆ.ಬಿ.ಶ್ವೇತ, ಕೃಷಿ ಇಲಾಖೆ ನಿವೃತ್ತ ಉಪನಿರ್ದೇಶಕ ಕೆ.ಕಾಮಯ್ಯ, ಕೆಎಂಎಫ್ ನಿವೃತ್ತ ಹೆಚ್ಚುವರಿ ನಿರ್ದೇಶಕ ಶಿವಾನಂದ್ ಎಸ್. ಆಲೂರ್, ತೋಟಗಾರಿಕೆ ಇಲಾಖೆ ನಿವೃತ್ತ ಅಧಿಕಾರಿ ಎಂ.ಮರಿಗೌಡ, ಶ್ರೀ ಗಂಗಾ ಚಾರಿಟಬಲ್ ಟ್ರಸ್ಟ್ ಮುಖ್ಯಸ್ಥ ರಾಜ್ ಕಾಮಯ್ಯ, ಕಾರ್ಯದರ್ಶಿ ಎಂ.ದಿವ್ಯಶ್ರೀ, ಸಂಯೋಜಕ ಎಲ್.ರಾಜಣ್ಣ, ನೂರಕ್ಕೂ ಹೆಚ್ಚು ಶಿಬಿರಾರ್ಥಿಗಳು ಉಪಸ್ಥಿತರಿದ್ದರು.



ಮೈಸೂರು ತಾಲೂಕು ಕಡಕೊಳ ಪಟ್ಟಣ ಪಂಚಾಯಿತಿಯಲ್ಲಿ ಮಂಡಿಸಲಾದ 2023–25ನೇ ಸಾಲಿನ 12.63 ಲಕ್ಷ ರೂ.ಗಳ ಉಳಿತಾಯ ಬಜೆಟ್ ಮಂಡನೆಯನ್ನು ಪಪಂ ಆಡಳಿತಾಧಿಕಾರಿ ಹಾಗೂ ತಹಸಿಲ್ದಾರ್ ಕೆ.ಎಂ.ಮಹೇಶ್‌ಕುಮಾರ್ ಅಧ್ಯಕ್ಷತೆಯಲ್ಲಿ ಅನುಮೋದಿಸಲಾಯಿತು. ಸಭೆಯಲ್ಲಿ ಪ.ಪಂ ಮುಖ್ಯಾಧಿಕಾರಿ ದೀಪಾ, ಲೆಕ್ಕಿಗ ಸತೀಶ್‌ಕುಮಾರ್ ಉಪಸ್ಥಿತರಿದ್ದರು.

ಸಿಐಐ, ಮೈಸೂರು ವಲಯ ನೂತನ ಪದಾಧಿಕಾರಿಗಳು





ಮೈಸೂರು,ಫೆ. 27– ಕಾನ್ಫಡರೇಷನ್ ಆಫ್ ಇಂಡಿಯನ್ ಇಂಡಸ್ಟ್ರೀಸ್ (ಸಿಐಐ), ಮೈಸೂರು ವಲಯ ಮಂಡಳಿಯ 2024–25ನೇ ಸಾಲಿನ ಅಧ್ಯಕ್ಷರಾಗಿ ವಿ.ಈಶ್ವರ ರಾವ್, ಉಪಾಧ್ಯಕ್ಷರಾಗಿ ಸಂತೋಷ್ ಗುಂಡಪಿ ಆಯ್ಕೆಯಾಗಿದ್ದಾರೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

28.2.2024 ಬುಧವಾರ, ಮಳೆ ನಕ್ಷತ್ರ: ಶತಭಿಷ 20.2.2024ರಿಂದ 03.03.2024
ಶ್ರೀ ಶೋಭಕೃತ್ ನಾಮ ಸಂವತ್ಸರ, ಉತ್ತರಾಯಣ, ಶಿಶಿರ ಋತು, ಮಾಘ ಮಾಸ,
ಕೃಷ್ಣ ಪಕ್ಷ, ತಿಥಿ: ಚೌತಿ, ನಕ್ಷತ್ರ: ಚಿತ್ತ, ರಾಹುಕಾಲ: ಮಧ್ಯಾಹ್ನ 12 ರಿಂದ 1.30ರವರೆಗೆ

■ **ರಾಮ್‌ಸನ್ಸ್ ಬೊಂಬೆ ಮನೆ :** ದಸರೆ ಬೊಂಬೆ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯ ರಸ್ತೆ, ಬೆಳಗ್ಗೆ 10ರಿಂದ ಸಂಜೆ 7ರವರೆಗೆ.

■ **ಕರ್ನಾಟಕ ರಾಜ್ಯ ಎಸ್ಸಿ, ಎಸ್‌ಟಿ ಪತ್ರಿಕಾ ಸಂಪಾದಕರ ಸಂಘ, ಬೆಂಗಳೂರು:** ಸುದ್ದಿ ಮಾಧ್ಯಮ ಕ್ಷೇತ್ರದಲ್ಲಿ ದಲಿತರ ಉದ್ಯಮಶೀಲತೆ ಮತ್ತು ಸವಾಲುಗಳು ಕುರಿತು ವಿಚಾರ ಸಂಕಿರಣ, ಉದ್ಘಾಟನೆ: ಕೆಪಿಸಿಸಿ ಮಹಿಳಾ ಕಾಂಗ್ರೆಸ್ ಸಮಿತಿ ಅಧ್ಯಕ್ಷೆ ಡಾ.ಪುಷ್ಪಾ ಅಮರನಾಥ್, ವಿಚಾರ ಮಂಡನೆ: ಪತ್ರಕರ್ತ ಕೆ.ದೀಪಕ್, ಅಧ್ಯಕ್ಷತೆ: ಸಂಘದ ಅಧ್ಯಕ್ಷ ಚೆಲುವರಾಜು, ಉಪಸ್ಥಿತರು: ಪೊಲೀಸ್ ಆಯುಕ್ತ ಬಿ.ರಮೇಶ್, ಸಂಘದ ಪ್ರಧಾನ ಕಾರ್ಯದರ್ಶಿ ಸೋಮಶೇಖರ ಕೆರಗೋಡು, ಸ್ಥಳ: ಚಿತ್ರವನ ರೆಸಾರ್ಟ್, ಹೆಚ್.ಡಿ.ಕೋಟೆ ರಸ್ತೆ, ಬೆಳಗ್ಗೆ 10.15ಕ್ಕೆ.

■ **ಬಾಸುದೇವ ಸೋಮಾನಿ ಕಾಲೇಜು:** ನೈರ್ಮಲ್ಯ ಮತ್ತು ಆರೋಗ್ಯ ರಕ್ಷಣೆ ಕುರಿತು ವಿಶೇಷ ಉಪನ್ಯಾಸ, ಉದ್ಘಾಟನೆ: ಇನ್‌ಸ್ಟಿಟ್ಯೂಷನ್ ಆಫ್ ಎಜುಕೇಷನ್ ಟ್ರಸ್ಟ್ ಅಧ್ಯಕ್ಷ ಡಾ.ಎಂ.ಪುಟ್ಟಸ್ವಾಮಿ, ಸಂಪನ್ಮೂಲ ವ್ಯಕ್ತಿ: ಡಾ.ಎಂ.ಶ್ರುತಿ, ಮುಖ್ಯ ಅತಿಥಿಗಳು: ಕಾರ್ಯದರ್ಶಿ ಕುಬೇರ್ ಪಿ.ಗೌಡ, ಪಿ. ಗೀತಾಂಜಲಿ, ಎಸ್.ಪ್ರಭಾ, ಅಧ್ಯಕ್ಷತೆ: ಕಾಲೇಜು ಪ್ರಿನ್ಸಿಪಾಲ್ ಡಾ.ಮಹದೇವಸ್ವಾಮಿ, ಸ್ಥಳ: ಕಾಲೇಜು ಆವರಣ, ಬೆಳಗ್ಗೆ 10.30ಕ್ಕೆ.

■ **ಮೈಸೂರು ವಿಶ್ವವಿದ್ಯಾನಿಲಯ:** ರಾಷ್ಟ್ರೀಯ ವಿಜ್ಞಾನ ದಿನಾಚರಣೆ, ಶಿವಮೊಗ್ಗ ಕುವೆಂಪು ವಿಶ್ವವಿದ್ಯಾನಿಲಯ ವಿಶ್ರಾಂತ ಕುಲಪತಿ ಪ್ರೊ.ಕೆ.ಚಿದಾನಂದಗೌಡ ಅವರಿಂದ ಕೃತಕ ಬುದ್ಧಿವಂತಿಕೆ: ಒಂದು ಪಕ್ಷಿನೋಟ ಕುರಿತು ಉಪನ್ಯಾಸ, ಅಧ್ಯಕ್ಷತೆ: ಮೈಸೂರು ವಿಶ್ವವಿದ್ಯಾನಿಲಯ ಕುಲಪತಿ ಪ್ರೊ.ಎನ್.ಕೆ. ಲೋಕನಾಥ್, ಸ್ಥಳ: ಕ್ರಾಫರ್ಡ್ ಭವನ, ಮೈಸೂರು ವಿವಿ, ಬೆಳಗ್ಗೆ 11ಕ್ಕೆ.

■ **ಮೈಸೂರು ಸೈನ್ಸ್ ಫೌಂಡೇಷನ್ :** ರಾಷ್ಟ್ರೀಯ ವಿಜ್ಞಾನ ದಿನದ ಅಂಗವಾಗಿ ರಾಷ್ಟ್ರ ಮಟ್ಟದ ವೆಬಿನಾರ್ ಸರಣಿ ಉಪನ್ಯಾಸ, ಮಹಾರಾಜ ಸರ್ಕಾರಿ ಪಿಯು ಕಾಲೇಜು ಪ್ರಾಧ್ಯಾಪಕ ಮತ್ತು ಸಂಶೋಧಕ ಡಾ. ಎ.ಎನ್.ಸಂತೋಷ್ ಕನ್ನಡ ಅವರಿಂದ ಭಾರತೀಯ ವಿಜ್ಞಾನ ಮತ್ತು ಸರ್ ಸಿ.ವಿ.ರಾಮನ್ ಕುರಿತು ಉಪನ್ಯಾಸ, ವೆಬಿನಾರ್ : https://bit.ly/3www9EDk

■ **ಮೈಸೂರು–ಚಾಮರಾಜನಗರ ಜಿಲ್ಲೆಗಳ ರಸಗೊಬ್ಬರ ಬಿತ್ತನೆ ಬೀಜ ಹಾಗೂ ಕ್ರಿಮಿನಾಶಕ ಮಾರಾಟಗಾರರ ಸಂಘ:** ಜಿಲ್ಲಾ ಮಟ್ಟದ ವಾರ್ಷಿಕ ಸಮಾವೇಶ, ಉದ್ಘಾಟನೆ: ಕೃಷಿ ಸಚಿವ ಎನ್.ಚೆಲುವರಾಯಸ್ವಾಮಿ, ಮುಖ್ಯ ಅತಿಥಿಗಳು: ಕೃಷಿ ಇಲಾಖೆ ಜಂಟಿ ನಿರ್ದೇಶಕರಾದ ಡಾ.ಚಂದ್ರಶೇಖರ್, ಡಾ.ಆಬೀದ್, ಡಾ.ಮಧುಸೂದನ್, ತೋಟಗಾರಿಕೆ ಇಲಾಖೆ ಜಂಟಿ ನಿರ್ದೇಶಕ ಡಾ.ನಾಗರಾಜ್, ಅಧ್ಯಕ್ಷತೆ: ಸಂಘದ ಅಧ್ಯಕ್ಷ ಶಿವಪ್ರಕಾಶ್, ಗೌರವಾಧ್ಯಕ್ಷ ನಂಜಪ್ಪ, ಸ್ಥಳ: ಶ್ರೀಧಾಮ ಹಾಲ್, ಇಸ್ಕಾನ್, ಜಯನಗರ, ಬೆಳಗ್ಗೆ 10.30ಕ್ಕೆ.

■ **ಕೇಂದ್ರೀಯ ಪೆಟ್ರೋಕೆಮಿಕಲ್ಸ್ ಇಂಜಿನಿಯರಿಂಗ್ ಮತ್ತು ತಂತ್ರಜ್ಞಾನ ಸಂಸ್ಥೆ, ಕೌಶಲ್ಯ ಮತ್ತು ತಾಂತ್ರಿಕ ನೆರವು ಕೇಂದ್ರ, ರಸಾಯನ ಪೆಟ್ರೋರಸಾಯನ ಮತ್ತು ರಸಗೊಬ್ಬರ ಇಲಾಖೆ:** ಹಿಂದುಳಿದ ವರ್ಗಗಳ ವಿದ್ಯಾರ್ಥಿನಿಲಯದ ಉದ್ಘಾಟನಾ ಸಮಾರಂಭ, ವರ್ಚ್ಯುಯಲ್ ಮೂಲಕ ಉದ್ಘಾಟನೆ: ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಸಚಿವಾಲಯದ ಕೇಂದ್ರ ಸಚಿವ ಡಾ.ವೀರೇಂದ್ರಕುಮಾರ್, ಉಪಸ್ಥಿತರು: ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಸಚಿವಾಲಯ ರಾಜ್ಯ ಸಚಿವರಾದ ರಾಮದಾಸ್ ಅಥವಾಲೆ, ಎ.ನಾರಾಯಣಸ್ವಾಮಿ, ಪ್ರತಿಮಾ ಭೂಮಿಕ, ಸಂಸದ ಪ್ರತಾಪ್ ಸಿಂಹ, ಶಾಸಕ ಜಿ.ಟಿ.ದೇವೇಗೌಡ, ಮಧ್ಯಾಹ್ನ 1ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10ಕ್ಕೆ ಚಾಯ್ಸ್ ಈಕ್ವಿಟಿ ಗಳಿಕೆ–ಉಳಿಕೆ–ಹೂಡಿಕೆ–ಹಣಕಾಸಿನ ಮಾಹಿತಿಯ ಬಾನುಲಿ ಸರಣಿ, ಪ್ರಸ್ತುತಿ– ಮೂಕನಹಳ್ಳಿ ರಂಗಸ್ವಾಮಿ, 6.40 ಪದ ಸಂಸ್ಕೃತಿ–ಡಾ. ಹೆಚ್.ವಿ. ನಾಗರಾಜರಾವ್, 6.50 ರೈತರಿಗೆ ಸಲಹೆ, 7.15 ಆರೋಗ್ಯವಾಣಿ–ಪ್ರಾಯೋಜಿತ ಕಾರ್ಯಕ್ರಮ, 9.00 ವೃತ್ತಿ ಮಾರ್ಗದರ್ಶನ "ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ" ವಿಷಯದಲ್ಲಿ ಇರುವ ಅಧ್ಯಯನ ಮತ್ತು ವೃತ್ತಿಪರ ಅವಕಾಶಗಳು ಕುರಿತು ಡಾ. ಸಪ್ನಾ ಎಂ.ಎಸ್.ಅವರೊಂದಿಗೆ ಮಾತುಕತೆ, 10.00 ಉಸ್ತಾದ್ ಬಡೇಗುಲಾಂ ಖಾನ್–ಹಾಡುಗಾರಿಕೆ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ

ಮಧ್ಯಾಹ್ನ: 12.30 ದೇವರನಾಮ–ಎಂ.ಎ.ಶೋಭ, 12.45 ಜನಪದ ಸಂಗೀತ, 1.20 ಭಾವಗೀತೆಗಳು–ಸ್ಟ್ಯಾನ್ಲೀ ಪಾರ್ಕರ್, 3.00 ವಿ. ದೇಶಿಕಾಚಾರ್–ವೇಣುವಾದನ, 4.00 ಮಹಿಳಾರಂಗ–ಸ್ತ್ರೀ ಚೇತನ –ಭಾಗವಹಿಸುವವರು ಮಣ್ಣಿನ ಮಡಿಕೆಗಳನ್ನು ತಯಾರಿಸುವ ಗೀತಾ ವೈ.ಡಿ., ಪ್ರಸ್ತುತಿ– ಅಬ್ದುಲ್ ರಶೀದ್, 4.45 ಹಿಂದಿ ಪಾಠ, ಪ್ರಸ್ತುತಿ– ಡಾ. ಜಯಂತಿ ಪ್ರಸಾದ್ ನೌಟಿಯಾಲ್, 6.50 ಕೃಷಿರಂಗ–ಸಾವಯವ ಕೃಷಿಯ ಪ್ರಾಮುಖ್ಯತೆ ಕುರಿತು ಸಂವಾದ. ಭಾಗವಹಿಸುವವರು ಎನ್. ವೆಂಕಟೇಶ್ ಹಾಗೂ ವಿ. ಅನಘಾ, 8.00 ಕ್ಷಿತಿಜ–ಸಾಹಿತ್ಯ ಸಾಧಕರೊಂದಿಗೆ ಸಂವಾದ, 9.30 ಹಿಂದೂಸ್ಥಾನಿ ಸಂಗೀತ, ಅಲ್ಲಾಉದ್ದೀನ್ ಖಾನ್ ಸಾಹೇಬ್– ಸರೋಡ್ ವಾದನ, 10.00 ಹಳ್ಳೀಹಾಡು, 10.30 ಸವಿನೆನಪು

ಬಾಲ ಕಾರ್ಮಿಕ ಪದ್ಧತಿ ತಡೆಗಟ್ಟುವ ನಿಟ್ಟಿನಲ್ಲಿ ಅಧಿಕಾರಿಗಳು ಕಾರ್ಯನಿರ್ವಹಿಸಿ

ಮೈಸೂರು ಜಿಪಂ ಸಿಇಓ ಕೆ.ಎಂ.ಗಾಯತ್ರಿ ಸಲಹೆ



ಮೈಸೂರು, ಫೆ.27–ಬಾಲಕಾರ್ಮಿಕ ಪದ್ಧತಿ ಕಂಡು ಬಂದರೆ ಅದಕ್ಕೆ ಸಂಬಂಧಿಸಿದವರ ವಿರುದ್ಧ ಕಾನೂನು ರೀತಿ ಕ್ರಮ ಕೈಗೊಳ್ಳುವುದರ ಮೂಲಕ ಅಧಿಕಾರಿಗಳು ಬಾಲಕಾರ್ಮಿಕ ಪದ್ಧತಿ ತಡೆಗಟ್ಟುವ ನಿಟ್ಟಿನಲ್ಲಿ ಕಾರ್ಯ ನಿರ್ವಹಿಸಬೇಕು ಎಂದು ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಾದ ಕೆ.ಎಂ.ಗಾಯತ್ರಿ ತಿಳಿಸಿದರು. ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ಕಾರ್ಮಿಕ ಇಲಾಖೆ ಹಾಗೂ ಬಾಲಕಾರ್ಮಿಕ ಯೋಜನಾ ಸೊಸೈಟಿ ವತಿಯಿಂದ ಹಮ್ಮಿಕೊಂಡಿದ್ದ ಜಿಲ್ಲಾ ಕಾರ್ಯಕಾರಿ ಹಾಗೂ ಕಾರ್ಯಪಡೆ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ಬಾಲಕಾರ್ಮಿಕ ಪದ್ಧತಿಯಲ್ಲಿ ತೊಡಗಿರುವ ಮಕ್ಕಳನ್ನು ಗುರುತಿಸಿ ಅವರನ್ನು ಶಾಲೆಗೆ ಸೇರಿಸಿ ಸಮಾಜದ ಮುಖ್ಯವಾಹಿನಿಗೆ ತರಬೇಕು ಎಂದರು.

ಬೀದಿಬದಿ ವ್ಯಾಪಾರದಲ್ಲಿ ತೊಡಗಿರುವ ಮಕ್ಕಳು ಹಾಗೂ ಭಿಕ್ಷಾಟನೆಯಲ್ಲಿ ತೊಡಗಿರುವ ಮಕ್ಕಳು ಕಂಡುಬಂದರೆ ಕಾನೂನು ರೀತಿ ಕ್ರಮ ವಹಿಸಬೇಕು. ಬಾಲಕಾರ್ಮಿಕ ಪದ್ಧತಿ ನಿಷೇಧ ಕುರಿತು ಅರಿವು ಮೂಡಿಸಬೇಕು. ಹೋಬಳಿವಾರು ರಚಿಸಿರುವ ತಂಡಗಳಲ್ಲಿ ಬಾಲ್ಯಾವಸ್ಥೆ ಹಾಗೂ ಕಿಶೋರಾವಸ್ಥೆ ಕಾರ್ಮಿಕರ ತಪಾಸಣೆ ನಡೆಸಬೇಕು. ತಾಲೂಕು ಮಟ್ಟದಲ್ಲಿ ಸಭೆಯನ್ನು ನಡೆಸಿ ಪ್ರಗತಿ ಪರಿಶೀಲನೆ ನಡೆಸಬೇಕು ಎಂದರು. ಅನಿರೀಕ್ಷಿತ ತಪಾಸಣೆಯಲ್ಲಿ ಪತ್ತೆಯಾದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಮಕ್ಕಳಿಗೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಉಪಯೋಜನೆಯಡಿ ಆಹಾರ ಧಾನ್ಯದ ಕಿಟ್‌ಗಳನ್ನು ವಿತರಿಸಬೇಕು ಎಂದು ಅಧಿಕಾರಿಗಳಿಗೆ ಸೂಚನೆ ನೀಡಿದರು.

ಸಭೆಯಲ್ಲಿ ಕಾರ್ಮಿಕ ಇಲಾಖೆಯ ಅಧಿಕಾರಿಗಳು ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು ಉಪಸ್ಥಿತರಿದ್ದರು.

ಲೋಕಸಭಾ ಚುನಾವಣಾ ಹಿನ್ನೆಲೆ

ಮೈಸೂರಲ್ಲಿ ರೌಡಿಶೀಟರ್‌ಗಳ ವಿರುದ್ಧ ಪ್ರಿವೆಂಟಿವ್ ಪ್ರಕರಣ ದಾಖಲು

■ ಹೆದ್ದಾರಿ, ಜಿಲ್ಲಾ ಮುಖ್ಯ ರಸ್ತೆ, ತಾಲೂಕು, ಜಿಲ್ಲಾ, ರಾಜ್ಯ ಗಡಿಯಲ್ಲಿ ಚೆಕ್‌ಪೋಸ್ಟ್ ಸ್ಥಾಪನೆ ■ ಶಸ್ತ್ರಾಸ್ತ್ರ ಡೆಪಾಸಿಟ್ ಮಾಡಿಕೊಳ್ಳಲು ಸಿದ್ಧತೆ ■ ಪೊಲೀಸ್ ಅಧಿಕಾರಿಗಳು, ಸಿಬ್ಬಂದಿಗೆ ಭದ್ರತಾ ಕರ್ತವ್ಯದ ತರಬೇತಿ

ಮೈಸೂರು, ಫೆ. 27(ಆರ್‌ಕೆ)–2024ರ ಲೋಕಸಭಾ ಚುನಾವಣೆ ಸಮೀಪಿಸುತ್ತಿರುವಂತೆಯೇ ಮೈಸೂರು ನಗರ ಮತ್ತು ಜಿಲ್ಲೆಯಾದ್ಯಂತ ಪೊಲೀಸರು ಭದ್ರತೆಗಾಗಿ ತಯಾರಿ ನಡೆಸುತ್ತಿದ್ದಾರೆ.

ಚುನಾವಣಾ ವೇಳಾಪಟ್ಟಿ ಪ್ರಕಟವಾಗುವ ಮುನ್ನವೇ ರೌಡಿಶೀಟರ್‌ಗಳ ಚಲನ–ವಲನಗಳ ಮೇಲೆ ನಿಗಾ ಇರಿಸಲಾಗಿದ್ದು, ದಾಳಿ ಮಾಡಿ ಮನೆಗಳಲ್ಲಿ ಇರಿಸಲಾಗಿರುವ ಮಾರಕಾಸ್ತ್ರ, ಬಡ್ಡಿ ಲೇವಾದೇವಿ ಸಂಬಂಧ ಬ್ಯಾಂಕ್ ಚೆಕ್, ಆನ್‌ಡಿಮಾಂಡ್ ಹಾಗೂ ಇನ್ನಿತರ ದಾಖಲೆ ಪತ್ರಗಳನ್ನು ಪೊಲೀಸರು ವಶಪಡಿಸಿಕೊಳ್ಳುತ್ತಿದ್ದಾರೆ. ಬಾರ್, ರೆಸ್ಟೋರೆಂಟ್, ವೈನ್ ಸ್ಟೋರ್, ಡಾಬಾಗಳ ಮೇಲೆ ದಾಳಿ ನಡೆಸಿ ಕುಡಿದು ಗಲಾಟೆ ಮಾಡುವ, ರಿಯಲ್ ಎಸ್ಟೇಟ್ ಮತ್ತು ಹಣಕಾಸು ವ್ಯವಹಾರದಲ್ಲಿ ಧಮ್ಕಿ ಹಾಕುವುದು, ರಾಜಕೀಯ ಸಭೆಗಳಲ್ಲಿ ಕಾಣಿಸಿಕೊಂಡು ಮುಂದಾಳತ್ವ ವಹಿಸಿಕೊಳ್ಳುವುದು, ಅಪರಾಧ ಪ್ರಕರಣಗಳಲ್ಲಿ ಭಾಗಿಯಾಗುವ ರೌಡಿಶೀಟರ್‌ಗಳ ವಿರುದ್ಧ ಮುಂಜಾಗ್ರತಾ ಪ್ರಕರಣ (ಪ್ರಿವೆಂಟಿವ್ ಕೇಸ್)ಗಳನ್ನು ದಾಖಲಿಸಲಾಗುತ್ತಿದೆ.

ಕೋರ್ಟ್‌ನಿಂದ ಜಾರಿಯಾಗುವ ವಾರಂಟ್ ತಲುಪಿಸಿ ಹಾಜರುಪಡಿಸುವುದು, ನಿರಂತರವಾಗಿ ಅಪರಾಧ ಪ್ರಕರಣಗಳಲ್ಲಿ ಭಾಗಿಯಾಗಿ ಸಮಾಜದಲ್ಲಿ ಅಶಾಂತಿ, ಆತಂಕ ಉಂಟುಮಾಡುವವರ ವಿರುದ್ಧ ಪ್ರಕರಣ ದಾಖಲಿಸಿ ಅಂತಹವರನ್ನು ಜಿಲ್ಲೆಯಿಂದ ಗಡಿಪಾರು ಮಾಡಲು ಎಲ್ಲಾ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಸಿದ್ಧತೆ ಮಾಡಿಕೊಳ್ಳಲಾಗುತ್ತಿದೆ. ಅಪರಿಚಿತರು ಹಲವು ದಿನಗಳವರೆಗೆ ಲಾಡ್ಜ್, ವಸತಿ ಗೃಹಗಳಲ್ಲಿ ಉಳಿದುಕೊಂಡಿದ್ದರೆ, ಅನುಮಾನಾಸ್ಪದ ಚಟುವಟಿಕೆಗಳು ಗಮನಕ್ಕೆ ಬಂದವರ ಮಾಹಿತಿಯನ್ನು ವ್ಯಾಪ್ತಿಯ ಠಾಣಾಧಿಕಾರಿಗಳಿಗೆ ನೀಡಬೇಕೆಂದು ಹೋಟೆಲು, ಲಾಡ್ಜ್ ಮಾಲೀಕರಿಗೆ ಸೂಚನೆ ನೀಡಲಾಗಿದೆಯಲ್ಲದೆ, ಸಿಸಿ ಕ್ಯಾಮರಾಗಳ ದೃಶ್ಯಾವಳಿಯನ್ನು ಕನಿಷ್ಠ 3 ತಿಂಗಳವರೆಗೆ ಸಂಗ್ರಹಿಸಿಟ್ಟುಕೊಳ್ಳುವಂತೆಯೂ ತಿಳಿಸಲಾಗಿದೆ. ಪರವಾನಗಿ ಪಡೆದು ಶಸ್ತ್ರಾಸ್ತ್ರ ಬಳಸು ತ್ತಿರುವವರ ಮಾಹಿತಿಯನ್ವಯ ಪಟ್ಟಿ ಮಾಡಿಕೊಳ್ಳುತ್ತಿರುವ ಪೊಲೀಸರು, ಚುನಾವಣಾ ಅಧಿಸೂಚನೆ ಪ್ರಕಟ ಗೊಂಡು ನೀತಿ ಸಂಹಿತೆ ಜಾರಿಗೆ ಬರುತ್ತಿದ್ದಂತೆಯೇ ಶಸ್ತ್ರಾಸ್ತ್ರಗಳನ್ನು ಠೇವಣಿ ಇರಿಸಿಕೊಳ್ಳಲು ಪೂರ್ವ ತಯಾರಿ ನಡೆಸುತ್ತಿದ್ದಾರೆ. ಜಿಲ್ಲಾ ಮುಖ್ಯ ರಸ್ತೆ, ರಾಜ್ಯ ಮತ್ತು ರಾಷ್ಟ್ರೀಯ ಹೆದ್ದಾರಿ, ತಾಲೂಕು, ಜಿಲ್ಲಾ ಹಾಗೂ ರಾಜ್ಯ ಗಡಿ ಪ್ರದೇಶದಲ್ಲಿ ಚೆಕ್‌ಪೋಸ್ಟ್ ಸ್ಥಾಪಿಸಿ ದಿನದ 24 ಗಂಟೆಯೂ 3 ಪಾಳಿಯಲ್ಲಿ ವಾಹನ ತಪಾಸಣೆ ನಡೆಸಲು ಈಗಾಗಲೇ ಸ್ಥಳ ಗುರ್ತಿಸಿ ಪೊಲೀಸ್ ಸಿಬ್ಬಂದಿ ನಿಯೋಜನೆ ಪ್ರಕ್ರಿಯೆ ಕ್ಷಿಪ್ರಗತಿಯಲ್ಲಿ ನಡೆಯುತ್ತಿದೆ.



ಅಪರಾಧ ಹಿನ್ನೆಲೆಯುಳ್ಳ ಬೇರೆ ಬೇರೆ ಪ್ರಕರಣಗಳಲ್ಲಿ ಜೈಲು ಸೇರಿ ಜಾಮೀನಿನ ಮೇಲೆ ಬಿಡುಗಡೆಯಾಗಿರುವ, ಶಿಕ್ಷಣವನ್ನು ಅರ್ಧಕ್ಕೆ ಮೊಟಕುಗೊಳಿಸಿ ಯಾವುದೇ ನಿರ್ದಿಷ್ಟ ಉದ್ಯೋಗವಿಲ್ಲದೇ ಕಾಲ ಕಳೆಯುತ್ತಿರುವವರ ಮೇಲೂ ಆಯಾ ಠಾಣಾ ಮಫ್ತಿಯಲ್ಲಿರುವ ಪೊಲೀಸರು ನಿಗಾ ವಹಿಸುತ್ತಿದ್ದು, ಚುನಾವಣಾ ನೀತಿ ಸಂಹಿತೆ ಜಾರಿಗೆ ಬರುತ್ತಿದ್ದಂತೆಯೇ ಅಂತಹವರನ್ನೂ ಪ್ರಿವೆಂಟಿವ್ ಅರೆಸ್ಟ್ ಮಾಡಲಾಗುವುದು ಎಂದು ಹಿರಿಯ ಪೊಲೀಸ್ ಅಧಿಕಾರಿಗಳು ತಿಳಿಸಿದ್ದಾರೆ. ಈಗಾಗಲೇ ಅಭ್ಯರ್ಥಿಗಳ ಚುನಾವಣಾ ಪ್ರಚಾರ ಸಭೆ–ಸಮಾರಂಭ, ಮತಗಟ್ಟೆ ಬಂದೋಬಸ್ತ್ ಕರ್ತವ್ಯಕ್ಕೆ ನಿಯೋಜನೆಗೊಳ್ಳುವ ಅಧಿಕಾರಿಗಳು, ಸಿಬ್ಬಂದಿಗಳು ಅನುಸರಿಸಬೇಕಾದ ಕ್ರಮ, ನಡವಳಿಕೆಗಳ ಬಗ್ಗೆ ಹಿರಿಯ ಪೊಲೀಸ್ ಅಧಿಕಾರಿಗಳು ತರಬೇತಿ ನೀಡಿ ಸಜ್ಜುಗೊಳಿಸಿದ್ದಾರೆ. ಮತ ಎಣಿಕೆ ಕೇಂದ್ರದ ಸ್ಟ್ರಾಂಗ್ ರೂಂ, ಎಣಿಕೆ ಹಾಲ್‌ನಲ್ಲಿ ಬಂದೋಬಸ್ತ್ ಕರ್ತವ್ಯ ನಿರ್ವಹಿಸುವವರು ಜವಾಬ್ದಾರಿಯುತವಾಗಿದ್ದು, ಯಾವುದೇ ಕ್ಲಿಷ್ಟ ಸಂದರ್ಭ ಬಂದರೂ ವಿಚಲಿತರಾಗದೇ, ಕಾನೂನಿನಂತೆ ಕ್ರಮ ಕೈಗೊಳ್ಳುವುದರ ಜೊತೆಗೆ ಹಿರಿಯ ಪೊಲೀಸ್ ಅಧಿಕಾರಿಗಳಿಗೆ ವಸ್ತುಸ್ಥಿತಿಯನ್ನು ಸಮರ್ಪಕವಾಗಿ ವಿವರಿಸಬೇಕೆಂದು ತರಬೇತಿ ವೇಳೆ ತಿಳಿಸಲಾಗಿದೆ.

7ನೇ ವೇತನ ಆಯೋಗದ ಅಂತಿಮ ವರದಿ ಬಗ್ಗೆ ಸಕಾರಾತ್ಮಕ ತೀರ್ಮಾನ

● ಸರ್ಕಾರಿ ನೌಕರರಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಭರವಸೆ ● ರಾಜ್ಯ ಮಟ್ಟದ ಸರ್ಕಾರಿ ನೌಕರರ ಸಮ್ಮೇಳನ ಉದ್ಘಾಟನೆ ● ತುಟ್ಟಿಭತ್ಯೆ ನೀಡಿಕೆಯಲ್ಲಿ ಯಾವುದೇ ವಿಳಂಬವಿಲ್ಲ ● ಹಳೆ ಪಿಂಚಣಿ ವ್ಯವಸ್ಥೆ ಜಾರಿ ಬಗ್ಗೆಯೂ ಸೂಕ್ತ ತೀರ್ಮಾನ



ಬೆಂಗಳೂರು, ಫೆ27(ಕೆಎಂಶಿ)– ಪಂಚ್‌ಗ್ಯಾರಂಟಿಗಳನ್ನು ಜಾರಿ ಮಾಡುವ ಆರ್ಥಿಕ ಹೊರೆಯ ನಡುವೆಯೂ 7ನೇ ವೇತನ ಆಯೋಗದ ಅಂತಿಮ ವರದಿ ಬಂದ ನಂತರ ಸರ್ಕಾರಿ ನೌಕರರ ಬಗ್ಗೆ ಸರ್ಕಾರ ಸಕಾರಾತ್ಮಕವಾಗಿ ತೀರ್ಮಾನವನ್ನು ಕೈಗೊಳ್ಳಲಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಇಂದಿಲ್ಲಿ ಪ್ರಕಟಿಸಿದ್ದಾರೆ.

ಅರಮನೆ ಆವರಣದಲ್ಲಿ ರಾಜ್ಯ ಮಟ್ಟದ ಸರ್ಕಾರಿ ನೌಕರರ ಸಮ್ಮೇಳನವನ್ನು ಉದ್ಘಾಟಿಸಿ ಮಾತನಾಡಿದ ಅವರು, ಕೇಂದ್ರ ಸರ್ಕಾರ ನಿರ್ಧರಿಸಿದಂತೆ ತುಟ್ಟಿಭತ್ಯೆಯನ್ನು ಯಾವುದೇ ವಿಳಂಬವಿಲ್ಲದೇ ರಾಜ್ಯದಲ್ಲಿ ನೀಡಲಾಗುತ್ತಿದೆ. ಎನ್‌ಪಿಎಸ್ ತೆಗೆದು ಹಳೆ ಪಿಂಚಣಿ ವ್ಯವಸ್ಥೆಯನ್ನು ಜಾರಿ ಮಾಡುವ ಬಗ್ಗೆಯೂ ಚರ್ಚಿಸಿ ಸೂಕ್ತ ತೀರ್ಮಾನ ಕೈಗೊಳ್ಳಲಾಗುವುದು ಎಂದರು.

ಸರ್ಕಾರಿ ನೌಕರರಿಗೆ ಕರ್ನಾಟಕ ಆರೋಗ್ಯ ಸಂಜೀವಿನಿ ಯೋಜನೆಯನ್ನು ಜಾರಿ ಮಾಡುವ ಬಗ್ಗೆಯೂ ಶೀಘ್ರದಲ್ಲಿ ತೀರ್ಮಾನಿಸಲಾಗುವುದು ಎಂದ ಮುಖ್ಯಮಂತ್ರಿಗಳು, ಸರ್ಕಾರ ಮತ್ತು ಜನರ ನಡುವೆ ಸೇತುವೆಯಾಗಿ ಕಾರ್ಯ ನಿರ್ವಹಿಸುವ ಜವಾಬ್ದಾರಿಯುತ ಕೆಲಸವನ್ನು ಪರಿಣಾಮಕಾರಿಯಾಗಿ ಮಾಡುತ್ತಿರುವ ಸರ್ಕಾರಿ ನೌಕರರ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು.

ಕರ್ನಾಟಕದಲ್ಲಿ 7.50 ಲಕ್ಷ ಸರ್ಕಾರಿ ನೌಕರರಿದ್ದಾರೆ. ಅದರಲ್ಲಿ 5.90 ಲಕ್ಷ ಜನ ಹಾಲಿ ಕೆಲಸ ಮಾಡುತ್ತಿದ್ದಾರೆ. 2.50 ಲಕ್ಷ ಜನರನ್ನು ಭರ್ತಿ ಮಾಡಲು ಸಾಧ್ಯವಾಗಿಲ್ಲ. ಕರ್ನಾಟಕದ ಜನಸಂಖ್ಯೆ 7 ಕೋಟಿ ಇದೆ. 7.50 ಲಕ್ಷ ಮಂಜೂರಾಗಿರುವ ಹುದ್ದೆಗಳಿವೆ. 7 ಲಕ್ಷ ಜನ 7 ಕೋಟಿ ಜನರ ಕಷ್ಟ ಸುಖಗಳಲ್ಲಿ ಭಾಗಿಯಾಗುವ, ರಾಜ್ಯದ ಅಭಿವೃದ್ಧಿಯಲ್ಲಿ ಭಾಗಿಯಾಗುವ ಪ್ರಾಮಾಣಿಕ ಪ್ರಯತ್ನವನ್ನು ಮಾಡಬೇಕು ಎಂದು ಕರೆ ನೀಡಿದರು.

ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಜನರು ನಮ್ಮನ್ನು 5 ವರ್ಷಕ್ಕೊಮ್ಮೆ ಆಯ್ಕೆ ಮಾಡಿದರೆ, ಸರ್ಕಾರಿ ಸೇವೆಗೆ ಸೇರಿದ ಮೇಲೆ ನಿವೃತ್ತಿಯಾಗುವವರೆಗೆ ನವೀಕರಣ ಮಾಡಿಸಿಕೊಳ್ಳುವ ಪ್ರಮೇಯವಿಲ್ಲ. ರಾಜಕಾರಣಿಗಳು 5 ವರ್ಷಕ್ಕೊಮ್ಮೆ ಕರ್ನಾಟಕದ ಜನರ ಆಶೀರ್ವಾದವನ್ನು ನವೀಕರಿಸಿಕೊಳ್ಳಬೇಕು ಎಂದರು. ರಾಜ್ಯದ ಜನ ನನಗೆ ಎರಡನೇ ಬಾರಿಗೆ ಮುಖ್ಯಮಂತ್ರಿಯಾಗುವ ಅವಕಾಶವನ್ನು ಕಲ್ಪಿಸಿಕೊಟ್ಟಿದ್ದಾರೆ. ಅದರಲ್ಲಿ ನೀವೂ, ನಿಮ್ಮ ಕುಟುಂಬದವರೂ ಇದ್ದಾರೆ. 7 ಕೋಟಿ ಕನ್ನಡಿಗರ ಭಾಗವಾದ ಸರ್ಕಾರಿ ನೌಕರರು, ಸಾಮಾಜಿಕ ವ್ಯವಸ್ಥೆಯನ್ನು ಅರ್ಥ ಮಾಡಿಕೊಂಡಿದ್ದೀರಿ ಎಂದು ಭಾವಿಸಿದ್ದೇನೆ. ನಮ್ಮ ಸಮಾಜದಲ್ಲಿ ಸಾಮಾಜಿಕ, ಆರ್ಥಿಕ ಸಮಾನತೆ ತರಬೇಕು. ನಾವೆಲ್ಲರೂ ಪ್ರಜಾಪ್ರಭುತ್ವದ ಮಾಲೀಕರ ಪರವಾಗಿ ಕೆಲಸ ಮಾಡಲು ಇರಬೇಕು ಎಂದರು. ಸರ್ಕಾರ ನಿಮಗೆ ನ್ಯಾಯ ಒದಗಿಸುವ ಕೆಲಸ ಮಾಡಬೇಕು ಎನ್ನುವುದರಲ್ಲಿ ಎರಡು ಮಾತಿಲ್ಲ. ನಿಮ್ಮ ನ್ಯಾಯಯುತ ಬೇಡಿಕೆಗಳನ್ನು ಈಡೇರಿಸಬೇಕು. ಆದರೆ ಅದೇ ಮೊದಲ ಆದ್ಯತೆ ಅಲ್ಲ. ಅನ್ಯಾಯಗಳನ್ನು ಸರಿಪಡಿಸುವುದು ಸರ್ಕಾರದ ಕರ್ತವ್ಯ. ರಾಜ್ಯದ ಜನರ ಪರವಾಗಿ ಕೆಲಸ ಮಾಡಬೇಕಾಗಿರುವುದು ಮೊದಲನೇ ಆದ್ಯತೆ. ಬೇಡಿಕೆಗಳು ನಂತರದ ಆದ್ಯತೆ. ಇದನ್ನು ಸ್ಪಷ್ಟವಾಗಿ ನೀವು ಅರ್ಥಮಾಡಿಕೊಂಡಿದ್ದೀರಿ ಎನ್ನುವುದು ನನ್ನ ಅನಿಸಿಕೆ ಎಂದರು.

ಸರ್ಕಾರಿ ನೌಕರರ ಸಮಸ್ಯೆಗಳನ್ನು ಅರಿತು 7ನೇ ವೇತನ ಆಯೋಗ ರಚಿಸಲಾಗಿದ್ದು, 6ನೇ ವೇತನ ಆಯೋಗವನ್ನು ನಮ್ಮ ಸರ್ಕಾರ ಜಾರಿಗೆ ತಂದಿತ್ತು. ಆ ಸಂದರ್ಭದಲ್ಲಿ ನೌಕರರ ವಿರುದ್ಧವಿರುವುದಾಗಿ ನನ್ನ ಮೇಲೆ ಆರೋಪ ಮಾಡಿದ್ದರು. ಆದರೆ ನಾನೇ 6ನೇ ವೇತನ ಆಯೋಗವನ್ನು ರಚಿಸಿದ್ದೆ. ಸರ್ಕಾರಿ ನೌಕರರ ನ್ಯಾಯಯುತ ಬೇಡಿಕೆಗಳನ್ನು ಈಡೇರಿಸುವ ಕೆಲಸವಾಗಬೇಕು. 6ನೇ ವೇತನ ಆಯೋಗದಲ್ಲಿ ಶೇ. 30ರಷ್ಟು ಫಿಟ್ಮೆಂಟ್ ಸೌಲಭ್ಯ ನೀಡಲು 10,500 ಕೋಟಿ ರೂ.ಗಳನ್ನು ಹೆಚ್ಚುವರಿಯಾಗಿ ಬಿಡುಗಡೆ ಮಾಡಿದೆ. ಈಗ 7 ನೇ ವೇತನ ಆಯೋಗದ ಮಧ್ಯಂತರ ವರದಿಯಂತೆ 17% ಹೆಚ್ಚಳ ಮಾಡಲಾಗಿತ್ತು. ಆಯೋಗದ ಅಂತಿಮ ವರದಿ ನೀಡಲು ಇನ್ನಷ್ಟು ಕಾಲಾವಕಾಶ ಬೇಕೆಂದು ಆಯೋಗದ ಅಧ್ಯಕ್ಷರು ಕೋರಿದ್ದು, ಮಾರ್ಚ್ 15ರವರೆಗೆ ವರದಿ ನೀಡಲು ಸಮಯಾವಕಾಶ ನೀಡಲಾಗಿದೆ. ಲೋಕಸಭಾ ಚುನಾವಣೆಯ ಹಿನ್ನೆಲೆ, ಆಯೋಗದ ಅಂತಿಮ ವರದಿಯನ್ನು ಆದಷ್ಟು ಜಾಗ್ರತೆ ಸಲ್ಲಿಸುವುದಾಗಿ ತಿಳಿಸಿದ್ದಾರೆ. ನಾನು ಸರ್ಕಾರಿ ನೌಕರರ ಪರವಾಗಿದ್ದೇನೆ ಎಂದು ತಿಳಿಸಿದರು.

ಸಹಕಾರಿ ಕ್ಷೇತ್ರದ ಏಳ್ಗೆಗೆ ಯುವಕರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳಬೇಕು: ಶಾಸಕ ಜಿ.ಟಿ.ದೇವೇಗೌಡರ ಸಲಹೆ

ಶ್ರೀ ಚಾಮುಂಡೇಶ್ವರಿ ನಗರ ಅಭಿವೃದ್ಧಿ ಸಹಕಾರ ಸಂಘಕ್ಕೆ ಚಾಲನೆ

ಮೈಸೂರು,ಫೆ.27(ಎಂಟಿವೈ)– ಸಹಕಾರಿ ಕ್ಷೇತ್ರದಲ್ಲಿ ಏಳ್ಗೆ ಹೊಂದಲು ಯುವಕರು ಹೆಚ್ಚಿನ ಸಂಖ್ಯೆಯಲ್ಲಿ ಸಹಕಾರಿ ಕ್ಷೇತ್ರಕ್ಕೆ ಪಾದಾರ್ಪಣೆ ಮಾಡುವಂತೆ ಶಾಸಕ ಜಿ.ಟಿ.ದೇವೇಗೌಡರು ಸಲಹೆ ನೀಡಿದ್ದಾರೆ. ಮೈಸೂರು ತಾಲೂಕಿನ ಬೆಳವಾಡಿ ಯಲ್ಲಿ ನೂತನವಾಗಿ ಸ್ಥಾಪಿಸಿರುವ ಶ್ರೀ ಚಾಮುಂಡೇಶ್ವರಿನಗರ ಅಭಿವೃದ್ಧಿ ಸಹಕಾರ ಸಂಘ ಕಚೇರಿಯನ್ನು ಉದ್ಘಾಟಿಸಿ ಮಾತನಾಡಿದ ಶಾಸಕ ಜಿ.ಟಿ.ದೇವೇಗೌಡ, ಸಹಕಾರಿ ಕ್ಷೇತ್ರ ಅತ್ಯುತ್ತಮ ಕ್ಷೇತ್ರವಾಗಿದೆ. ಅನೇಕ ಧುರೀಣರು ಸಹಕಾರ ಕ್ಷೇತ್ರವನ್ನು ಕಟ್ಟಿ ಬೆಳೆಸಿದ್ದಾರೆ. ಯುವ ಪೀಳಿಗೆ ಸಹಕಾರ ಕ್ಷೇತ್ರದಲ್ಲಿ ಸಾಧನೆ ಮಾಡಲು ಮುಂದಾಗಬೇಕು. ಬೆಳವಾಡಿಯಲ್ಲಿರುವ ಚಾಮುಂಡೇಶ್ವರಿ ನಗರ ಅಭಿವೃದ್ಧಿ ಸಹಕಾರಿ ಸಂಘ ಹೆಮ್ಮರವಾಗಿ ಬೆಳೆಯಬೇಕು. ಇದಕ್ಕೆ ಸಂಘದ ಸದಸ್ಯರು, ನಿರ್ದೇಶಕರು ಹಗಲು ಕೊಟ್ಟು ಕಾರ್ಯನಿರ್ವಹಿಸಬೇಕು ಎಂದರು.

ಕಾರ್ಯಕ್ರಮದಲ್ಲಿ ಮುಖಂಡರಾದ ಬೆಳವಾಡಿ ಶಿವಮೂರ್ತಿ, ಲಾರಿ ಸ್ವಾಮಿ, ಬೋರಪ್ಪ, ಮೊಬೈಲ್ ರಮೇಶ್, ಮಹದೇವು, ಚಾಮುಂಡೇಶ್ವರಿ ನಗರ ಅಭಿವೃದ್ಧಿ ಸಹಕಾರ ಸಂಘದ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ರವಿಕುಮಾರ್, ಅಧ್ಯಕ್ಷ ಸಿದ್ದರಾಜು, ಉಪಾಧ್ಯಕ್ಷ ರೇವಣ್ಣ ಹಾಗೂ ಇನ್ನಿತರರು ಉಪಸ್ಥಿತರಿದ್ದರು. ಇದೇ ವೇಳೆ ತಲಕಾಡು ಕೃಷ್ಣಮೂರ್ತಿ ತಂಡದವರಿಂದ ಡೊಳ್ಳುಕುಣಿತ, ಜಾನಪದ ಗೀತ ಗಾಯನ ಕಾರ್ಯಕ್ರಮ ಆಯೋಜಿಸಲಾಗಿತ್ತು.



ಮೈಸೂರು ತಾಲೂಕಿನ ಬೆಳವಾಡಿಯಲ್ಲಿ ನೂತನವಾಗಿ ಸ್ಥಾಪಿಸಿರುವ ಶ್ರೀ ಚಾಮುಂಡೇಶ್ವರಿ ನಗರ ಅಭಿವೃದ್ಧಿ ಸಹಕಾರ ಸಂಘದ ಕಚೇರಿಯನ್ನು ಶಾಸಕ ಜಿ.ಟಿ.ದೇವೇಗೌಡರು ಉದ್ಘಾಟಿಸಿದರು.

ಹೆದ್ದಾರಿ ರಸ್ತೆ ವಿಭಜಕ ಹಾದು ಹೋಗಲು ಸ್ಥಳಾವಕಾಶಕ್ಕೆ ಆಗ್ರಹ

ಟಿ.ನರಸೀಪುರ ರಸ್ತೆಯ ಪ್ರಕೃತಿ ಬಡಾವಣೆ ನಿವಾಸಿಗಳ ಪ್ರತಿಭಟನೆ



ಮೈಸೂರಿನ ಟಿ.ನರಸೀಪುರ ರಸ್ತೆಯಲ್ಲಿ ಮಂಗಳವಾರ ರಸ್ತೆ ಎದುರಿನ ಬಡಾವಣೆ ನಿವಾಸಿಗಳು ಪ್ರತಿಭಟನೆ ನಡೆಸಿದರು.

ಮೈಸೂರು,ಫೆ.27(ಪಿಎಂ)– ರಾಷ್ಟ್ರೀಯ ಹೆದ್ದಾರಿ 766ರ ಮೈಸೂರಿನ ಟಿ.ನರಸೀಪುರ ರಸ್ತೆಯಲ್ಲಿ ಪ್ರಕೃತಿ ಬಡಾವಣೆ ಸಮೀಪ ಬಡಾವಣೆ ಜನತೆ ರಸ್ತೆ ದಾಟಲು ಅನುಕೂಲವಾಗುವಂತೆ ರಸ್ತೆ ವಿಭಜಕ ಸ್ಥಳಾವಕಾಶ ಕಲ್ಪಿಸುವಂತೆ ಹಾಗೂ ಬಡಾವಣೆ ಮುಂಭಾಗ ಜಂಕ್ಷನ್ ಪಾಯಿಂಟ್ ನಿರ್ಮಿಸುವಂತೆ ಒತ್ತಾಯಿಸಿ ಬಡಾವಣೆ ನಿವಾಸಿಗಳು ಮಂಗಳವಾರ ಪ್ರತಿಭಟನೆ ನಡೆಸಿದರು.

ಬಡಾವಣೆ ಎದುರಿನ ಹೆದ್ದಾರಿಯಲ್ಲಿ ಜಮಾಯಿಸಿದ ಪ್ರತಿಭಟನಾಕಾರರು, ಬಡಾವಣೆಗೆ ಹೊಂದಿಕೊಂಡಿರುವ ಟಿ.ನರಸೀಪುರ ರಸ್ತೆಯಲ್ಲಿ ಕಳೆದ ಒಂದು ವರ್ಷದಿಂದ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ವತಿಯಿಂದ ಅಗಲೀಕರಣ ಕಾಮಗಾರಿ ನಡೆಸಲಾಗುತ್ತಿದೆ. ಜೊತೆಗೆ ರಸ್ತೆ ಮಧ್ಯೆ ವಿಭಜಕ ನಿರ್ಮಿಸಲಾಗುತ್ತಿದೆ. ಇದರಿಂದ ಪ್ರಕೃತಿ ಬಡಾವಣೆ ಮಾತ್ರವಲ್ಲದೆ, ಅನೇಕ ಬಡಾವಣೆ ನಿವಾಸಿಗಳು ರಸ್ತೆ ದಾಟಲು 1.5 ಕಿ.ಮೀ.ವರೆಗೆ ಸಂಚರಿಸಿ 'ಯು ಟರ್ನ್' ತೆಗೆದುಕೊಂಡು ಬರಬೇಕಾದ ಪರಿಸ್ಥಿತಿ ಎದುರಾಗಲಿದೆ. ಇದರಿಂದ ಬಡಾವಣೆಯ ವಯೋವೃದ್ಧರು ಹಾಗೂ ಶಾಲಾ ಕಾಲೇಜು ವಿದ್ಯಾರ್ಥಿಗಳು ಸಮಸ್ಯೆ ಎದುರಿಸಬೇಕಾಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಪ್ರಕೃತಿ ಬಡಾವಣೆ ನಿವಾಸಿ ಮತ್ತು ಪ್ರಕೃತಿ ಸ್ನೇಹ ಬಳಗದ ಸದಸ್ಯ ಪ್ರವೀಣ್‌ಗೌಡ ಮಾತನಾಡಿ, ಪ್ರಕೃತಿ ಬಡಾವಣೆ ನಿವಾಸಿಗಳು ಸೇರಿದಂತೆ ವಿವಿಧ ಬಡಾವಣೆ ನಿವಾಸಿಗಳು ಕಳೆದ 2023ರ ಮಾ.8ರಂದು ರಾಮನಗರದಲ್ಲಿರುವ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಕಚೇರಿಗೆ ಭೇಟಿ ನೀಡಿ, ರಸ್ತೆ ವಿಭಜಕದ ಮಧ್ಯೆ ಸಂಚರಿಸಲು ಅನುಕೂಲವಾಗುವಂತೆ ಸ್ಥಳಾವಕಾಶ ಕಲ್ಪಿಸುವಂತೆಯೂ, ಜೊತೆಗೆ ಬಡಾವಣೆ ಎದುರು ಜಂಕ್ಷನ್ ಪಾಯಿಂಟ್ ವ್ಯವಸ್ಥೆ ಕಲ್ಪಿಸಬೇಕೆಂದು ಮನವಿ ಸಲ್ಲಿಸಿದ್ದೇವೆ. ಅಲ್ಲದೆ ಜಿಲ್ಲಾಧಿಕಾರಿಗಳು, ಸಂಸದರಾದ ಪ್ರತಾಪ್ ಸಿಂಹ, ವಿ.ಶ್ರೀನಿವಾಸ ಪ್ರಸಾದ್ ಅವರಿಗೂ ಈ ಸಂಬಂಧ ಮನವಿ ಸಲ್ಲಿಸಿದ್ದೆವು. ಆದಾಗ್ಯೂ ಪ್ರಾಧಿಕಾರದ ಅಧಿಕಾರಿಗಳು ಸ್ಪಂದಿಸುತ್ತಿಲ್ಲ ಎಂದು ದೂರಿದರು. ಜ.13ರಂದು ಸಂಸದ ಪ್ರತಾಪ್ ಸಿಂಹ ಖುದ್ದು ಬಡಾವಣೆಗೆ ಭೇಟಿ ನೀಡಿ ಸ್ಥಳ ಪರಿಶೀಲನೆ ನಡೆಸಿದ್ದರು. ಅಲ್ಲದೆ, ವಿಭಜಕದಲ್ಲಿ ಹಾದು ಹೋಗಲು ಸ್ಥಳಾವಕಾಶ ಮಾಡಿಕೊಡುವಂತೆಯೂ, ಬಡಾವಣೆ ಎದುರು ಮೈನರ್ ಜಂಕ್ಷನ್ ನಿರ್ಮಿಸಲು ಕ್ರಮ ವಹಿಸುವಂತೆ ಪ್ರಾಧಿಕಾರದ ಅಧಿಕಾರಿಗಳಿಗೆ ಸೂಚನೆ ನೀಡಿದ್ದರು. ಈ ಸಂದರ್ಭದಲ್ಲಿ ಸಮ್ಮತಿಸಿದ್ದ ಅಧಿಕಾರಿಗಳು, ಇದೀಗ ಸ್ಥಳಾವಕಾಶವಿರುವ ರಸ್ತೆವಿಭಜಕ ಮುಚ್ಚಲು ಮುಂದಾಗಿದ್ದಾರೆ ಎಂದು ಕಿಡಿಕಾರಿದರು.

ನಮ್ಮ ಬಡಾವಣೆ ಮುಂದೆ ಜಂಕ್ಷನ್ ಪಾಯಿಂಟ್ ಅಗತ್ಯತೆ ಬಹಳಷ್ಟಿದೆ. ಶಾಲಾ ವಾಹನಗಳು ಬಡಾವಣೆಯೊಳಗೆ ಬರಲು ನಿರಾಕರಿಸುವ ಪರಿಸ್ಥಿತಿ ಎದುರಾಗಿದೆ. ಇದರಿಂದ ಶಾಲಾ ಕಾಲೇಜು ವಿದ್ಯಾರ್ಥಿಗಳಿಗೆ ತೊಂದರೆ ಉಂಟಾಗಿದ್ದು, ಕುಡಿಯುವ ನೀರನ್ನು ಮನೆಗಳಿಗೆ ತರಲೂ ಹೆಚ್ಚು ಸಮಯ ಹಿಡಿಯುತ್ತಿದ್ದು, ಇದೀಗ ಬಡಾವಣೆಗಳ ನಿವಾಸಿಗಳಿಗೆ ಅನುಕೂಲ ಕಲ್ಪಿಸುವ ನಿಟ್ಟಿನಲ್ಲಿ ಸೂಕ್ತ ಕ್ರಮ ವಹಿಸಬೇಕೆಂದು ಒತ್ತಾಯಿಸಿದರು. ಪ್ರಕೃತಿ ಬಡಾವಣೆ ಸೇರಿದಂತೆ ಇಲ್ಲಿನ ಸುತ್ತಮುತ್ತಲ ಬಡಾವಣೆಗಳ ಹಲವು ನಿವಾಸಿಗಳು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ನಕ್ಕರೆ ಅದೇ ಸ್ವರ್ಗ

ಸತೀಶ : ಟೀಚರ್... ಪಕ್ಷಾಂತರ ಎಂದರೇನು?
ಟೀಚರ್ : ಪಕ್ಷ ಬದಲಾಯಿಸುವುದು!
ಸತೀಶ : ಸ್ಥಳಾಂತರ?
ಟೀಚರ್ : ಸ್ಥಳ ಬದಲಾಯಿಸುವುದು!
ಸತೀಶ : ಹಾಗಾದ್ರೆ ಗಂಡಾಂತರ ಎಂದರೆ?

ಮೈಸೂರು ಮಿತ್ರ

ಬುಧವಾರ, 28 ಫೆಬ್ರವರಿ 2024

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತವಾಹಿನಿ..........


ಜ್ಞಾನ, ದರ್ಶನ ಮತ್ತು ತಪಸ್ಸು –ಈ ಮಾರ್ಗವನ್ನು ಸಂಪಾದಿಸಿಕೊಂಡರೆ ಜೀವಿಗಳು ಸದ್ಗತಿ ಪಡೆಯುತ್ತಾರೆ –ಭಗವಾನ್ ಮಹಾವೀರ.

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಒಟ್ಟಿಗೆ ಉಂಡರೂ ಅವರೆಕಾಳು ತಿನ್ನಬೇಡ ಅಂದರಂತೆ

ನಿಮ್ಮ ಪತ್ರಗಳು

ಪಾದಚಾರಿಗಳ ವಾಕಿಂಗ್ ಸ್ವಾತಂತ್ರ್ಯ ಕಾಪಾಡಿ

ಮಾನ್ಯರೆ,



ಪಾದಚಾರಿ ಮಾರ್ಗವೆಂದರೆ ರಸ್ತೆ ಮಟ್ಟಕ್ಕಿಂತ ಕನಿಷ್ಠ ಅರ್ಧ ಅಡಿ ಎತ್ತರದಲ್ಲಿರಬೇಕು. ಓಡಾಡುವ ವಾಹನಗಳಿಂದ ನಡೆದಾಡುವವರನ್ನು ರಕ್ಷಣೆ ಮಾಡುವುದು, ಅಪಘಾತಗಳನ್ನು ತಪ್ಪಿಸುವುದು ಇದರ ಉದ್ದೇಶ. ಆದರೆ ಇತ್ತೀಚೆಗೆ ಪೇವ್‌ಮೆಂಟ್ ಬ್ಲಾಕ್‌ಗಳನ್ನು ಹಾಕಿ ರಸ್ತೆಯ ಮಟ್ಟದಲ್ಲಿಯೇ ಪಾದಚಾರಿ ಮಾರ್ಗಗಳನ್ನು ರಚಿಸುವ ಹೊಸ ಪರಿಪಾಠ ಶುರುವಾಗಿದೆ. ಇದು ಉಳ್ಳವರ ಕಾರುಗಳನ್ನು ನಿಲ್ಲಿಸಲು ಅನುಕೂಲ ಮಾಡಿಕೊಡುವ ವ್ಯವಸ್ಥೆಯಾಗಿದೆ. ಇದರಿಂದ ಪಾದಚಾರಿಗಳಿಗೆ ಯಾವುದೇ ಉಪಯೋಗವಿಲ್ಲ. ಬದಲಿಗೆ ಪಾದಚಾರಿ ಮಾರ್ಗಗಳನ್ನು ಪಾರ್ಕಿಂಗ್ ಜಾಗಗಳನ್ನಾಗಿ ಪರಿವರ್ತಿಸಿ ಪಾದಚಾರಿಗಳ ವಾಕಿಂಗ್ ಮಾಡುವ ವಾಕ್ ಸ್ವಾತಂತ್ರ್ಯವನ್ನು ಕಸಿದುಕೊಳ್ಳಲಾಗುತ್ತಿದೆ. ಇದು ಯಾವ ಮಹಾನ್ ಅಭಿಯಂತರರ ಯೋಚನೆಯೋ ತಿಳಿಯುತ್ತಿಲ್ಲ. ದಯಮಾಡಿ ಮಹಾನಗರಪಾಲಿಕೆ ಆಯುಕ್ತರು ಮತ್ತು ಸಂಬಂಧಪಟ್ಟ ಅಧಿಕಾರಿ ಇತ್ತ ಗಮನಹರಿಸಬೇಕು.

–ಎಸ್.ರವಿ, ವಕೀಲ, ಮೈಸೂರು

ಸಿನಿಮಾದಲ್ಲಿ ಕುಡಿತದ ಹಾಡಿಗೆ ನಿರ್ಬಂಧ ಹೇರಿ

ಮಾನ್ಯರೆ,

ಸಮಾಜದಲ್ಲಿ ಕುಡಿತದ ನಿಷೇಧದ ಬಗ್ಗೆ ಹಲವಾರು ಕಾರ್ಯಕ್ರಮಗಳನ್ನು ಹಾಕಿಕೊಳ್ಳಲಾಗುತ್ತಿದೆ. ಇದರಿಂದ ಕುಟುಂಬದಲ್ಲಿ ಸಂತೋಷ ಕಾಣಲು ಸಾಧ್ಯ. ಆದರೆ ಈಗ ಪ್ರತಿಯೊಂದು ಸಿನಿಮಾದಲ್ಲೂ ಕುಡಿತದ ಹಾಡಿಗೆ ಹೆಜ್ಜೆ ಹಾಕುತ್ತಾ ಉನ್ಮಾದದಲ್ಲಿ ವೈಭವೀಕರಣ ಮಾಡುತ್ತಾರೆ. ಯಾವುದೇ ಸಭೆ ಸಮಾರಂಭದಲ್ಲಿ ಕುಡಿತದ ಹಾಡಿಗೆ ಆದ್ಯತೆ ನೀಡುತ್ತಾರೆ. ಇದರಿಂದ ಅರಿಯದ ಮಕ್ಕಳಲ್ಲಿ ಕುಡಿತದ ಬಗ್ಗೆ ಕುತೂಹಲಗೊಂಡು ಕುಡಿಯಲು ಶುರು ಮಾಡಬಹುದು. ಜನರಲ್ಲಿ ಜಾಗೃತಿ ಮೂಡಿಸಲು ಬೀದಿ ನಾಟಕದಿಂದ ಕುಡಿತದ ಪ್ರಾತ್ಯಕ್ಷಿಕೆ ಕಾರ್ಯಕ್ರಮಗಳನ್ನು ಮಾಡಿದರೆ ಎಷ್ಟೋ ಕುಟುಂಬಗಳಲ್ಲಿ ಸಂತೋಷವನ್ನು ಕಾಣಬಹುದು. ಸಿನಿಮಾದಲ್ಲಿ ಸಂತೋಷಕ್ಕೂ ಹಾಗೂ ಕಷ್ಟಕ್ಕೂ ಕುಡಿತದ ಸನ್ನಿವೇಶವನ್ನು ಹಾಗೂ ಆತ್ಮಹತ್ಯೆ ಪ್ರಕರಣಗಳಿಗೆ ನಿರ್ಬಂಧ ಹೇರಬೇಕು. ಕುಡಿತದಿಂದ ದೇಹದ ಮೇಲಾಗುವ ದುಷ್ಪರಿಣಾಮವನ್ನು ಮನದಟ್ಟು ಮಾಡಿದರೆ ಕುಡಿಯುವವರ ಸಂಖ್ಯೆ ಕ್ಷೀಣಿಸುತ್ತಾ ಹೋಗುತ್ತದೆ. ಕುಟುಂಬದಲ್ಲಿ ಆರೋಗ್ಯ ಹಾಗೂ ಸಂತೋಷವನ್ನು ಕಾಣಬಹುದು.

–ಎಂ. ಎಸ್. ಉಷಾ ಪ್ರಕಾಶ್, ಲೇಖಕಿ ಹಾಗೂ ಕವಯಿತ್ರಿ, ಮೈಸೂರು.

ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಸಾಧನೆಗೈದಿದ್ದ ಕೆ.ಟಿ.ಗಟ್ಟಿ

ಮಾನ್ಯರೆ,



ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಅನುಪಮ ಸೇವೆ ಸಲ್ಲಿಸಿದ್ದ ಹಿರಿಯ ಲೇಖಕ, ಭಾಷಾ ತಜ್ಞ, ಪ್ರಾಧ್ಯಾಪಕ, ಕಾದಂಬರಿಕಾರ, ಚಿಂತಕ ಕೆ.ಟಿ.ಗಟ್ಟಿಯವರ ನಿಧನ ಕನ್ನಡ ಸಾರಸ್ವತ ಲೋಕಕ್ಕೆ ಉಂಟಾಗಿರುವ ತೀವ್ರ ನಷ್ಟವಾಗಿದೆ. ತಮ್ಮ 85 ವರ್ಷಗಳ ಸುದೀರ್ಘ ಜೀವಮಾನದಲ್ಲಿ ಹಲವಾರು ಮೌಲಿಕ ಕಾದಂಬರಿಗಳನ್ನು ಗಟ್ಟಿಯವರು ರಚಿಸಿದ್ದಾರೆ. ಅವರ ಪ್ರಥಮ ಕಾದಂಬರಿ "ಶಬ್ದಗಳು;" ಧಾರಾವಾಹಿಯಾಗಿ "ಸುಧಾ" ವಾರಪತ್ರಿಕೆಯಲ್ಲಿ ಪ್ರಕಟಗೊಂಡು ಅಪಾರ ಜನಮನ್ನಣೆ ಗಳಿಸಿತು. ಇವರ ಕಾದಂಬರಿಗಳ ಪೈಕಿ, ಕಾರ್ಮುಗಿಲು, ಬಿಸಿಲುಗುದುರೆ, ಸನ್ನಿವೇಶ, ಭೂಮಿಗೀತ, ಕಾಮರೂಪಿ, ಸ್ವರ್ಣಮೃಗ ಮುಂತಾದ ಕಾದಂಬರಿಗಳು ಜನಪ್ರಿಯವಾಗಿವೆ. ಇವರ 14 ಕಾದಂಬರಿಗಳು ಸುಧಾ ವಾರಪತ್ರಿಕೆಯಲ್ಲಿ ಪ್ರಕಟಗೊಂಡಿದ್ದು, ಇದು ಒಂದು ದಾಖಲೆಯಾಗಿದೆ. ಕಾದಂಬರಿಗಳ ಜೊತೆ, ಕೆಂಪು ಕಾಗೆ, ನಗರ ಪರ್ವ, ಕುರುಡರು ಮುಂತಾದ 30ಕ್ಕೂ ಹೆಚ್ಚು ನಾಟಕಗಳನ್ನು ರಚಿಸುವ ಮೂಲಕ ಓರ್ವ ಶ್ರೇಷ್ಠ ನಾಟಕಕಾರರಾಗಿಯೂ ಹೆಸರು ಮಾಡಿದ್ದರು. ಇಥಿಯೋಪಿಯ ದೇಶದಲ್ಲಿ ಕೆಲವು ವರ್ಷಗಳ ಕಾಲ ಪ್ರಾಧ್ಯಾಪಕರಾಗಿ ಸಹ ಸೇವೆ ಸಲ್ಲಿಸಿರುವ ಗಟ್ಟಿಯವರ ಹಲವಾರು ನಾಟಕಗಳು ದೇಶದ ಹಲವಾರು ಭಾಷೆಗಳಿಗೆ ಅನುವಾದಗೊಂಡಿರುವುದು ಅವರ ಮತ್ತೊಂದು ಹೆಗ್ಗಳಿಕೆ ಎಂದು ಹೇಳಬಹುದು.

ಮೂಲತಃ ಕೃಷಿಕರಾದ ಕಟ್ಟಿಯವರು, ಶಿಕ್ಷಣ ಮತ್ತು ಸಾಹಿತ್ಯ ಕ್ಷೇತ್ರಗಳಲ್ಲಿ ಸಲ್ಲಿಸಿರುವ ಸೇವೆ ಅನನ್ಯವಾಗಿದೆ. ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಸೇರಿದಂತೆ ಹಲವಾರು ಮೌಲಿಕ ಪ್ರಶಸ್ತಿ ಮತ್ತು ಪುರಸ್ಕಾರಗಳಿಗೆ ಭಾಜನರಾದ ಶ್ರೀಯುತ ಗಟ್ಟಿ, ಓರ್ವ ಸಮರ್ಥ ಹಾಗೂ ಸತ್ವಶಾಲಿ ಲೇಖಕರಾಗಿ ನಮ್ಮ ನೆನಪಿನಲ್ಲಿ ಚಿರಕಾಲ ಉಳಿಯುತ್ತಾರೆ.

–ಕೆ.ವಿ.ವಾಸು, ವಕೀಲರು, ಮೈಸೂರು

ಕ್ಯಾಪಿಟೋಲ್ ಪಬ್ಲಿಕ್ ಶಾಲೆ ಮುಂಭಾಗ ಡ್ರೈನೇಜ್ ದುರಸ್ತಿಗೊಳಿಸಿ



ಮಾನ್ಯರೆ,

ಮೈಸೂರಿನ ಸರಸ್ವತಿಪುರಂನ ಪಂಪಾಪತಿ ರಸ್ತೆಯಲ್ಲಿರುವ ಕ್ಯಾಪಿಟೋಲ್ ಪಬ್ಲಿಕ್ ಶಾಲೆಯ ಮುಂಭಾಗವಿರುವ ಡ್ರೈನೇಜ್ ತೆರೆದುಕೊಂಡಿದ್ದು, ಅಲ್ಲಿಂದ ಉಕ್ಕಿ ಬರುತ್ತಿರುವ ಒಳಚರಂಡಿಯ ಕೊಳಚೆ ನೀರಿನಿಂದ ಶಾಲಾ ವಾತಾವರಣವೇ ಅನೈರ್ಮಲ್ಯಗೊಂಡು ದುರ್ವಾಸನೆ ಬೀರುತ್ತಿದೆ. ಜೊತೆಗೆ, ಇಲ್ಲಿ ಮನಸೋ ಇಚ್ಛೆ ಕಸವನ್ನೂ ಹಾಕಲಾಗುತ್ತಿದೆ. ಹೀಗಾಗಿ, ಶಾಲಾ ಮಕ್ಕಳು ಹಾಗೂ ಪೋಷಕರೂ ಸೇರಿದಂತೆ ಈ ರಸ್ತೆಯಲ್ಲಿ ಓಡಾಡುವ ಸಾರ್ವಜನಿಕರು ಮೂಗು ಮುಚ್ಚಿಕೊಂಡು ಓಡಾಡುವ ಪರಿಸ್ಥಿತಿ ನಿರ್ಮಾಣವಾಗಿದೆ. ಆದ್ದರಿಂದ, ಸಂಬಂಧಪಟ್ಟವರು ಕೂಡಲೇ ಎಚ್ಚೆತ್ತು ಡ್ರೈನೇಜ್ ದುರಸ್ತಿಗೊಳಿಸುವುದರೊಂದಿಗೆ ಕಸವನ್ನು ಹಾಕಲು ಪ್ರತ್ಯೇಕ ಸ್ಥಳವನ್ನು ಗುರುತಿಸಿ ಅಲ್ಲಿನ ಶುಚಿತ್ವವನ್ನು ಕಾಪಾಡಬೇಕಿದೆ. –ಬಿ. ಗಣೇಶ, ಕೆ.ಜಿ.ಕೊಪ್ಪಲು,ಮೈಸೂರು.



ಡಾ. ಹೆಚ್.ವಿ. ನಾಗರಾಜ ರಾವ್
ಮೈಸೂರು

ಸಂಸ್ಕೃತಿ ಚಿಂತನಾ

ನಗರ್ಲೆಯ ಶಾಸನಗಳು



ಒಂದು ದೇಶದ ಇತಿಹಾಸವನ್ನು ನಿರ್ಣಯಿಸುವುದರಲ್ಲಿ ಶಾಸನಗಳು ಮಹತ್ತ್ವವನ್ನುಳ್ಳ ಪಾತ್ರವನ್ನು ವಹಿಸುತ್ತವೆ. ಶಾಸನಗಳನ್ನು ಶಿಲೆಯಲ್ಲಿ ಕೆತ್ತಿದಾಗ ಅವು ಅನೇಕ ಶತಮಾನಗಳವರೆಗೆ ಉಳಿದು ಇತಿಹಾಸಕ್ಕೆ ಆಧಾರವಾಗುತ್ತವೆ. ಶಾಸನಗಳನ್ನು ಶಿಲೆಯಲ್ಲಿ ಕೆತ್ತಿದ ಕಾಲವನ್ನೂ ಅದರಲ್ಲಿ ನಮೂದಿಸಲಾಗಿದ್ದರೆ ಅದು ಅಮೂಲ್ಯ. ಅನೇಕ ರಾಜರ ಮತ್ತು ಚಕ್ರವರ್ತಿಗಳ ಕಾಲವನ್ನು ನಿರ್ಣಯಿಸಲು ಸಾಧ್ಯವಾಗಿರುವುದು ಶಾಸನಗಳ ನೆರವಿನಿಂದಲೇ. ಅಶೋಕನು ಬೌದ್ಧ ಧರ್ಮದ ಅನುಯಾಯಿಯಾಗಿದ್ದನು, ತನ್ನನ್ನು ದೇವನಾಂಪ್ರಿಯ ಎಂದು ಕರೆದುಕೊಂಡಿದ್ದನು ಎಂಬುದು ನಮಗೆ ತಿಳಿದು ಬಂದದ್ದು ಹತ್ತೊಂಬತ್ತನೆಯ ಶತಮಾನದಲ್ಲಿ ಮಾತ್ರ ಏಕೆಂದರೆ ಆ ಶಾಸನಗಳ ಲಿಪಿ ಬ್ರಾಹ್ಮೀ. ಅದನ್ನು ಓದಲು ಬಲ್ಲವರು ದುರ್ಲಭರಾಗಿದ್ದರು. ಆ ಲಿಪಿಯನ್ನು ಖಚಿತವಾಗಿ ಗುರುತಿಸಿದ ಮೇಲೆ ದೇಶದಲ್ಲಿದ್ದ ಅನೇಕ ಶಾಸನಗಳನ್ನು ಓದಲು ಸಾಧ್ಯವಾಯಿತು.

ಲಿಪಿಯ ಜೊತೆಗೆ ಭಾಷೆಯ ತೊಡಕೂ ಇದೆ. ಶತಮಾನಗಳು ಕಳೆದಂತೆ ಭಾಷೆಯ ಸ್ವರೂಪವೂ ಬದಲಾಗಬಹುದು. ಭಾರತ ದೇಶದಲ್ಲಿ ಕ್ರಿ.ಶ. ಎರಡನೆಯ ಶತಮಾನಕ್ಕಿಂತ ಹಿಂದಿನ ಶಾಸನಗಳು ವಿವಿಧ ಪ್ರಾಕೃತ ಭಾಷೆಗಳಲ್ಲಿವೆ. ಕ್ರಿ.ಶ. ಎರಡನೆಯ ಶತಮಾನದಿಂದ ಸಂಸ್ಕೃತ ಭಾಷೆಯ ಶಾಸನಗಳು ಅಧಿಕವಾಗಿ ದೊರಕುತ್ತವೆ. ತದನಂತರ ಪ್ರಾದೇಶಿಕ ಭಾಷೆಗಳಲ್ಲಿ ಶಾಸನಗಳು ರಚಿತವಾಗಿವೆ. ಲಿಪಿಯು ಆಯಾ ಶತಮಾನದ ಜನರು ಬರೆಯುತ್ತಿದ್ದ ಲಿಪಿಗೆ ಅನುಗುಣವಾಗಿರುತ್ತದೆ. ದೀರ್ಘಕಾಲ ಕಳೆದಿರುವುದರಿಂದ ಮತ್ತು ಅನೇಕ ಸಂದರ್ಭಗಳಲ್ಲಿ ಗಾಳಿ–ಮಳೆ–ಬಿಸಿಲುಗಳ ಹೊಡೆತಕ್ಕೆ ಈಡಾಗಿರುವುದರಿಂದ ಶಿಲಾ ಶಾಸನಗಳ ಕೆಲವು ಭಾಗಗಳು ನಷ್ಟವಾಗಿರಬಹುದು. ಅಕ್ಷರಗಳು ಅಸ್ಪಷ್ಟವಾಗಿರಬಹುದು. ಕೆಲವು ಶಾಸನಗಳಂತೂ ನಾಮಾವಶೇಷವಾಗಿರಬಹುದು.

ಪ್ರಾಚೀನ ಕಾಲದ ರಾಜರು ಧರ್ಮಿಷ್ಠರಾಗಿ ಅನೇಕ ದೇವಾಲಯಗಳಿಗೆ ದತ್ತಿಯಾಗಿ ಭೂಮಿಯನ್ನು ಕೊಡುತ್ತಿದ್ದರು. ದಾನಶಾಸನಗಳಲ್ಲಿ ದಾನಿಯ ಹೆಸರು, ದಾನವಾಗಿ ಕೊಡಲ್ಪಟ್ಟ ಭೂಮಿಯ ಎಲ್ಲೆಗಳು, ಯಾವ ದೇವಸ್ಥಾನಕ್ಕೆ ಯಾವ ಪೂಜೆಗಾಗಿ ಕೊಟ್ಟದ್ದು ಮುಂತಾದ ವಿವರಣೆಯನ್ನು ಕಾಣಬಹುದು. ಶಾಸನವನ್ನು ಬರೆಸಿದ ರಾಜ ಅಥವಾ ಶ್ರೀಮಂತ, ಶಾಸನದ ಒಕ್ಕಣೆಯನ್ನು ಬರೆದ ಕವಿ ಅಥವಾ ವಿದ್ವಾಂಸ, ಶಾಸನವನ್ನು ಕಲ್ಲಿನಲ್ಲಿ ಕೆತ್ತಿದ ಶಿಲ್ಪಿ ಎಂಬ ಮೂವರೂ ಇಲ್ಲಿ ಮುಖ್ಯರೇ. ಆದರೆ ಈ ಎಲ್ಲಾ ವಿವರಣೆಗಳು ನಮಗೆ ಈಗ ಲಭ್ಯವಾಗುವುದು ವಿರಳ.

ನಗರ್ಲೆ ಎಂಬ ಗ್ರಾಮ

ಸಾವಿರ ವರ್ಷಗಳ ಇತಿಹಾಸವುಳ್ಳ ಗ್ರಾಮಗಳಲ್ಲಿ ನಗರ್ಲೆಯನ್ನು ಪರಿಗಣಿಸಬೇಕು. ಇದು ನಂಜನಗೂಡು ತಾಲೂಕಿನಲ್ಲಿದೆ. ಕಪಿಲಾ ನದಿಯ ಬಳಿ ಈ ಗ್ರಾಮವಿದ್ದು ಪ್ರವಾಹ ಬಂದಾಗ ನೀರು ಊರಿನ ಸಮೀಪಕ್ಕೆ ಬರುವುದುಂಟು. ಇಂದು ಗ್ರಾಮದ ಜನಸಂಖ್ಯೆ ಸುಮಾರು ಐದು ಸಾವಿರ. ಹತ್ತನೆಯ ಶತಮಾನದಲ್ಲಿ ಇದರ ಹೆಸರು ನಗರಲ. ಆಗ ಈ ಗ್ರಾಮ ಧಾರ್ಮಿಕ ಕೇಂದ್ರವೂ ವಿದ್ಯಾಕೇಂದ್ರವೂ ಆಗಿದ್ದಿರಬೇಕು. ಗಂಗ ಸಾಮ್ರಾಜ್ಯಕ್ಕೆ ಈ ಭಾಗವೆಲ್ಲ ಸೇರಿತ್ತು. ಅವರ ಶಾಸನಗಳು ಈ ಸುತ್ತಮುತ್ತಲಿನ ಜಾಗಗಳಲ್ಲಿ ದೊರಕಿವೆಯೆಂದು ಸಂಶೋಧಕರು ಹೇಳುತ್ತಾರೆ.

ನಗರ್ಲೆಯವರೇ ಆದ ಸಾಹಿತಿ ಶ್ರೀ ಶಿವಕುಮಾರರು ತಮ್ಮ ಊರಿನ ಇತಿಹಾಸದ ಬಗೆಗೆ ಹೆಚ್ಚಿನ ಆಸಕ್ತಿ ವಹಿಸಿ ಶಾಸನಗಳನ್ನು ಪರೀಕ್ಷಿಸಿದ್ದಾರೆ. ತಮ್ಮ ಗ್ರಾಮದ ಮಾಹಿತಿಗಳನ್ನೊಳಗೊಂಡ **ಹೊಂಬಾಳೆ** ಎಂಬ ಪುಸ್ತಕವನ್ನು ಬೆಳಕಿಗೆ ತಂದಿದ್ದಾರೆ. **ಗ್ರಾಮ ದೇವತೆಗಳು** ಮತ್ತು ಹಳ್ಳಿ ಪಥ ಎಂಬ ಗ್ರಂಥಗಳೂ ಈ ದಿಸೆಯಲ್ಲಿ ಅವರ ಕೊಡುಗೆ. ಎಪಿಗ್ರಾಫಿಯಾ ಕರ್ನಾಟಿಕಾ ಮುಂತಾದ ಆಧಾರಗಳನ್ನು ಅಧ್ಯಯನ ಮಾಡಿ ಅವರು ಗ್ರಾಮಸ್ಥರ ಆರ್ಥಿಕ ನೆರವಿನಿಂದ ಕಪ್ಪು ಶಿಲಾ ಫಲಕಗಳಲ್ಲಿ ಪ್ರಾಚೀನ ಶಾಸನಗಳನ್ನು ಉತ್ಕೀರ್ಣ ಮಾಡಿಸಿ (ಕೊರೆಯಿಸಿ) ನಗರ್ಲೆಯ ಮಾಳಿಗೇಶ್ವರಿ ದೇವಸ್ಥಾನದಲ್ಲಿ ಸ್ಥಾಪಿಸುವಂತೆ ಮಾಡಿದ್ದಾರೆ.

ಕ್ರಿ.ಶ. ಹತ್ತನೆಯ ಶತಮಾನದಲ್ಲಿ ಗಂಗರಸ ಪೆರ್ಮಾಡಿಯ ಆಜ್ಞಾನುಸಾರವಾಗಿ ಅಥವಾ ಅನುಗ್ರಹದ ಸೂಚನೆಯಂತೆ ವಿದ್ಯಾಧರಯ್ಯ ಎಂಬ ಮಹನೀಯನು ಮಾಡಿದ ಭೂದಾನದ ಶಿಲಾಶಾಸನವು ನಗರ್ಲೆ ಸೋಮೇಶ್ವರ ದೇವಸ್ಥಾನದ ಬಾಗಿಲಿನ ದಕ್ಷಿಣ ಪಾರ್ಶ್ವದ ಕಲ್ಲಿನಲ್ಲಿರುವುದು. ಇದರಲ್ಲಿ ಕೊಂಗುಣಿವರ್ಮ, ಕೋಳಾಲಪುರವರೇಶ್ವರ ಮುಂತಾದ ಬಿರುದುಗಳಿಂದ ರಾಜನನ್ನು ಶ್ಲಾಘಿಸಿರುವುದನ್ನು ನೋಡಬಹುದು. ಆ ಕಾಲದಿಂದಲೂ ಇಲ್ಲಿ ಮಹಾಪರಿಷೆ (ಮಹಾಪರಿಷತ್?) ನಡೆಯುತ್ತಿತ್ತೆಂಬುದೂ ಈ ಶಾಸನದಿಂದ ತಿಳಿದುಬಂದಿದೆ.

ನಗರ್ಲೆ ನಾರಾಯಣಸ್ವಾಮಿ ದೇವಸ್ಥಾನದ ಎದುರಿನಲ್ಲಿ ಇರುವ ದೀಪಸ್ತಂಭದ ತಳಪಾದಿಯಲ್ಲಿರುವ ಶಾಸನದಲ್ಲಿ 'ಪೆರ್ಮಾಡಿಯ ಮನೆವಗತಿ ನೀಲಬ್ಬೆಯ ಮಗಂ ರಾಚಮ್ಮನ ಧರ್ಮಂ' ಎಂಬ ಉಲ್ಲೇಖವಿದೆ. ಇದರಲ್ಲಿ ಶತಕಾಲ 892ನೆಯ ವರಿಷ ಎಂದು ಹೇಳಿರುವುದರಿಂದ ಕ್ರಿ.ಶ. 970ರಲ್ಲಿ ಇದು ಉತ್ಕೀರ್ಣವಾಗಿರಬೇಕು. ತಲಕಾಡಿನ ಗಂಗವಂಶದ ರಾಜರಲ್ಲಿ ಒಬ್ಬನಾಗಿದ್ದ ಮೂರನೆಯ ಮಾರಸಿಂಹ (ಕ್ರಿ.ಶ.960–975) ಜೈನ ಧರ್ಮಾನು ಸಾರಿಯಾಗಿದ್ದರೂ ನಗರ್ಲೆಯ ನನ್ನೀಯ (ನಾರಾಯಣಸ್ವಾಮಿಯ?) ದೇವಾಲಯಕ್ಕೆ ದತ್ತಿಯನ್ನು ಕೊಟ್ಟಿದ್ದನೆಂದು ದಕ್ಷಿಣ ಭಾರತದ ಇತಿಹಾಸ ಎಂಬ ಗ್ರಂಥದಲ್ಲಿ ಪ್ರೊ.ಜಿ.ಆರ್.ರಂಗಸ್ವಾಮಯ್ಯ ಮತ್ತು ಪ್ರೊ.ಬಿ.ಷೇಕ್ ಅಲಿ ಅವರು ಪ್ರತಿಪಾದಿಸಿದ್ದಾರೆ ಎಂಬ ಮಾಹಿತಿಯನ್ನೂ ನಗರ್ಲೆ ಶಿವಕುಮಾರರು ನೀಡಿದ್ದಾರೆ.

ಮಾಳಿಗೇಶ್ವರಿ ದೇವಸ್ಥಾನದ ಬಾಗಿಲಿನ ಉತ್ತರಕ್ಕಿರುವ ಕಲ್ಲಿನಲ್ಲಿ ಕೆತ್ತಲಾಗಿರುವ ಒಂದು ಶಾಸನದಲ್ಲಿ 'ಸ್ವಸ್ತಿ ನಗರಲ ವಿದ್ಯಾಧರನು ಪನ್ನಿರ್ವರ್ ಗವುಂಡಗಳು' ಎಂದು ಹೇಳಲಾಗಿರುವುದರಿಂದ ವಿದ್ಯಾಧರ (ಅಥವಾ ವಿದ್ಯಾಧರಯ್ಯ) ಎಂಬ ಅಧಿಕಾರಿಗೂ ನಗರ್ಲೆಗೂ ಅಧಿಕ ಸಂಬಂಧವಿತ್ತೆಂದೂ, ಅವನೊಡನೆ ಹನ್ನೆರಡು ಮಂದಿ ಗ್ರಾಮ ಮುಖಂಡರು (ಗೌಡರು) ದೇವಾಲಯಕ್ಕೆ ದತ್ತಿಯನ್ನು ಕೊಟ್ಟು ಅಭಿವೃದ್ಧಿಗೆ ಕಾರಣರಾಗಿದ್ದರೆಂದೂ ತಿಳಿಯಬಹುದಾಗಿದೆ. ನಗರ್ಲೆ ಮಾರಿಚಾವಡಿಯ ಪಶ್ಚಿಮ ಗೋಡೆಯ ಕಲ್ಲಿನಲ್ಲಿ ಕೆತ್ತಿರುವ ಶಾಸನದಲ್ಲಿ ತಿರುವಾರಾಧನೆಗಾಗಿ ಪ್ರತಿವರ್ಷ ಹತ್ತು ಕೊಳಗ ಭತ್ತವನ್ನು ಕೊಡುವ ಮಾತಿದೆ. ಈ ಎಲ್ಲಾ ಶಾಸನಗಳು ದೇವರಲ್ಲಿ ಮತ್ತು ಧರ್ಮದಲ್ಲಿ ನಗರ್ಲೆಯ ಜನರಿಗಿದ್ದ ಶ್ರದ್ಧೆಯನ್ನು ತೋರಿಸುತ್ತವೆ.

ಶಿಲಾಶಾಸನಗಳು ದೇಶದ ಸಾಂಸ್ಕೃತಿಕ ಆಸ್ತಿ. ಭಾರತ ದೇಶದಲ್ಲಿರುವಷ್ಟು ಇಂತಹ ಶಾಸನಗಳು ಬೇರೆ ಯಾವುದೇ ದೇಶದಲ್ಲಿಲ್ಲ. ಅನೇಕ ಶಾಸನಗಳು ಸಾಹಿತ್ಯದ ಬೆಳವಣಿಗೆಯ ದಿಕ್ಸೂಚಿಗಳೂ ಆಗಿವೆ. ನಮ್ಮ ಕನ್ನಡ ಭಾಷೆ ಎಷ್ಟು ಸಿರಿವಂತಿಕೆಯನ್ನು ಹೊಂದಿದೆ, ಎಷ್ಟು ಪ್ರಾಚೀನ ಎಂಬ ಬಗೆಗೆ ಜೀವಂತ ಸಾಕ್ಷಿಗಳೆಂದರೆ ಶಿಲಾಶಾಸನಗಳು. ಅವು ನಾಶ ಹೊಂದದಂತೆ, ಅವುಗಳ ಅರ್ಥ ಮಾನ್ಯರಿಗೆ ಮಾತ್ರವಲ್ಲ, ಸಾಮಾನ್ಯರಿಗೂ ಆಗುವಂತೆ ಮಾಡುವುದು. ಇಂದಿನ ಆವಶ್ಯಕತೆ. ಅದನ್ನು ನಗರ್ಲೆಯ ನಾಗರಿಕರು ಸಮರ್ಥವಾಗಿ ಮಾಡಿದ್ದಾರೆ. ಎಲ್ಲಾ ಗ್ರಾಮಗಳ ಜನರಲ್ಲೂ ಶಾಸನಗಳ ಮಹತ್ತ್ವದ ಅರಿವು ಮೂಡಬೇಕು. ಈ ಬಗೆಗೆ ಪ್ರೇರಣೆಯನ್ನು ಕೊಟ್ಟಿರುವ ಶ್ರೀಯುತ ನಗರ್ಲೆ ಶಿವಕುಮಾರರಿಗೆ ನನ್ನ ಅಭಿನಂದನೆಗಳು.

ಶಾಸನಗಳೇ ನಮ್ಮ ಇತಿಹಾಸಕಾಧಾರ
ಮಾಸದಂತಿರಬೇಕು ಶಾಸನದ ಅರಿವು ।
ಶ್ವಾಸವಿಲ್ಲದ ದೇಹವಾಗುವುದು ಈ ದೇಶ
ಶಾಸನವು ನಶಿಸಿದರೆ ನಾಗರಾಜ॥

ವಿಜ್ಞಾನ ಬೆಳಕಿನ ಬ್ರಹ್ಮ ಸರ್ ಸಿ.ವಿ.ರಾಮನ್

ಬೆಳಕೆಂದರೆ ಬರೀ ಬೆಳಕಷ್ಟೇ ಅಲ್ಲ ಅದರೊಳಗೆ ಏನೋ ಇದೆ. ನೀರೆಂದರೆ ನೀರಷ್ಟೇ ಅಲ್ಲ ಅದರಲ್ಲಿಯೂ ಇನ್ನೇನೋ ಇದೆ. ಬಣ್ಣವೆಂದರೆ ಬಣ್ಣವಷ್ಟೇ ಅಲ್ಲ ಅದರೊಳಗೆ ಬೇರೇನೋ ಇದೆ. ನೀಲಾಕಾಶವೆಂದರೆ ಕೇವಲ ನೀಲಾಕಾಶವಷ್ಟೇ ಅಲ್ಲ ಅದರ ಆಚೆಗೂ ಏನೋ ಇದೆ..... ಹೀಗೆ ಕುತೂಹಲಗಳ ಗಣಿಯಾಗಿ, ಮಹಾಜ್ಞಾನಿ, ವಿಜ್ಞಾನಿಯಾಗಿ ಭಾರತದಲ್ಲಷ್ಟೇ ಅಲ್ಲದೆ ಇಡೀ ಏಷ್ಯಾದಲ್ಲಿ ಮೊಟ್ಟ ಮೊದಲಿಗೆ ಭೌತ ವಿಜ್ಞಾನದಲ್ಲಿ ನೊಬೆಲ್ ಪ್ರಶಸ್ತಿ ಪಡೆದು ಭಾರತದ ಕೀರ್ತಿಯನ್ನು ಪ್ರಪಂಚದ ಉದ್ದಗಲಕ್ಕೂ ಬೆಳಗಿದ ಪ್ರಚಂಡ ಪ್ರತಿಭೆ ಸರ್ ಸಿ.ವಿ.ರಾಮನ್.

1928ನೇ ಇಸವಿಯು ಭಾರತವು ವಿಜ್ಞಾನ ಇತಿಹಾಸದ ಹೆದ್ದಾರಿಯಲ್ಲಿ ಮಹತ್ವದ ಮೈಲಿಗಲ್ಲು ಸ್ಥಾಪಿಸಿದ ವಿಶಿಷ್ಟ ವರ್ಷ. ಒಂದು ರೀತಿ ವಿಜ್ಞಾನ ಪ್ರಪಂಚದಲ್ಲಿ ಭಾರತಕ್ಕೆ ಸುವರ್ಣೋದಯವಾದ ವರ್ಷವದು. ಆ ವರ್ಷ ಫೆಬ್ರವರಿ 28ರಂದು ಕನ್ನಡ ನಾಡಿನ ಬೆಂಗಳೂರಿನ ಪ್ರತಿಷ್ಠಿತ ಸೆಂಟ್ರಲ್ ಕಾಲೇಜಿನ ಭೌತಶಾಸ್ತ್ರ ಸಂಘದವರು ಸಿ.ವಿ. ರಾಮನ್ ಅವರನ್ನು ಉಪನ್ಯಾಸ ನೀಡಲು ಕರೆಸಿದ್ದರು. ಆ ಸಂದರ್ಭದಲ್ಲಿ ರಾಮನ್ನರು ಸೆಂಟ್ರಲ್ ಕಾಲೇಜಿನಲ್ಲಿ ಬೆಳಕನ್ನು ಕುರಿತು ತಮ್ಮದೇ ಆದ ಆವಿಷ್ಕಾರದ ಹೊಸ ಸಿದ್ಧಾಂತವನ್ನು ಪ್ರತಿಪಾದಿಸಿದರು. ಇದೇ ವಿಷಯ ಮುಂದೆ ಬೆಳಕಿನ ಬಗೆಗಿನ ಮಹತ್ವಪೂರ್ಣ ಸಂಶೋಧನೆಯಾಗಿ "ರಾಮನ್ ಪರಿಣಾಮ" ಎಂದು ಹೆಸರಾಗಿ ಅವರಿಗೆ ನೊಬೆಲ್ ಪುರಸ್ಕಾರ ತಂದುಕೊಟ್ಟದ್ದು ಈಗ ವಿಜ್ಞಾನ ಜಗತ್ತಿನ ಇತಿಹಾಸ. ಹಾಗೆಯೇ ಫೆಬ್ರವರಿ 28ರ ದಿನಕ್ಕೆ ವಿಶೇಷ ಮಹತ್ವ ನೀಡಿ ಪ್ರತಿವರ್ಷ ಅಂದು ರಾಷ್ಟ್ರೀಯ ವಿಜ್ಞಾನ ದಿನವನ್ನಾಗಿ ಆಚರಿಸಲಾಗುತ್ತಿದೆ. ರಾಮನ್ ಪರಿಣಾಮದ ಬೆಳಕಿನ ಸಂಶೋಧನೆ ನಡೆದದ್ದು ಮತ್ತು ರಾಷ್ಟ್ರೀಯ ವಿಜ್ಞಾನ ದಿನಾಚರಣೆ ಎರಡೂ ಒಂದೇ ದಿನ ಆಗಿರುವುದು ಹೆಚ್ಚು ಅರ್ಥಪೂರ್ಣವಾಗಿದೆ. ಈ ಹಿನ್ನೆಲೆಯಲ್ಲಿ ಫೆಬ್ರವರಿ 28ರ ರಾಷ್ಟ್ರೀಯ ವಿಜ್ಞಾನ ದಿನಾಚರಣೆಗೊಂದು ವಿಶಿಷ್ಟ ಮಹತ್ವವಿದೆ.

ಬೆಳಕಿನ ಆವಿಷ್ಕಾರದ ಹಾದಿಯಲ್ಲಿ ವಿಜ್ಞಾನ ವಿಶ್ವಕ್ಕೆ ಹೊಸಬೆಳಕು ನೀಡಿದ ಚಂದ್ರಶೇಖರ ವೆಂಕಟರಾಮನ್ ಜನಿಸಿದ್ದು 1888ರ ನವೆಂಬರ್ 7ರಂದು. ತಮಿಳು ನಾಡಿನ ತಂಜಾವೂರು ಜಿಲ್ಲೆಯ ತಿರುಚಿನಾಪಳ್ಳಿ ಪಟ್ಟಣದ ಸಮೀಪದ ಅಯ್ಯನಪಟ್ಟಿ ಗ್ರಾಮ ಅವರ ಹುಟ್ಟೂರು. ತಂದೆ ಚಂದ್ರಶೇಖರ ಅಯ್ಯರ್ ವೃತ್ತಿಯಲ್ಲಿ ಭೌತಶಾಸ್ತ್ರ ಅಧ್ಯಾಪಕರು. ತಾಯಿ ಪಾರ್ವತಿ ಅಮ್ಮಾಳ್, ವಿದ್ಯಾವಂತ ಸುಸಂಸ್ಕೃತ ಕುಟುಂಬವಾದ್ದರಿಂದ ಬಾಲ್ಯದಲ್ಲೇ ರಾಮನ್ನರಿಗೆ ಒಳ್ಳೆ ಪರಿಸರ, ಪ್ರೋತ್ಸಾಹದ ವಾತಾವರಣವಿತ್ತು. ಹಾಗಾಗಿ ಚಿಕ್ಕಂದಿನಿಂದಲೇ ಪ್ರಚಂಡ ಪ್ರತಿಭೆಯಾಗಿ ಅರಳಿದ ರಾಮನ್ ತಮ್ಮ 11ನೇ ವಯಸ್ಸಿನಲ್ಲೇ ಮೆಟ್ರಿಕ್ಯುಲೇಷನ್ ಪರೀಕ್ಷೆಯಲ್ಲಿ ಮೊದಲ ರ್‍ಯಾಂಕಿನೊಂದಿಗೆ ಉತ್ತೀರ್ಣರಾಗಿದ್ದರು. ನಂತರ 2 ವರ್ಷಗಳಲ್ಲಿ ಯೂನಿವರ್ಸಿಟಿಯ ಇಂಟರ್ ಪರೀಕ್ಷೆಯಲ್ಲಿ ಪ್ರಥಮ ದರ್ಜೆಯಲ್ಲಿ ತೇರ್ಗಡೆಯಾಗಿ ತಮ್ಮ 13ನೇ ವಯಸ್ಸಿಗೇ ಬಿ.ಎ. ವಿದ್ಯಾಭ್ಯಾಸಕ್ಕಾಗಿ ಮದರಾಸಿನ ಪ್ರತಿಷ್ಠಿತ ಪ್ರೆಸಿಡೆನ್ಸಿ ಕಾಲೇಜಿಗೆ ದಾಖಲಾಗಿದ್ದರು. ಆ ಕಾಲೇಜಿನಲ್ಲೇ ಅತ್ಯಂತ ಕಿರಿಯ ವಯಸ್ಸಿನ ವಿದ್ಯಾರ್ಥಿಯಾಗಿದ್ದ ಅವರು 1904ರಲ್ಲಿ ಇಂಗ್ಲಿಷ್‌ನೊಂದಿಗೆ ಭೌತಶಾಸ್ತ್ರ ಅಧ್ಯಯನ ಮಾಡಿ ಚಿನ್ನದ ಪದಕದೊಂದಿಗೆ ಬಿ.ಎ. ಪದವಿ ಗಳಿಸಿದರು.



ಫೆಬ್ರವರಿ 28, ರಾಷ್ಟ್ರೀಯ ವಿಜ್ಞಾನ ದಿನ. ತನ್ನಿಮಿತ್ತ ಈ ಲೇಖನ.

1907 ಜನವರಿಯಲ್ಲಿ ಪದಕ ಮತ್ತು ಬಹುಮಾನದೊಡನೆ ಭೌತಶಾಸ್ತ್ರದಲ್ಲಿ ಪ್ರಥಮ ದರ್ಜೆಯಲ್ಲಿ ಎಂ.ಎ. ಪದವಿ ಪಡೆದ ರಾಮನ್ನರು ಅದೇ ವರ್ಷ ಐಎಫ್‌ಎಸ್ ಪರೀಕ್ಷೆಯಲ್ಲಿ ಪ್ರಥಮ ದರ್ಜೆಯಲ್ಲಿ ಉತ್ತೀರ್ಣರಾಗಿದ್ದರು. ಅದೇ ಸಮಯಕ್ಕೆ ಅವರಿಗೆ ಕೊಲ್ಕತ್ತಾದ ಅಕೌಂಟೆಂಟ್ ಜನರಲ್ ಕಚೇರಿಯಲ್ಲಿ ಸಹಾಯಕ ಜನರಲ್ ಅಕೌಂಟೆಂಟ್ ಆಗಿ ಸರ್ಕಾರಿ ಹುದ್ದೆಯೂ ದೊರೆತಿತ್ತು. ಸರ್ಕಾರಿ ಕೆಲಸದಲ್ಲಿದ್ದರೂ ಕುತೂಹಲ ಪ್ರವೃತ್ತಿಯ ರಾಮನ್ ಭೌತಶಾಸ್ತ್ರವನ್ನು ಬಿಡಲಾರದೆ ಹೋದರು. ಹಾಗಾಗಿ ಮಹೇಂದ್ರಲಾಲ್ ಸರಕಾರ್ ಎಂಬ ವೈದ್ಯರು ಸ್ಥಾಪಿಸಿದ್ದ ಕೊಲ್ಕತ್ತಾದ "ನ್ಯಾಷನಲ್ ಇನ್‌ಸ್ಟಿಟ್ಯೂಟ್ ಫಾರ್ ಕಲ್ಟಿವೇಷನ್ ಆಫ್ ಸೈನ್ಸ್" ಸಂಸ್ಥೆಗೆ ಅವರು ಸದಸ್ಯರಾಗಿ ಸೇರಿ ನಂತರ ಅಲ್ಲಿ ಕಾರ್ಯದರ್ಶಿಯೂ ಆದರು.

ರಾಮನ್ನರ ವಿಜ್ಞಾನದ ಪ್ರಭೆ ಪ್ರಪಂಚದಾದ್ಯಂತ ಪಸರಿಸುತ್ತಿದ್ದಂತೆಯೇ 1921ರಲ್ಲಿ ಇಂಗ್ಲೆಂಡಿನಲ್ಲಿ ಬೇಸಿಗೆಯ ವಿಜ್ಞಾನ ಮೇಳದಲ್ಲಿ ಭಾಗವಹಿಸಲು ಅವರಿಗೆ ವಿಶೇಷ ಆಹ್ವಾನ. ಇದು ರಾಮನ್ ಮತ್ತು ಅವರು ಪ್ರತಿನಿಧಿಸುತ್ತಿದ್ದ ಭಾರತಕ್ಕೆ ಗೌರವವಾಗಿತ್ತು. ಹಡಗಿನಲ್ಲಿ ಪ್ರಯಾಣ ಬೆಳೆಸಿದ ಅವರು ಸಮುದ್ರದ ನೀರನ್ನೇ ಕುತೂಹಲದಿಂದ ನೋಡುತ್ತಾ ಸಮುದ್ರದ ನೀರು ನೀಲಿಯಾಗಿರುವುದೇಕೆ? ಎಂಬ ಪ್ರಶ್ನೆಯನ್ನು ತಲೆಯಲ್ಲಿ ತುಂಬಿಕೊಂಡರು. ಇಂಗ್ಲೆಂಡಿನ ವಿಜ್ಞಾನ ಮೇಳದಲ್ಲಿ ಭಾಗವಹಿಸಿ ಮತ್ತೆ ಭಾರತಕ್ಕೆ ಹಡಗಿನಲ್ಲಿ ಹಿಂದಿರುಗಿದ ಅವರು ಸೂರ್ಯನ ಬಿಸಿಲಿನಲ್ಲಿ ಸಮುದ್ರ ನೀಲಿ ಬಣ್ಣ ತಾಳುತ್ತಿರುವುದನ್ನು ಸೂಕ್ಷ್ಮವಾಗಿ ಗಮನಿಸಿದರು. "ಸೂರ್ಯನ ರಶ್ಮಿಯ ಬೆಳಕು ಈ ನೀರಿನಲ್ಲಿ ಹರಡಿ ಹೋಗಿರುವುದೇ ಸಮುದ್ರದ ನೀರು ನೀಲಿಯಾಗಿರುವುದಕ್ಕೆ ಕಾರಣ" ಎಂಬ ಸತ್ಯವನ್ನು ಕಂಡುಕೊಂಡರು. ಈ ವಿಷಯವನ್ನು ಆಳವಾಗಿ ಚಿಂತಿಸಿ ``THE COLOUR OF THE SEA" ಪ್ರಬಂಧವನ್ನು ಹಡಗಿನಲ್ಲಿ ಪ್ರಯಾಣಿಸುತ್ತಲೇ ಬರೆದರು. ನಂತರ ಅದನ್ನು ``NATURE'' ಪತ್ರಿಕೆಗೆ ಕಳುಹಿಸಿದರು. ಇದು ರಾಮನ್ ಪರಿಣಾಮದ ಬೆಳಕಿನ ಸಂಶೋಧನೆಗೆ ನಾಂದಿಯಾಯಿತು.



ಬನ್ನೂರು ಕೆ.ರಾಜು
ಸಾಹಿತಿ, ಪತ್ರಕರ್ತ
ಮೊ: 94815 33167

1922ರಲ್ಲಿ ಲಂಡನ್ನಿನ ರಾಯಲ್ ಸೊಸೈಟಿಯ ಸದಸ್ಯರಾದ ರಾಮನ್ನರು 1924ರಲ್ಲಿ ಕೆನಡಾ, ಅಮೆರಿಕ ಮುಂತಾದ ದೇಶಗಳ ಪ್ರವಾಸ ಕೈಗೊಂಡರು. ಕ್ಯಾಲಿಫೋರ್ನಿಯಾದ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಅವರಿಗೆ ಸಂದರ್ಶಕ ಪ್ರಾಧ್ಯಾಪಕ ಹುದ್ದೆ ನೀಡಿತ್ತು. ಅವರ ಪ್ರತಿಭೆಯ ಪ್ರಖರ ಹೆಚ್ಚಾದಂತೆಲ್ಲಾ ಪ್ರಪಂಚದ ಪ್ರಸಿದ್ಧ ವಿಜ್ಞಾನಿಗಳೆಲ್ಲಾ ರಾಮನ್ನರ ಒಡನಾಟಕ್ಕೆ ಹಾತೊರೆಯುತ್ತಿದ್ದರು. ಹಾಗಾಗಿ ದೇಶ ವಿದೇಶಗಳ ವಿಜ್ಞಾನಿಗಳೊಂದಿಗೆ ವಿಚಾರ ವಿನಿಮಯ, ಚರ್ಚೆ ಮುಂತಾಗಿ ಅವರು ತಮ್ಮನ್ನು ಸಂಪೂರ್ಣ ವಿಜ್ಞಾನಕ್ಕೆ ತೆರೆದುಕೊಂಡಿದ್ದರು.

ಹೀಗೆ ಸರಳ ಉಪಕರಣಗಳಿಂದಲೇ ಅತ್ಯದ್ಭುತ ಸಂಶೋಧನೆ ನಡೆಸಿ ತಮ್ಮ ರಾಮನ್ ಪರಿಣಾಮಕ್ಕೆ 1930ರಲ್ಲಿ ನೊಬೆಲ್ ಪ್ರಶಸ್ತಿ ಗಳಿಸಿದರು. ಭಾರತದ ಕೀರ್ತಿಗೊಂದು ಹೊನ್ನಗರಿ ಮೂಡಿಸಿತು. "ಪ್ರಾಯೋಗಿಕ ಭೌತಶಾಸ್ತ್ರದಲ್ಲಿ ರಾಮನ್ ಪರಿಣಾಮವು 1920ರ ದಶಕದ ಮೂರು ಅಥವಾ ನಾಲ್ಕು ವಿಶೇಷ ಸಂಶೋಧನೆಗಳಲ್ಲಿ ಒಂದಾಗಿದೆ. ಮತ್ತು ವಸ್ತುಗಳ ರಚನೆಯನ್ನು ತಿಳಿಯಲು ಮಹತ್ವದ್ದಾಗಿದೆ" ಎಂದು ಅಂದಿನ ರಾಯಲ್ ಸೊಸೈಟಿ ಅಧ್ಯಕ್ಷರೂ ಆಗಿದ್ದ ಖ್ಯಾತ ವಿಜ್ಞಾನಿ ರುದರ್‌ಫೋರ್ಡ್ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ. ಹಾಗೆಯೇ ರಾಮನ್ನರ ಸಂಶೋಧನೆ ನೋಡಿ ಪ್ರಸಿದ್ಧ ವಿಜ್ಞಾನಿ ಐನ್‌ಸ್ಟೈನ್ ಸಹ ಮುಕ್ತಕಂಠದಿಂದ ಪ್ರಶಂಸಿಸಿದ್ದಾರೆ.

ರಾಮನ್ 1931ರಲ್ಲಿ ಬೆಂಗಳೂರಿನಲ್ಲಿರುವ ಟಾಟಾ ವಿಜ್ಞಾನ ಸಂಸ್ಥೆಯ ಪ್ರಪ್ರಥಮ ಭಾರತೀಯ ಅಧ್ಯಕ್ಷರಾಗಿ ನೇಮಕವಾಗಿದ್ದರು. ಅಲ್ಲಿ ನೂರಾರು ಭಾರತೀಯ ಯುವ ವಿಜ್ಞಾನಿಗಳಿಗೆ ಮಾರ್ಗದರ್ಶಕರಾಗಿದ್ದುಕೊಂಡು ಅಲ್ಲಿನ ವಿಜ್ಞಾನದ ಬೆಳವಣಿಗೆಗೆ ಬೆನ್ನೆಲುಬಾಗಿದ್ದರು. ಕೆಲಕಾಲ ಭಾರತೀಯ ವಿಜ್ಞಾನ ಮಂದಿರದ ನಿರ್ದೇಶಕರಾಗಿಯೂ ಸೇವೆ ಸಲ್ಲಿಸಿದ ಅವರು 1934 ಏಪ್ರಿಲ್‌ನಲ್ಲಿ ಇಂಡಿಯನ್ ಅಕಾಡೆಮಿ ಆಫ್ ಸೈನ್ಸ್‌ನ್ನು ಬೆಂಗಳೂರಿನಲ್ಲೇ ಸ್ಥಾಪಿಸಿ ತಮ್ಮ ವಿಜ್ಞಾನ ಕೈಂಕರ್ಯದಿಂದ ವಿಜ್ಞಾನದ ಅಭಿವೃದ್ಧಿಯಲ್ಲೇ ಆನಂದ ಕಾಣುವ ಅನುಪಮ ವಿಜ್ಞಾನಿ ಎನಿಸಿದರು. ಮೈಸೂರು ಸರ್ಕಾರ ಅವರ ಸಂಶೋಧನೆಗೆ ಅನುಕೂಲವಾಗಲೆಂದು 24 ಎಕರೆ ಭೂಮಿಯನ್ನು ಬೆಂಗಳೂರಿನಲ್ಲಿ ನೀಡಿತು. ಅದು ಸಾರ್ಥಕವಾಗಬೇಕೆಂಬ ಸದುದ್ದೇಶದಿಂದ ಅವರು 1941ರಲ್ಲಿ ತಾವು ಪ್ರಾಧ್ಯಾಪಕ ವೃತ್ತಿಯಿಂದ ನಿವೃತ್ತರಾದ ನಂತರ ತಮ್ಮ ಸ್ವಂತ ಸಂಶೋಧನಾಲಯವಾಗಿ 1948ರಲ್ಲಿ "ರಾಮನ್ ರಿಸರ್ಚ್ ಇನ್‌ಸ್ಟಿಟ್ಯೂಟ್'' ಸಂಸ್ಥೆಯನ್ನು ಬೆಂಗಳೂರಿನಲ್ಲಿ ಸ್ಥಾಪಿಸಿದರು. ತಮಗೆ ಬಂದ ನೊಬೆಲ್ ಬಹುಮಾನದ ಹಣವನ್ನೆಲ್ಲಾ ಈ ಸಂಸ್ಥೆಗೇ ವಿನಿಯೋಗಿಸಿ ಭವಿಷ್ಯದ ಯುವ ವಿಜ್ಞಾನಿಗಳ ಸಂಶೋಧನೆಗೆ ಅನುಕೂಲ ಮಾಡಿಕೊಟ್ಟರು. ಇಲ್ಲಿ ಸುಂದರವಾದ ಒಂದು ವಿಜ್ಞಾನ ವಸ್ತುಸಂಗ್ರಹಾಲಯವನ್ನು ನಿರ್ಮಿಸಿದರು.

ವಿಜ್ಞಾನ ಜಗತ್ತಿನ ದೈತ್ಯ ಪ್ರತಿಭೆಯಾಗಿ ಅಪಾರ ಸಾಧನೆಗೈದ ರಾಮನ್ ಅವರಿಗೆ 1924ರಲ್ಲಿ ಲಂಡನ್ನಿನ ರಾಯಲ್ ಸೊಸೈಟಿಯ ಫೆಲೋ, 1925ರಲ್ಲಿ ರಷ್ಯನ್ ಅಕಾಡೆಮಿ ಆಫ್ ಸೈನ್ಸ್‌ನ ಗೌರವ, 1928ರಲ್ಲಿ ರೋಮನ್ ವಿಜ್ಞಾನ ಸಂಘದಿಂದ ಮೆಟ್ಯೂಸಿ ಪದಕ, 1929ರಲ್ಲಿ ಬ್ರಿಟಿಷ್ ಪ್ರಭುತ್ವದಿಂದ ನೈಟ್ ಪದವಿಯೊಡನೆ ಸರ್ ಬಿರುದು, 1930ರಲ್ಲಿ ನೊಬೆಲ್ ಪ್ರಶಸ್ತಿ ಮತ್ತು ಅದೇ ವರ್ಷ ಲಂಡನ್ನಿನ ರಾಯಲ್ ಸೊಸೈಟಿಯಿಂದ ಹ್ಯೂಸ್ ಪ್ರಶಸ್ತಿ, 1954ರಲ್ಲಿ ಭಾರತರತ್ನ ಪ್ರಶಸ್ತಿ, ದೇಶ–ವಿದೇಶಗಳ ಹಲವಾರು ಪ್ರತಿಷ್ಠಿತ ವಿವಿಗಳಿಂದ ಗೌರವ ಡಾಕ್ಟರೇಟ್ ಪದವಿಗಳ ಸುರಿಮಳೆ ಸೇರಿದಂತೆ ಅಸಂಖ್ಯಾತ ಗೌರವಗಳು, ಪ್ರಶಸ್ತಿ–ಪುರಸ್ಕಾರಗಳು ಸಂದಿವೆ. ಸಿ.ವಿ.ರಾಮನ್ ಅವರು 1970 ನವೆಂಬರ್ 21ರಂದು ನಿಧನರಾದರೂ ಅವರು ಎಂದೆಂದಿಗೂ ಅಜರಾಮರರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Vishveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಮೈಸೂರು ಮಿತ್ರ

ಮಾಜಿ ಸಿಎಂ ಬಿ.ಎಸ್.ಯಡಿಯೂರಪ್ಪ ಹುಟ್ಟುಹಬ್ಬ: ಗೋ ಪೂಜೆ, ಮೇವು ವಿತರಣೆ



ಮಾಜಿ ಸಿಎಂ ಬಿ.ಎಸ್.ಯಡಿಯೂರಪ್ಪ ಅವರ ಹುಟ್ಟುಹಬ್ಬದ ಅಂಗವಾಗಿ ಗೋವುಗಳಿಗೆ ಪೂಜೆ ಸಲ್ಲಿಸಿ, ಮೇವು ವಿತರಿಸಲಾಯಿತು.

ಮೈಸೂರು,ಫೆ.27–ಮೈಸೂರಿನ ಚಾಮುಂಡಿಬೆಟ್ಟದ ತಪ್ಪಲಲ್ಲಿರುವ ಪಿಂಜರಾ ಪೋಲ್‌ನಲ್ಲಿ ಶ್ರೀರಾಮ ಗೆಳೆಯರ ಬಳಗದ ವತಿಯಿಂದ ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರ ಭಾವ ಚಿತ್ರ ಹಿಡಿದು ಗೋವುಗಳಿಗೆ ಪೂಜೆ ಸಲ್ಲಿಸಿ, ಆನಂತರ ಮೇವು ವಿತರಿಸಲಾಯಿತು.

ಶ್ರೀರಾಮ ಗೆಳೆಯರ ಬಳಗದ ಅಧ್ಯಕ್ಷ ಸಂದೀಪ್ ಈ ವೇಳೆ ಮಾತನಾಡಿ, ಬಿ.ಎಸ್.ಯಡಿಯೂರಪ್ಪನವರು ಜನ ನಾಯಕ. ಜನರಿಂದ ಜನರಿಗೋಸ್ಕರ ಬದು ಕುತ್ತಿದ್ದಾರೆ. ಯಾವತ್ತೂ ಮುಖ್ಯಮಂತ್ರಿ ಆಗಬೇಕೆಂದು ಬಯಸಿದವರಲ್ಲ. ಅವ ರಲ್ಲಿ ಇರುವ ನಿಸ್ವಾರ್ಥ ಸೇವೆ ಪರಿಗಣಿಸಿ ಜನರೇ ಅವರನ್ನು ಮುಖ್ಯಮಂತ್ರಿ ಮಾಡಿದ್ದರು. ಯಡಿಯೂರಪ್ಪನವರು ನೂರು ವರ್ಷ ಸುಖ ಸಂತೋಷದಿಂದ ಬಾಳಲಿ, ನಾಡಿನ ಜನರಿಗೆ ಇನ್ನೂ ಹೆಚ್ಚಿನದಾಗಿ ಸೇವೆ ಮಾಡಲು ಭಗವಂತನು ಹೆಚ್ಚಿನ ದಾಗಿ ಶಕ್ತಿ ನೀಡಲಿ ಎಂದು ಹಾರೈಸಿದರು. ಕಷ್ಟಗಳನ್ನು ಮೆಟ್ಟಿ ನಿಂತು ರಾಜ್ಯದ ಮುಖ್ಯಮಂತ್ರಿಯಾಗಿ ಇಂದು ಜನರ ಸೇವೆಗೆ ತಮ್ಮ ಜೀವನವನ್ನೇ ಮುಡಿಪಾಗಿಟ್ಟ ವ್ಯಕ್ತಿ ಯಡಿಯೂರಪ್ಪನವರು ಎಂದರು.

ಕಾರ್ಯಕ್ರಮದಲ್ಲಿ ಶ್ರೀರಾಮ ಗೆಳಯರ ಬಳಗದ ಅಧ್ಯಕ್ಷರಾದ ಸಿ.ಸಂದೀಪ್, ಧರ್ಮೇಂದ್ರ ಮುಖಂಡರಾದ ಲೋಹಿತ್, ಶಿವರಾಜ್, ವಿನಯ್, ರಾಕೇಶ್, ಅಂಬಳೆ ಶಿವಣ್ಣ, ಕಿರಣ್, ಧನುಷ್, ಶ್ರೀಕಂಠ ಮೂರ್ತಿ, ಅಜಯ್ ಶಾಸ್ತ್ರಿ, ಪವನ್, ಬಸವರಾಜು ಮುಂತಾದವರು ಕಾರ್ಯಕ್ರಮದಲ್ಲಿ ಹಾಜರಿದ್ದರು.



ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪನವರ ಜನ್ಮದಿನಾಚರಣೆ ಅಂಗವಾಗಿ 101 ಗಣಪತಿ ದೇವಸ್ಥಾನದಲ್ಲಿ ಬಿ.ಎಸ್.ಯಡಿಯೂರಪ್ಪ ಅಭಿಮಾನಿ ಬಳಗದಿಂದ ವಿಶೇಷ ಪೂಜೆ ಸಲ್ಲಿಸಿ, ಸಿಹಿ ವಿತರಿಸಲಾಯಿತು. ಮಾಜಿ ಕಾರ್ಪೊರೇಟರ್ ಮಾ.ವಿ. ರಾಮಪ್ರಸಾದ್, ಎಂ.ಡಿ.ಪಾರ್ಥಸಾರಥಿ, ಜಗದೀಶ್, ಬಿಜೆಪಿ ಮೈಸೂರು ನಗರ ಕಾರ್ಯಕಾರಿಣಿ ಸದಸ್ಯ ಸುತ್ತೂರು ಶ್ರೀಕಂಠಮೂರ್ತಿ, ಬಿಜೆಪಿ ಎನ್.ಆರ್. ಕ್ಷೇತ್ರದ ಯುವ ಮೋರ್ಚಾ ಅಧ್ಯಕ್ಷ ಡಿ.ಲೋಹಿತ್, ಮುಖಂಡರಾದ ಸಂದೀಪ್, ಚಂದ್ರಶೇಖರ್, ಶಿವರಾಜು, ಹೂಟಗಳ್ಳಿ ನಾಗರಾಜು, ಬಸವರಾಜು, ವೀರಗಾಸೆ ಕಲಾವಿದರಾದ ಅಂಬಾಳೆ ಶಿವಣ್ಣ, ಕಾಪು ಸಿದ್ದಲಿಂಗಸ್ವಾಮಿ ಸ್ನೇಹ ಬಳಗದ ಉಪಾಧ್ಯಕ್ಷರಾದ ಸುಚೇಂದ್ರ, ಪಾರ್ವತಪ್ಪ, ನಂದನ್, ಧರ್ಮೇಂದ್ರ, ಮಹದೇವಸ್ವಾಮಿ ಮತ್ತಿತರರು ಉಪಸ್ಥಿತರಿದ್ದರು.

ಸ್ವರ್ಣ ನೃಸಿಂಹ ದತ್ತ ಸಾಯಿ ಪೀಠಿಕಾ ಸೇವಾ ಟ್ರಸ್ಟ್‌ನಿಂದ ವಾಕಥಾನ್



ಮೈಸೂರು, ಫೆ. 27– ಮೈಸೂರಿನ ಸ್ವರ್ಣ ನೃಸಿಂಹ ದತ್ತ ಸಾಯಿ ಪೀಠಿಕಾ ಸೇವಾ ಟ್ರಸ್ಟ್ ವತಿಯಿಂದ ನಗರದ ಕುಕ್ಕರ ಹಳ್ಳಿ ಕೆರೆಯ ಆವರಣದಲ್ಲಿ ಪರಿಸರ ಉಳಿಸಿ ಆರೋಗ್ಯವಂತ ಸಮಾಜ ನಿರ್ಮಾಣ ಮಾಡುವ ಸಲುವಾಗಿ ವಾಕಥಾನ್ ನಡೆಸಲಾಯಿತು.

ಟ್ರಸ್ಟ್‌ನ ಪ್ರತಿ ತಿಂಗಳ ಸಮಾಜಮುಖಿ ಕಾರ್ಯಕ್ರಮದ ಅಂಗವಾಗಿ 'ಆರೋಗ್ಯವೇ ಭಾಗ್ಯ'–ವ್ಯಾಯಾಮ ದೇಹಕ್ಕೆ ಅತ್ಯಗತ್ಯ ಮತ್ತು ಪ್ರಾಕೃತಿಕ ವನ್ಯ ಸಂಪತ್ತನ್ನು ಕಾಪಾಡುವುದು ನಮ್ಮೆಲ್ಲರ ಜವಾಬ್ದಾರಿ ಎಂಬ ಸಂದೇಶವನ್ನು ಸಮಾಜಕ್ಕೆ ಸಾರುವ ಉದ್ದೇಶದಿಂದ ಆಯೋಜಿಸಲಾಗಿದ್ದ ವಾಕಥಾನ್ ಕಾರ್ಯಕ್ರಮಕ್ಕೆ ಅರ್ಜುನ ಅವಧೂತರು ತಾವೂ ವಾಕಥಾನ್‌ನಲ್ಲಿ ಭಾಗವಹಿಸಿದ್ದರು.

ಹಲವು ಜಿಲ್ಲೆಗಳಿಂದ ನೂರಾರು ಮಂದಿ ವಾಕಥಾನ್‌ನಲ್ಲಿ ಪಾಲ್ಗೊಂಡು, ಪ್ಲಾಸ್ಟಿಕ್ ಮಾಲಿನ್ಯ ತಡೆಗಟ್ಟಿ, ಪ್ಲಾಸ್ಟಿಕ್ ಬಳಕೆ ನಿಲ್ಲಿಸಿ–ಜೀವ ಸಂಕುಲ ಉಳಿಸಿ, ಪರಿಸರ ರಕ್ಷಣೆ –ನಮ್ಮೆಲ್ಲರ ಹೊಣೆ, ಪ್ಲಾಸ್ಟಿಕ್ ಮುಕ್ತ ಮೈಸೂರು– ಮಾಡೋಣ ಬನ್ನಿ ಕೈ ಜೋಡಿಸಿ, ಪ್ಲಾಸ್ಟಿಕ್ ಬಳಕೆ ಕೈಬಿಡಿ–ಬಟ್ಟೆ ಬ್ಯಾಗ್ ಬಳಸಿ, ಎಲ್ಲೆಂದರಲ್ಲಿ ಕಸ ಹಾಕಬೇಡಿ–ಕಸದ ಗಾಡಿಯವರಿಗೆ ಕೊಡಿ ಎಂಬ ಸ್ಲೋಗನ್ ಇರುವ ಫಲಕಗಳನ್ನು ಹಿಡಿದು ಜಾಗೃತಿ ಮೂಡಿಸಿದರು.

ನಂತರ ಕಾಮಾಕ್ಷಿ ಆಸ್ಪತ್ರೆಯ ಸಹಯೋಗದೊಂದಿಗೆ ವಾಕಥಾನ್‌ನಲ್ಲಿ ಭಾಗವಹಿಸಿದ್ದವರಿಗೆ ವೈದ್ಯಕೀಯ ಉಚಿತ ಆರೋಗ್ಯ ತಪಾಸಣೆ ಶಿಬಿರ ನಡೆಸಲಾಯಿತು. ಈ ವೇಳೆ ನೂರಾರು ಮಂದಿ ಶುಗರ್, ಬಿಪಿ, ತೂಕ, ಪಲ್ಸ್ ರೇಟ್ ಪರೀಕ್ಷೆ ಮಾಡಿಸಿಕೊಂಡರು.

ಅಜಾದಿ ಅಮೃತ ಮಹೋತ್ಸವ ಪುಸ್ತಕ ಬಿಡುಗಡೆ



ಮೈಸೂರು,ಫೆ.27–75ನೇ ಸ್ವಾತಂತ್ರ್ಯ ಅಮೃತ ಮಹೋತ್ಸವದ ಅಂಗವಾಗಿ ಶ್ರೀಮತಿ ಕೆ.ಬಿ.ಸುಮಾರಾವ್ ಅವರು ರಚಿಸಿರುವ 'ಅಜಾದಿ ಅಮೃತ ಮಹೋತ್ಸವ್' ಪುಸ್ತಕವನ್ನು ಜಗದ್ಗುರು ಮಧ್ವಾಚಾರ್ಯಪೀಠ ಪರಂಪರೆಯಲ್ಲಿ ಬಂದ ಶ್ರೀ ವಿಶ್ವ ಪ್ರಸನ್ನ ತೀರ್ಥರು ಬಿಡುಗಡೆಗೊಳಿಸಿದರು. ಅಖಂಡ ಭಾರತದ ಚಿತ್ರ ಸಮೇತ, ದಿನಚರಿಯುಳ್ಳ ಸ್ವಾತಂತ್ರ್ಯ ಹೋರಾಟಗಾರರ ಬಗ್ಗೆ ಬರೆದ ದಿನಚರಿ ಪುಸ್ತಕ ಇದಾಗಿದೆ. ಕಾರ್ಯಕ್ರಮದಲ್ಲಿ ಶ್ರೀಮತಿ ಸತ್ಯಶ್ರೀ ಬಿ ಶ್ಯಾಮ್, ಶ್ರೀಮತಿ ಸುಮಾರಾವ್ ವಾದಿರಾಜ್, ಶ್ರೀಮತಿ ಶ್ರೀದೇವಿ ರಮೇಶ್, ಶ್ರೀಮತಿ ಆಶಾ ಕುಮಾರಿ, ಚಕ್ರಪಾಣಿ, ಕುಮಾರಿ ಫಲ್ಗುಣಿ, ಕುಮಾರಿ ಸುಶ್ಮಿತಾ ಉಪಸ್ಥಿತರಿದ್ದರು.

ಎಸ್‌ಸಿ ವಿದ್ಯಾರ್ಥಿಗಳಿಗೆ ಪ್ರೋತ್ಸಾಹಧನಕ್ಕೆ ಅರ್ಜಿ ಸಲ್ಲಿಸುವ ಅವಧಿ ವಿಸ್ತರಣೆ

ಮೈಸೂರು,ಫೆ.27–ಸಮಾಜ ಕಲ್ಯಾಣ ಇಲಾಖಾ ವತಿಯಿಂದ 2023–24ನೇ ಶೈಕ್ಷಣಿಕ ಸಾಲಿನಲ್ಲಿ ಮೆಟ್ರಿಕ್ ನಂತರದ ದ್ವಿತೀಯ ಪಿಯುಸಿ, 3 ವರ್ಷದ ಪಾಲಿಟೆಕ್ನಿಕ್ ಡಿಪ್ಲೊಮಾ, ಪದವಿ, ಸ್ನಾತಕೋತ್ತರ ಪದವಿ ಹಾಗೂ ವೃತ್ತಿಪರ ಕೋರ್ಸ್‌ಗಳನ್ನು ಪೂರ್ಣಗೊಳಿಸಿ ಪ್ರಥಮ ಪ್ರಯತ್ನದಲ್ಲಿ, ಪ್ರಥಮ ಶ್ರೇಣಿಯಲ್ಲಿ ಉತ್ತೀರ್ಣರಾದ ಪರಿಶಿಷ್ಟ ಜಾತಿಯ ವಿದ್ಯಾರ್ಥಿಗಳಿಗೆ ಪ್ರೋತ್ಸಾಹಧನ ನೀಡಲಾಗುತ್ತಿದೆ. ರಾಜ್ಯ ವಿದ್ಯಾರ್ಥಿವೇತನ ತಂತ್ರಾಂಶದ www. sw.kar.nic.in ಮೆಟ್ರಿಕ್ ನಂತರದ ಪ್ರೋತ್ಸಾಹ ಧನಕ್ಕೆ ಅರ್ಜಿ ಸಲ್ಲಿಸುವ ಅವಧಿಯನ್ನು ಫೆ.29ರವರೆಗೆ ವಿಸ್ತರಿಸಿದ್ದು, ಅರ್ಹ ಎಸ್‌ಸಿ ವಿದ್ಯಾರ್ಥಿಗಳು ನಿಗದಿತ ಸಮಯದೊಳಗೆ ದಾಖಲೆಗಳೊಂದಿಗೆ ಕಚೇರಿಗೆ ಅರ್ಜಿ ಸಲ್ಲಿಸಬೇಕು. ಮಾಹಿತಿಗೆ ದೂಸಂ.–0821–2520910 ಸಂಪರ್ಕಿಸಿ.

ಸಕಾರಾತ್ಮಕ ಶಕ್ತಿ ಮನುಷ್ಯನ ಜೀವನದಲ್ಲಿ ಆತ್ಮಾಭಿಮಾನ ಹೆಚ್ಚಿಸಿಕೊಳ್ಳಲು ಸಹಾಯ



ಮೈಸೂರಿನ ಟಿಟಿಎಲ್ ಟ್ರಸ್ಟ್, ಟಿಟಿಎಲ್ ವಾಣಿಜ್ಯ ವ್ಯವಹಾರ ನಿರ್ವಹಣಾ ಕಾಲೇಜು, ಟಿಟಿಎಲ್ ಸ್ವತಂತ್ರ ಪದವಿ ಪೂರ್ವ ಕಾಲೇಜು ಮತ್ತು ಯುವ ರೆಡ್‌ಕ್ರಾಸ್ ಘಟಕ, ರಾಷ್ಟ್ರೀಯ ಸೇವಾ ಯೋಜನೆ ಘಟಕ, ಐಕ್ಯೂಎಸಿ ಆಯೋಜಿಸಿದ್ದ ಸಕಾರಾತ್ಮಕತೆಯ ಶಕ್ತಿ ಉಪನ್ಯಾಸ ಕಾರ್ಯಕ್ರಮವನ್ನು ಬ್ರಹ್ಮಕುಮಾರಿ ಬಿ.ಕೆ.ಮಂಜುಳಾ ಉದ್ಘಾಟಿಸಿದರು.

ಮೈಸೂರು, ಫೆ. 27– ಸಕಾರಾತ್ಮಕ ಶಕ್ತಿ ಮನುಷ್ಯನ ಜೀವನದಲ್ಲಿ ಆತ್ಮಭಿಮಾನ, ಆತ್ಮಗೌರವ ಹೆಚ್ಚಿಸಿಕೊಳ್ಳಲು ಸಹಾಯವಾಗುತ್ತದೆ ಎಂದು ವಿದ್ಯಾರ್ಥಿಗಳಲ್ಲಿ ಬ್ರಹ್ಮಕುಮಾರಿಸ್ ಸೆಂಟರ್ ಇನ್‌ಚಾರ್ಜ್‌ನ ಬ್ರಹ್ಮ ಕುಮಾರಿ ಬಿ.ಕೆ.ಮಂಜುಳಾ ಅರಿವು ಮೂಡಿಸಿದರು.

ಮೈಸೂರಿನ ಟಿಟಿಎಲ್ ಟ್ರಸ್ಟ್, ಟಿಟಿಎಲ್ ವಾಣಿಜ್ಯ ವ್ಯವಹಾರ ನಿರ್ವಹಣಾ ಕಾಲೇಜು, ಟಿಟಿಎಲ್ ಸ್ವತಂತ್ರ ಪದವಿ ಪೂರ್ವ ಕಾಲೇಜು ಮತ್ತು ಯುವ ರೆಡ್‌ಕ್ರಾಸ್ ಘಟಕ, ರಾಷ್ಟ್ರೀಯ ಸೇವಾ ಯೋಜನೆ ಘಟಕ, ಐಕ್ಯೂಎಸಿ ಸಂಯುಕ್ತವಾಗಿ ಆಯೋಜಿಸಿದ್ದ ಸಕಾರಾತ್ಮಕತೆಯ ಶಕ್ತಿ ಉಪನ್ಯಾಸ ಕಾರ್ಯಕ್ರಮದಲ್ಲಿ ಮಾತನಾಡಿದರು.

ಸಕಾರಾತ್ಮಕ ಶಕ್ತಿ ಹಾಗೂ ನಕಾರಾತ್ಮಕ ಶಕ್ತಿ ಎರಡು ನಮ್ಮಲ್ಲಿಯೇ ಇರುತ್ತದೆ. ಸಕಾರಾತ್ಮಕ ಚಿಂತನೆ ಎಂದರೆ ಒಳ್ಳೆಯ ಕೆಲಸ, ಪ್ರೀತಿ, ವಿಶ್ವಾಸ, ನಂಬಿಕೆ,ಒಳ್ಳೆಯತನ ಇವೆಲ್ಲವೂ ನಮ್ಮನ್ನು ಬೆಳಕಿನೆಡೆಗೆ ಕರೆದೊಯ್ಯುತ್ತದೆ. ಮನುಷ್ಯನೇ ಒಂದು ಶಕ್ತಿ. ಎಲ್ಲರಲ್ಲಿಯೂ ಆ ಶಕ್ತಿ ಇರುತ್ತದೆ. ಅದನ್ನು ಲೈಟ್ ಎಂಬ ಬೆಳಕಿನಿಂದ ನಾವು ಜಾಗೃತಗೊಳಿಸಬೇಕು, "ಲೈಟ್" ಎಂದರೆ 'ಲೆಟ್ ಇಟ್ ಗೋ' ಬೇಡವಾದ ವಿಚಾರಗಳಿಗೆ ತಲೆಕೆಡಿಸಿಕೊಳ್ಳಬಾರದು. ನಮ್ಮ ನಕಾರಾತ್ಮಕ ಚಿಂತನೆಗಳನ್ನ ತೆಗೆದುಹಾಕಬೇಕು, ಪೂರ್ತಿಯಾಗಿ ಅದನ್ನು ಹೋಗಲಾಡಿಸಲು ಪ್ರಯತ್ನಿಸಬೇಕು. ನಮ್ಮ ಒಳ್ಳೆಯ ಅಭ್ಯಾಸಗಳು ಪ್ರೀತಿ–ವಿಶ್ವಾಸ, ಸಂತೋಷ, ನಂಬಿಕೆಯನ್ನು ಮುಂದುವರಿಸಬೇಕು ಹಾಗೂ ಯಾವುದಾದರೂ ಹೊಸ ವಿಷಯ ಅಥವಾ ಹೊಸದರ ಬಗ್ಗೆ ತಿಳಿಯುವ ಆಸಕ್ತಿಯನ್ನು ಹೊಂದಬೇಕು. ನಾವು ಎಲ್ಲರಿಗೂ ಸಹಾಯ ಮಾಡಬೇಕು, ಪ್ರೀತಿ ಸಂತೋಷವನ್ನು ಹಂಚಬೇಕು.ಸಂತೋಷದಿಂದ ಆರೋಗ್ಯ, ಆರೋಗ್ಯವೇ ಭಾಗ್ಯ, ಆರೋಗ್ಯದಿಂದ ನಮಗೆ ಸಂಪತ್ತು ದೊರೆಯುತ್ತದೆ. ಈ ಎಲ್ಲಾ ವಿಚಾರಗಳನ್ನು ಪಾಲಿಸುವುದರಿಂದ ನಾವು ಪಾರದರ್ಶಕವಾಗಿರುತ್ತೇವೆ ಎಂಬುದರ ಬಗ್ಗೆ ದೀರ್ಘವಾದ ಪರಸ್ಪರ ಸಂವಾದ ಹಾಗೂ ಪ್ರಾಯೋಗಿಕ ಅನುಭವಗಳ ಮೂಲಕ ವಿದ್ಯಾರ್ಥಿಗಳಿಗೆ ಮನಮುಟ್ಟುವಂತೆ ಉಪನ್ಯಾಸ ನೀಡಿದರು.

ಹಿರಿಯ ಪ್ರಾಧ್ಯಾಪಕ ಪ್ರೊಎನ್‌ಎಂ ರಾಮಚಂದ್ರಯ್ಯ, ಧ್ಯಾನ ಮತ್ತು ಸಮರ್ಪಣಾ ಭಾವವನ್ನು ವಿದ್ಯಾರ್ಥಿಗಳು ಹೊಂದಬೇಕೆಂದು ವಿದ್ಯಾರ್ಥಿಗಳಿಗೆ ಕಿವಿಮಾತನ್ನು ತಿಳಿಸುವುದರ ಮೂಲಕ ತಮ್ಮ ಜೀವನದ ಅನುಭವಗಳನ್ನು ಹಂಚಿಕೊಂಡರು. ಟಿ.ಟಿ.ಎಲ್ ಪದವಿ ಕಾಲೇಜು ಪ್ರಾಂಶುಪಾಲ ಡಾ.ಬಿ.ವಿ.ಪ್ರಶಾಂತ್ ಅಧ್ಯಕ್ಷತೆ ವಹಿಸಿದ್ದರು.

ವಿಶೇಷ ಆಹ್ವಾನಿತರಾಗಿ ಮೈಸೂರಿನ ಕೆಎಂಪಿಕೆ ಚಾರಿಟೆಬಲ್ ಟ್ರಸ್ಟ್ ಅಧ್ಯಕ್ಷ ವಿಕ್ರಂ ಅಯ್ಯಂಗಾರ್ ಆಗಮಿಸಿದ್ದರು. ಟಿಟಿಎಲ್ ಕಾಲೇಜಿನ ಟ್ರಸ್ಟಿ ಶ್ರೀಮತಿ ಗೀತಾ ರಾಮದಾಸ್, ಬ್ರಹ್ಮಕುಮಾರಿಸ್ ಸರಸ್ವತಿಪುರಂ ಸೆಂಟರನ ಸುಮಿತ್ರ ಸ್ವಾಮಿ, ವಾಣಿಜ್ಯಶಾಸ್ತ್ರದ ವಿಭಾಗದ ಅಧಿಕಾರಿ ಡಾಕ್ಟರ್ ಆಶಾ, ಗ್ರಂಥಪಾಲಕರಾದ ಶ್ರೀಮತಿ ರಮ್ಯಶ್ರೀ ಎಸ್ ಹೆಚ್, ಯುವ ರೆಡ್‌ಕ್ರಾಸ್ ಘಟಕದ ಸಂಚಾಲಕ ಹೆಚ್.ಆರ್.ಗಿರೀಶ, ಉಪನ್ಯಾಸಕರಾದ ಕರುಣ್ ಶರ್ಮ ಮತ್ತಿತರರು ಉಪಸ್ಥಿತರಿದ್ದರು.

237 ಕೆಜಿ ಗಾಂಜಾ ಸೇರಿ ಅಪಾರ ಪ್ರಮಾಣದ ಮಾದಕ ವಸ್ತು ನಾಶ

ಮೈಸೂರು,ಫೆ.27(ಆರ್‌ಕೆ)– ಮೈಸೂರು, ಚಾಮರಾಜನಗರ, ಮಂಡ್ಯ, ಹಾಸನ ಜಿಲ್ಲೆಗಳಲ್ಲಿ ವಶಪಡಿಸಿಕೊಂಡಿರುವ 237 ಕೆಜಿ ಗಾಂಜಾ ಸೇರಿದಂತೆ ಅಪಾರ ಪ್ರಮಾಣದ ಮಾದಕ ವಸ್ತುಗಳನ್ನು ಮೈಸೂರಿನ ಹೆಚ್.ಡಿ.ಕೋಟೆ ರಸ್ತೆಯ ಗುಜ್ಜೇಗೌಡನಪುರ ಬಳಿ ಫೆ29 ರಂದು ವೈಜ್ಞಾನಿಕವಾಗಿ ನಾಶಪಡಿಸಲಾಗುವುದು ಎಂದು ಮೈಸೂರು ವಿಭಾಗದ ಅಬಕಾರಿ ಜಂಟಿ ಆಯುಕ್ತ (ಜಾರಿ ಮತ್ತು ತನಿಖೆ) ಫಕೀರಪ್ಪ ಛಲವಾದಿ ತಿಳಿಸಿದ್ದಾರೆ.

ಎನ್‌ಡಿಪಿಎಸ್ ಕಾಯ್ದೆಯಡಿ ದಾಖಲಾಗಿರುವ ಪ್ರಕರಣಗಳಲ್ಲಿ ವಶಪಡಿಸಿಕೊಂಡಿರುವ ಒಟ್ಟು 230.113 ಕೆಜಿ ಒಣ ಗಾಂಜಾ ಗಿಡಗಳು, 2,667 ವಿವಿಧ ಮಾದರಿಯ ಮಾದಕ ಮಾತ್ರೆಗಳು, ಸೈಲೊಸೈನ್ ಮಿಶ್ರಮ್, ಡಿಎಂಟಿ ಪೌಡರ್, ಹಸಿರು ಬಣ್ಣದ ಎಂಡಿಎಂಎ ಪೌಡರ್, ಎಲ್‌ಎಸ್‌ಡಿ ಚೂರು, ಖಾಕಿಪುಡಿ ತುಂಬಿದ ಕ್ಯಾಪ್ಸೂಲ್‌ಗಳನ್ನು ಗುಜ್ಜೇಗೌಡನಪುರ ಬಳಿ ಗ್ಲೋಬಲ್ ಇಂಟಿಗ್ರೇಟೆಡ್ ಪ್ರೊಫೆಷನಲ್ ಸರ್ವಿಸ್ ಸಂಸ್ಥೆಗೆ ಸೇರಿದ ಜಿಪ್ಸ್ ಬಯೋಟೆಕ್‌ನಲ್ಲಿ ಪರಿಸರಕ್ಕೆ ಹಾನಿಯಾಗದಂತೆ ಗುರುವಾರ ವೈಜ್ಞಾನಿಕವಾಗಿ ವಿಲೇ ಮಾಡಲಾಗುವುದು ಎಂದು ಅವರು ತಿಳಿಸಿದ್ದಾರೆ.

30ನೇ ಭಾರತೀಯ ರಾಷ್ಟ್ರೀಯ ಪವರ್‌ಲಿಫ್ಟಿಂಗ್ ಚಾಂಪಿಯನ್‌ಶಿಪ್

ಮೈಸೂರಿನ ಡಾ.ಶಿರೀನ್ ರೆಜಿನಾಲ್ಡ್ ಪ್ರಥಮ ಸ್ಥಾನಕ್ಕೆ ಭಾಜನ



ಡಾ.ಶಿರೀನ್ ರೆಜಿನಾಲ್ಡ್

ಮೈಸೂರು,ಫೆ.27(ಪಿಎಂ)– ಸೈಕಲ್ ಪ್ಯೂರ್ ಅಗರಬತ್ತಿ ತಯಾರಕರಾದ ಮೈಸೂರು ಮೂಲದ ಎನ್.ರಂಗರಾವ್ ಅಂಡ್ ಸನ್ಸ್ ಪ್ರೈವೇಟ್ ಲಿಮಿಟೆಡ್ ಕಂಪನಿಯ ಸೇಲ್ಸ್ ಅಂಡ್ ಮಾರ್ಕೆಟಿಂಗ್ ವಿಭಾಗದ ಮುಖ್ಯಸ್ಥ ಡಾ.ಶಿರೀನ್ ರೆಜಿನಾಲ್ಡ್ '30ನೇ ಭಾರತೀಯ ರಾಷ್ಟ್ರೀಯ ಪವರ್‌ಲಿಫ್ಟಿಂಗ್ ಚಾಂಪಿಯನ್ ಶಿಪ್–2023–24'ರಲ್ಲಿ ರಾಜ್ಯವನ್ನು ಪ್ರತಿನಿಧಿಸಿ, ಪ್ರಥಮ ಸ್ಥಾನಕ್ಕೆ ಭಾಜನರಾಗಿದ್ದಾರೆ.

ಮಹಾರಾಷ್ಟ್ರದ ನವಿ ಮುಂಬೈನ ಜುಯಿ ನಗರದ ಗಣೇಶ ಮಂದಿರದಲ್ಲಿ ಜ.26ರಿಂದ 28ರವರೆಗೆ ನ್ಯಾಷನಲ್ ಪವರ್ ಲಿಫ್ಟರ್ಸ್ ಫೆಡರೇಷನ್ (ಇಂಡಿಯಾ) ವತಿಯಿಂದ ನಡೆದ ರಾಷ್ಟ್ರೀಯ ಪವರ್ ಲಿಫ್ಟಿಂಗ್ ಚಾಂಪಿಯನ್‌ಶಿಪ್‌ನಲ್ಲಿ ಈ ಸಾಧನೆಗೈದಿದ್ದಾರೆ. ಇವರು ಪವರ್‌ಲಿಫ್ಟಿಂಗ್ ಮಾತ್ರವಲ್ಲದೆ, ಬಾಡಿ ಬಿಲ್ಡಿಂಗ್ ಮತ್ತು ಆರ್ಮ್ ರೆಸ್ಲಿಂಗ್‌ನಲ್ಲೂ ತೊಡಗಿಸಿಕೊಂಡಿದ್ದಾರೆ.

ನವದೆಹಲಿಯ ಭಾರತೀಯ ಆರ್ಮ್ ರೆಸ್ಲಿಂಗ್ ಅಸೋಸಿಯೇಷನ್ ಅಂಗಸಂಸ್ಥೆಗಳಾದ ಕರ್ನಾಟಕ ಆರ್ಮ್ ರೆಸ್ಲಿಂಗ್ ಅಸೋಸಿಯೇಷನ್ ಮತ್ತು ದಾವಣಗೆರೆ ಆರ್ಮ್ ರೆಸ್ಲಿಂಗ್ ಅಸೋಸಿಯೇಷನ್ ಜಂಟಿ ಆಶ್ರಯದಲ್ಲಿ 2017ರಲ್ಲಿ ನಡೆದ ರಾಜ್ಯ ಮಟ್ಟದ ಆರ್ಮ್ ರೆಸ್ಲಿಂಗ್ ಚಾಂಪಿಯನ್‌ಶಿಪ್‌ನ 90 ಕೆಜಿ ತೂಕ ವಿಭಾಗದಲ್ಲಿ ಚಿನ್ನದ ಪದಕ ಗಳಿಸಿದ್ದರು. ಅಲ್ಲದೆ, ಅವರು ಮೈಸೂರು (2014) ಮತ್ತು ದಾವಣಗೆರೆಯಲ್ಲಿ (2015) ನಡೆದ ರಾಜ್ಯ ಮಟ್ಟದ ಬಾಡಿ ಬಿಲ್ಡಿಂಗ್ ಚಾಂಪಿಯನ್‌ಶಿಪ್‌ಗಳಲ್ಲಿ ಚಿನ್ನದ ಪದಕ ವಿಜೇತರಾಗಿದ್ದಾರೆ.

2016 ಮತ್ತು 2017ರಲ್ಲಿ ಮೈಸೂರು ಮತ್ತು ದಾವಣಗೆರೆಯಲ್ಲಿ ನಡೆದ 93 ಕೆಜಿ ವಿಭಾಗದಲ್ಲಿ ರಾಜ್ಯದ ಮಟ್ಟದ ಪವರ್ ಲಿಫ್ಟಿಂಗ್ ಚಾಂಪಿಯನ್‌ಶಿಪ್‌ನಲ್ಲಿ ಚಿನ್ನದ ಪದಕ ಗೆದ್ದಿದ್ದಾರೆ. ಅಲ್ಲದೆ, 2018ರ ಜನವರಿಯಲ್ಲಿ ಪಂಜಾಬ್‌ನ ಜಲಂಧರ್‌ನಲ್ಲಿ ನಡೆದ 9ನೇ ರಾಷ್ಟ್ರೀಯ ಬಾಡಿ ಬಿಲ್ಡಿಂಗ್ ಚಾಂಪಿಯನ್‌ಶಿಪ್‌ನಲ್ಲಿ ಬೆಳ್ಳಿ ಪದಕ ಗೆದ್ದಿದ್ದಾರೆ. 2023ರ ಮೇ 19 ಮತ್ತು 20ರಂದು ವರ್ಲ್ಡ್ ಪವರ್‌ಲಿಫ್ಟಿಂಗ್ ಕಾಂಗ್ರೆಸ್ ಸಹಯೋಗದೊಂದಿಗೆ ಡಬ್ಲ್ಯೂಪಿಸಿ ಕರ್ನಾಟಕ ಆಯೋಜಿಸಿದ್ದ ಕರ್ನಾಟಕ ಓಪನ್ ಸ್ಟೇಟ್ ಲೆವಲ್ ಪವರ್‌ಲಿಫ್ಟಿಂಗ್ ಚಾಂಪಿಯನ್‌ಶಿಪ್‌ನಲ್ಲಿ ಚಿನ್ನದ ಪದಕ ಗೆದ್ದಿದ್ದಾರೆ.

ಡಾ.ಶಿರೀನ್ ರೆಜಿನಾಲ್ಡ್ ಅವರು ಮೈಸೂರಿನ ಎನ್‌ಐಇ ಕಾಲೇಜಿನಲ್ಲಿ ಮೆಕಾನಿಕಲ್ ಇಂಜಿನಿಯರಿಂಗ್ ಪದವಿ ಪಡೆದಿದ್ದಾರೆ. ಜೊತೆಗೆ ಎಸ್‌ಜೆಸಿಇ ಕಾಲೇಜಿನಿಂದ ಎಂಬಿಎ ಪದವಿ ಪಡೆದಿದ್ದು, ಮುಕ್ತ ವಿವಿಯಿಂದ ಮಾನವ ಸಂಪನ್ಮೂಲ ನಿರ್ವಹಣೆಯಲ್ಲಿ ಸ್ನಾತಕೋತ್ತರ ಡಿಪ್ಲೊಮಾ ಸಹ ಪಡೆದಿದ್ದಾರೆ. ಚೆನ್ನೈನ ಐಐಎಂಟಿಯಿಂದ ಗುಣಮಟ್ಟ ನಿರ್ವಹಣೆಯಲ್ಲಿ ಡಿಪ್ಲೊಮಾ ಮಾಡಿದ್ದಾರೆ. 'ಫ್ರ್ಯಾಂಚೈಸಿಂಗ್ ಇನ್ ಇಂಡಿಯಾ–ಎ ಕೇಸ್ ಸ್ಟಡಿ ಆಫ್ ಸೆಲೆಕ್ಟೆಡ್ ಎಂಎನ್‌ಸಿ ಇನ್ ಫುಡ್ ಅಂಡ್ ಹೋಟೆಲ್ ಇಂಡಸ್ಟ್ರಿ' ಕುರಿತ ಇವರ ಮಹಾಪ್ರಬಂಧಕ್ಕೆ ಮೈಸೂರು ವಿವಿ ಪಿಹೆಚ್‌ಡಿ ಪದವಿ ನೀಡಿದೆ. 2018ರ ಮಾ.12ರಂದು ನಡೆದ ಮೈಸೂರು ವಿವಿ 98ನೇ ಘಟಿಕೋತ್ಸವದಲ್ಲಿ ಅವರು ಪಿಹೆಚ್.ಡಿ ಪದವಿ ಸ್ವೀಕರಿಸಿದರು.

ರಾಷ್ಟ್ರೀಯ ಇಂಡಿಯನ್ ಮಿಲಿಟರಿ ಕಾಲೇಜು ಪ್ರವೇಶಕ್ಕೆ ಅರ್ಜಿ

ಮೈಸೂರು, ಫೆ.27–ರಾಷ್ಟ್ರೀಯ ಇಂಡಿಯನ್ ಮಿಲಿಟರಿ ಕಾಲೇಜಿನಲ್ಲಿ 8 ನೇ ತರಗತಿಗಾಗಿ ಪ್ರವೇಶ ಬಯಸುವ ಕರ್ನಾಟಕ ರಾಜ್ಯದ ಬಾಲಕ ಮತ್ತು ಬಾಲಕಿಯರಿಗೆ ಅರ್ಹತಾ ಪ್ರವೇಶ ಪರೀಕ್ಷೆಯನ್ನು ಜೂ.1ರಂದು ಬೆಂಗಳೂರು ಕೇಂದ್ರದಲ್ಲಿ ನಡೆಸಲಾಗುತ್ತದೆ. ಅಭ್ಯರ್ಥಿಗಳು ಯಾವುದೇ ಸರ್ಕಾರದಿಂದ ಮಾನ್ಯತೆ ಪಡೆದಿರುವ ಶಾಲೆಯಲ್ಲಿ 7ನೇ ತರಗತಿಯಲ್ಲಿ ಓದುತ್ತಿರುವ ಅಥವಾ ಉತ್ತೀರ್ಣರಾಗಿರುವ ಹಾಗೂ 01–01–2025ರಂತೆ 11 ವರೆ ವರ್ಷದಿಂದ 13 ವರ್ಷದೊಳಗಿರುವ (ದಿನಾಂಕ 02–01–2012ರಿಂದ 01–07–2013ರೊಳಗೆ ಜನಿಸಿರುವ) ಬಾಲಕ ಮತ್ತು ಬಾಲಕಿಯರು ಏ.15ರೊಳಗೆ ಅರ್ಜಿ ಸಲ್ಲಿಸಬಹುದಾಗಿದೆ. ಮಾಹಿತಿಗಾಗಿ ದೂ.ಸಂಖ್ಯೆ 080–25589459 ಅಥವಾ ಸಮೀಪದಲ್ಲಿರುವ ತಮ್ಮ ಜಿಲ್ಲಾ ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆಯ ಕಾರ್ಯಾಲಯವನ್ನು ಸಂಪರ್ಕಿಸಬಹುದು.



ಸಾಮಾಜಿಕ ನ್ಯಾಯ ವೇದಿಕೆ ವತಿಯಿಂದ ಬಿಳಿಕೆರೆ ಹೋಬಳಿ ಸಿಂಗಮಾರನಹಳ್ಳಿಯಲ್ಲಿ ಪರಿಶಿಷ್ಟ ಜಾತಿ ಮಹಿಳೆಯರಿಗೆ ಹೊಲಿಗೆ ಯಂತ್ರ ತರಬೇತಿ ಕೇಂದ್ರವನ್ನು ಪ್ರಾರಂಭಿಸಲಾಯಿತು. ಕೇಂದ್ರದ ಉದ್ಘಾಟನೆಯನ್ನು ಸಾಮಾಜಿಕ ನ್ಯಾಯ ವೇದಿಕೆಯ ಕಾರ್ಯದರ್ಶಿ ಎಂ.ಎಸ್.ಪರಮಾನಂದ ನೆರವೇರಿಸಿದರು. ಕಾರ್ಯಕ್ರಮದಲ್ಲಿ ಆಡಳಿತಾಧಿಕಾರಿ ಸತೀಶ ಮೇತ್ರಿ, ಗ್ರಾಮ ಪಂಚಾಯಿತಿ ಸದಸ್ಯ ನಾಗೇಂದ್ರ, ಮಹಿಳಾ ಮುಖಂಡರಾದ ವಸಂತ ಹಾಗೂ ಗ್ರಾಮದ ಶಿಬಿರಾರ್ಥಿ ಮಹಿಳೆಯರು ಉಪಸ್ಥಿತರಿದ್ದರು.

ರೂಪ ಕುಮಾರಸ್ವಾಮಿಗೆ ಜರಗನಹಳ್ಳಿ ಸಿದ್ದಮ್ಮ ನಂಜುಂಡಪ್ಪ ಶರಣ ದತ್ತಿ ಪ್ರಶಸ್ತಿ ಪ್ರದಾನ



ಮೈಸೂರು,ಫೆ.27–ಮೈಸೂರಿನ ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು ಮತ್ತು ಜರಗನಹಳ್ಳಿ ವೀರಶೈವ ಸಮಾಜದ ಸಹಯೋಗದೊಂದಿಗೆ ಬೆಂಗಳೂರಿನ ಜೆ.ಪಿ.ನಗರದ ಜರಗನಹಳ್ಳಿ ಎಸ್.ಎಂ. ಕಲ್ಯಾಣಮಂಟಪದಲ್ಲಿ ನಡೆದ 256ನೇ ಬೆಳದಿಂಗಳ ಕೂಟ ಹಾಗೂ ದತ್ತಿ ಕಾರ್ಯಕ್ರಮದಲ್ಲಿ ಮೈಸೂರಿನ ಶರಣು ವಿಶ್ವವಚನ ಫೌಂಡೇಷನ್ ಸಂಸ್ಥಾಪಕಿ ರೂಪ ಕುಮಾರಸ್ವಾಮಿ, ಡಾ. ಸೀ. ಚ ಯತೀಶ್ವರ್ ಅವರಿಗೆ ಜರಗನಹಳ್ಳಿ ಸಿದ್ದಮ್ಮ ನಂಜುಂಡಪ್ಪ ಶರಣ ದತ್ತಿ ಪ್ರಶಸ್ತಿ ಮತ್ತು ಡಾ. ನಿರ್ಮಲ ಸಿ ಎಲಿಗಾರ್ ಅವರಿಗೆ ಸಿ ವತ್ಸಲ ಎಂ ನಂಜುಂಡಯ್ಯ ಶರಣ ದತ್ತಿ ಪ್ರಶಸ್ತಿ ಪ್ರದಾನ ಮಾಡಿ, ಗೌರವಿಸಲಾಯಿತು.

ಕಾರ್ಯಕ್ರಮದಲ್ಲಿ ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಡಾ. ಸಿ ಸೋಮಶೇಖರ, ಚಂದ್ರಶೇಖರ ಉಷಾಲ ದತ್ತಿ ದಾನಿಗಳಾದ ಎನ್ ಬಸವರಾಜು, ಎನ್.ಚಂದ್ರಶೇಖರ್, ಶೈಲಜಾ ಶಿವಶಂಕರ್, ಎಂ.ಎನ್.ಪ್ರಸಾದ್ ವೀರಶೈವ ಸೇವಾ ಸಮಾಜ ಅಧ್ಯಕ್ಷ ಡಾ.ಎಂ.ಎನ್.ದಿನೇಶ್ ವೀರಶೈವ ಸೇವಾ ಸಮಾಜ ಗೌರವಾಧ್ಯಕ್ಷ ವೀರಭದ್ರಪ್ಪ, ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತಿನ ಪ್ರಧಾನ ಕಾರ್ಯದರ್ಶಿ ಸೋಮಶೇಖರ ಸಿ ಗಾಂಜಿ, ಶುಭದ, ಪುರುಷೋತ್ತಮ್, ವತ್ಸಲ ನಂಜುಂಡಯ್ಯ ಉಪಸ್ಥಿತರಿದ್ದರು.

ಅರ್ಜಿ ಸಲ್ಲಿಸುವ ಅವಧಿ ವಿಸ್ತರಣೆ

ಮೈಸೂರು: ರಾಜ್ಯ ವಿದ್ಯಾರ್ಥಿವೇತನ ತಂತ್ರಾಂಶದಲ್ಲಿ 2023–24ನೇ ಸಾಲಿಗೆ ಸಮಾಜ ಕಲ್ಯಾಣ ಇಲಾಖೆಯ ಮೆಟ್ರಿಕ್ ನಂತರದ ವಿದ್ಯಾರ್ಥಿವೇತನ ಅರ್ಜಿಗಳನ್ನು ಸಲ್ಲಿಸಲು ಫೆ.29ರವರೆಗೆ ಅವಧಿ ವಿಸ್ತರಿಸಲಾಗಿದೆ. 2023–24ನೇ ಸಾಲಿಗೆ ಪೋಷಕರ ವಾರ್ಷಿಕ ವರಮಾನ 2.5 ಲಕ್ಷದೊಳಗಿರುವ ಮೈಸೂರು ತಾಲೂಕಿನ ಮೆಟ್ರಿಕ್ ನಂತರದ ಅರ್ಹ ಪರಿಶಿಷ್ಟ ಜಾತಿ ವಿದ್ಯಾರ್ಥಿಗಳು ನಿಗದಿತ ಸಮಯದೊಳಗೆ ರಾಜ್ಯ ವಿದ್ಯಾರ್ಥಿ ವೇತನ ತಂತ್ರಾಂಶದ www.ssp.postmatric.karnataka.gov.in ನಲ್ಲಿ ಅರ್ಜಿ ಸಲ್ಲಿಸಬಹುದಾಗಿದೆ. ವಿದ್ಯಾರ್ಥಿಗಳು ಬ್ಯಾಂಕಿಗೆ ಭೇಟಿ ನೀಡಿ, ಅವರ ಆಧಾರ್ ಸಂಖ್ಯೆಯನ್ನು ಎನ್‌ಪಿಸಿಐ (ನ್ಯಾಷನಲ್ ಪೇಮೆಂಟ್ ಕಾರ್ಪೊರೇಷನ್ ಆಫ್ ಇಂಡಿಯಾ)ರಲ್ಲಿ ಬ್ಯಾಂಕ್ ಖಾತೆಗೆ ಆಧಾರ್ ಸೀಡಿಂಗ್ ಮಾಡಿಸುವುದು ಕಡ್ಡಾಯ. ಮಾಹಿತಿಗಾಗಿ ದೂಸಂ: 0821–2520910 ಸಂಪರ್ಕಿಸಿ.

ಅನಂತಗೀತ ವಿದ್ಯಾಲಯದ ಶಿಕ್ಷಕಿ ಜಮುನಾಗೆ ರಾಷ್ಟ್ರ ಮಟ್ಟದ ಪ್ರಶಸ್ತಿ



ಭಾರತೀಯ ದಲಿತ ಸಾಹಿತ್ಯ ಅಕಾಡೆಮಿ ವತಿಯಿಂದ ಪ್ರತೀ ವರ್ಷವೂ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದವರನ್ನು ಗುರುತಿಸಿ, ರಾಷ್ಟ್ರ ಮಟ್ಟದ ಮಹಾತ್ಮ ಜ್ಯೋತಿಬಾ ಫುಲೆ ಫೆಲೋಶಿಪ್ ಪ್ರಶಸ್ತಿ ನೀಡಲಾಗುತ್ತದೆ. ಹಾಗೇ 2024 ನೇ ಸಾಲಿನಲ್ಲಿ ಶಿಕ್ಷಣ ಕ್ಷೇತ್ರದಲ್ಲಿ ಗಣನೀಯ ಸೇವೆ ಸಲ್ಲಿಸಿರುವ ಅನಂತಗೀತ ವಿದ್ಯಾಲಯದ ಶ್ರೀಮತಿ ಜಮುನಾ ಅವರಿಗೆ ದಕ್ಷಿಣ ಭಾರತದ ಹಿಂದಿ ಪ್ರಚಾರ ಸಭೆಯ ಮಾಜಿ ಕುಲಪತಿ ಪ್ರೊ.ರಾಮ ಮೋಹನ ಪಾಠಕ್ ಪ್ರಶಸ್ತಿ ಪ್ರದಾನ ಮಾಡಿ, ಅಭಿನಂದಿಸಿದರು. ಶಾಲೆಯ ಅಧ್ಯಕ್ಷ ವೇಣುಗೋಪಾಲ್ ಕಲ್ಲೂರು, ನಿರ್ದೇಶಕರಾದ ಶ್ರೀಮತಿ ಮಂಜುಳ ಕಲ್ಲೂರು, ಕಾರ್ಯದರ್ಶಿ ಗೀತಾ ಅನಂತರಾಮಯ್ಯ, ಪ್ರಾಂಶುಪಾಲ ಶ್ರೀಕಾಂತ್ ಮತ್ತು ಉಪ ಪ್ರಾಂಶುಪಾಲ ಹೆಚ್.ಪಿ.ಲೋಕೇಶ್ ಉಪಸ್ಥಿತರಿದ್ದರು.

ಹೊಸ ಪ್ರಯೋಗಗಳಿಗೆ ಪತ್ರಕರ್ತರೂ ಹೊಂದಿಕೊಳ್ಳಲಿ

ಗಾನ–ನಂದನ: ಸವಿಗಾನ–2 ಕಾರ್ಯಕ್ರಮದಲ್ಲಿ ಹಿರಿಯ ಸಾಹಿತಿ ಡಾ.ಸಿ.ನಾಗಣ್ಣ ಅಭಿಮತ



ಭೂಮಿಗಿರಿ ಪ್ರಕಾಶನದ ವತಿಯಿಂದ ಆಯೋಜಿಸಿದ್ದ ಗಾನ–ನಂದನ: ಸವಿಗಾನ–2 ಕಾರ್ಯಕ್ರಮದಲ್ಲಿ ಮುದ್ರಣ ಹಾಗೂ ದೃಶ್ಯ ಮಾಧ್ಯಮದ ಪತ್ರಕರ್ತರು, ಛಾಯಾಗ್ರಾಹಕರಿಗೆ 'ಮಾಧ್ಯಮ ರತ್ನ' ಪ್ರಶಸ್ತಿ ಪ್ರದಾನ ಮಾಡಲಾಯಿತು.

ಮೈಸೂರು, ಫೆ.27(ಎಸ್‌ಪಿಎನ್)– ತಂತ್ರಜ್ಞಾನ ಬೆಳೆದಂತೆ ಸಿನಿಮಾ ಗಾಯನ ಕ್ಷೇತ್ರದಲ್ಲೂ ಬದಲಾವಣೆ ಗಾಳಿ ಬೀಸಿದೆ. 1970–80ರ ದಶಕದಲ್ಲಿ ಆರ್ಕೆಸ್ಟ್ರಾ ಕಲಾವಿದರಿಗೆ ಉತ್ತಮ ಬೇಡಿಕೆ ಇತ್ತು. ಇದೀಗ ಈ ಕ್ಷೇತ್ರ ತೆರೆಮರೆಗೆ ಸರಿಯುತ್ತಿದೆ ಎಂದು ಹಿರಿಯ ಸಾಹಿತಿ ಡಾ.ಸಿ.ನಾಗಣ್ಣ ಬೇಸರ ವ್ಯಕ್ತಪಡಿಸಿದರು.

ಮೈಸೂರು ವಿಜಯನಗರ ಒಂದನೇ ಹಂತದಲ್ಲಿರುವ ಕನ್ನಡ ಸಾಹಿತ್ಯ ಭವನದ ನಾಲ್ವಡಿ ಕೃಷ್ಣರಾಜ ಒಡೆಯರ್ ಸಭಾಂಗಣದಲ್ಲಿ ಭೂಮಿಗಿರಿ ಪ್ರಕಾಶನ ಹಾಗೂ ಕನ್ನಡ ಸಾಹಿತ್ಯ ಪರಿಷತ್ ಸಹಯೋಗದೊಂದಿಗೆ ಆಯೋಜಿಸಿದ್ದ ಗಾನ–ನಂದನ: ಸವಿಗಾನ–2 ಹಾಗೂ ಮುದ್ರಣ ಹಾಗೂ ದೃಶ್ಯ ಮಾಧ್ಯಮದ ಪತ್ರಕರ್ತರು, ಛಾಯಾಗ್ರಾಹಕರನ್ನು ಸನ್ಮಾನಿಸಿ, ಮಾತನಾಡಿದರು.

ಮಾಧ್ಯಮ ಕ್ಷೇತ್ರದಲ್ಲಿ ದಿನನಿತ್ಯ ಹೊಸ ಹೊಸ ಪ್ರಯೋಗಗಳಿಗೆ ಪತ್ರಕರ್ತರು ಹೊಂದಿಕೊಳ್ಳಬೇಕಾಗಿದೆ. ಇದರಿಂದ ಅವರ ವೃತ್ತಿ ಜೀವನ ಪ್ರತಿನಿತ್ಯ ಒತ್ತಡದಲ್ಲಿರುತ್ತದೆ. ದೃಶ್ಯ ಮತ್ತು ಮುದ್ರಣ ಮಾಧ್ಯಮದ ಪತ್ರಕರ್ತರು, ನಿತ್ಯ ರಾಜಕಾರಣಿಗಳು, ಅಧಿಕಾರ ವರ್ಗದವರು, ರೈತರು, ವಿದ್ಯಾರ್ಥಿಗಳು, ಮಹಿಳೆಯರು, ಯುವಕ–ಯುವತಿಯರಿರಬಹುದು. ಅದರೇ ಜನ ನೋಡಿ, ನೋಡಿ ವೃತ್ತಿಯಲ್ಲಿ ಒಮ್ಮೆ ಉತ್ಸಾಹ ಕಳೆದುಕೊಂಡರೆ ಕೆಲಸ ಮಾಡಲಾಗುವುದಿಲ್ಲ. ಹೀಗಾಗಿ ಪ್ರತಿನಿತ್ಯ ಹೊಸ ಹೊಸ ಪ್ರಯೋಗ ಮಾಡಬೇಕಾಗುತ್ತದೆ. ಆಗ ಮಾತ್ರ ಉತ್ಸಾಹ ಬತ್ತುವುದಿಲ್ಲ. ಅವರು (ಮಾಧ್ಯಮದವರು) ಸರ್ವಮುಖಿ, ಸರ್ವವ್ಯಾಪ್ತಿಯಾಗಿ ವೃತ್ತಿ ಜೀವನ ಕಳೆಯಬೇಕು. ಹಾಗಾಗಿಯೇ ಅವರ ವೃತ್ತಿಯೇ ಒಂದು ತರಹ ಟಫ್‌ಜಾಬ್ ಇದ್ದಂತೆ ಎಂದರು.

'ಮಾಧ್ಯಮ ರತ್ನ' ಪ್ರಶಸ್ತಿ ಪ್ರದಾನ: ಹಿರಿಯ ಪತ್ರಕರ್ತರಾದ ಕೆ.ಪಿ.ನಾಗರಾಜು, ರಮೇಶ್ ಉತ್ತಪ್ಪ, ಮಹೇಶ್ ಭಗೀರಥ್, ಛಾಯಾಗ್ರಾಹಕರಾದ ಲಕ್ಷ್ಮೀನಾರಾಯಣ್ ಯಾದವ್, ಅನುರಾಗ್ ಬಸವರಾಜು, ಪತ್ರಿಕೋದ್ಯಮದ ವಿದ್ಯಾರ್ಥಿ, ಹೆಚ್.ಪಿ. ಶಾಮಪ್ರಸಾದ್ ಅವರಿಗೆ 'ಮಾಧ್ಯಮ ರತ್ನ' ಪ್ರಶಸ್ತಿ ನೀಡಿ, ಗೌರವಿಸಲಾಯಿತು.

ವಿವಿಧ ಗೀತೆಗಳ ಅನಾವರಣ: ವೇದಿಕೆ ಕಾರ್ಯಕ್ರಮ ನಂತರ 'ಸಿರಿಬಾಲೆ ಭಕ್ತಿ ಗೀತೆಯಿಂದ ಆರಂಭವಾದ ಗಾಯನ', ಬಾನಲ್ಲಿ ನಿನ್ನಿಂದ ಸೂರ್ಯೋದಯ, ಎಂದೋ ಕಂಡ ಕನಸು, ಬಯಕೆ ಬಾಳಿನಲ್ಲಿ, ಆವು ನೀವಿನ ನಾಕುನಂತಿ, ಕಮಲದ ಹೂವಿಂದ, ಕಾಣದ ಕಡಲಿಗೆ ಹಂಬಲಿಸಿದೆ ಮನ, ಎಲ್ಲೊ ಹುಟ್ಟಿ ಕನಸು, ಒಮ್ಮೆ ನಿನ್ನನ್ನು ಕಣ್ತುಂಬ, ಎಲ್ಲೋ ಹುಟ್ಟಿ ಎಲ್ಲೋಬೆಳೆದು, ನನಗೆ ನೀನು, ನನಗೆ ನಾನು, ಜಲಲಜಲಲ ಧಾರೆ, ನಾದಮಯ ಈ ಲೋಕವೆಲ್ಲ, ಅನಿಸುತಿದೆ ಯಾಕೋ ಇಂದು, ಮದುವೆಯ ವಯಸ್ಸು, ಪ್ರೀತಿಯಲ್ಲಿ ಇರೋ ಸುಖ, ಎಲ್ಲೋ ಹುಡುಕಿದೆ ಇಲ್ಲದ ದೇವರ, ಏನಿಲ್ಲಾ, ಏನಿಲ್ಲಾ, ನೀ ಬಂದು ನಿಂತಾಗ, ಏಕೇ ಮಳ್ಳಿ ಅಂಗೆ, ಚೆಲುವ ಚೆಲುವ, ಯಾವ ಕಾಣಿಕೆ ನೀಡಲಿ ನಿನಗೆ, ಈ ಬಿಂಕ ಬಿಡು ಬಿಡು, ಮೇಘ ಮಾಲೆ, ಮೇಘ ಮಾಲೆ, ಜಿನು ಜಿನುಗೋ ಜೇನಹನಿ, ಸಿಂಗಾರ ಸಿರಿಯಲಿ ಹಾಡುಗಳನ್ನು ಗಾಯಕರಾದ ಡಾ.ವೈ.ಡಿ. ರಾಜಣ್ಣ, ಎನ್.ಬೆಟ್ಟೇಗೌಡ, ಡಾ.ದೇವಿ ಆನಂದ್, ಡಾ.ಎ.ಎಸ್.ಪೂರ್ಣಿಮಾ, ಶ್ರೀಲತಾ ಮನೋಹರ್, ಸಿ.ಎಸ್.ವಾಣಿ ಹಾಡಿ, ಪ್ರೇಕ್ಷಕರನ್ನು ರಂಜಿಸಿದರು.

ಈ ವೇಳೆ ಜಿಲ್ಲಾ ಕಸಾಪ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಮೈವಿವಿ ಸಿಂಡಿಕೇಟ್ ಮಾಜಿ ಸದಸ್ಯ ಡಾ.ಈ.ಸಿ. ನಿಂಗರಾಜ್‌ಗೌಡ ಪ್ರಾಸ್ತಾವಿಕ ನುಡಿಗಳ್ನಾಡಿದರು. ಗಾನ–ನಂದನ, ಭೂಮಿಗಿರಿ ಪ್ರಕಾಶನದ ಅಧ್ಯಕ್ಷ ಎನ್.ಬೆಟ್ಟೇಗೌಡ ಸ್ವಾಗತಿಸಿದರು. ಸಿರಿಮಾ ನಿರೂಪಿಸಿದರು.

ಕಸಾಪ ಕಾರ್ಯದರ್ಶಿ ಮೈ.ನಾ. ಲೋಕೇಶ್, ಕಲಾವಿದ ಅರಸೇಗೌಡ, ಅಮ್ಮಸಂದ್ರ ಸುರೇಶ್, ನಾಗರಾಜ್ ವಿ. ಭೈರಿ, ಚೀಲೂರು ಚಂದ್ರಶೇಖರ್ ಮೊದಲಾದವರು ಉಪಸ್ಥಿತರಿದ್ದರು.

ಮೈಸೂರು ಮಿತ್ರ ಬುಧವಾರ 28 ಫೆಬ್ರವರಿ 2024

ಮಾ.1 ರಿಂದ ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆ

ಯಾವುದೇ ಲೋಪವಾಗದಂತೆ ನೋಡಿಕೊಳ್ಳಿ: ಡಾ. ಕುಮಾರ್

ಮಂಡ್ಯ, ಫೆ.27– ಜಿಲ್ಲೆಯಲ್ಲಿ ಮಾ.1 ರಿಂದ ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆ ಆರಂಭವಾಗಲಿದ್ದು, ಯಾವುದೇ ಲೋಪದೋಷಗಳಾಗದಂತೆ ಪರೀಕ್ಷೆ ನಡೆಸಬೇಕು ಎಂದು ಜಿಲ್ಲಾಧಿಕಾರಿ ಡಾ ಕುಮಾರ್ ತಿಳಿಸಿದರು.



ಮಂಡ್ಯದ ಜಿಲ್ಲಾಧಿಕಾರಿ ಕಚೇರಿಯಲ್ಲಿ ದ್ವಿತೀಯ ಪಿಯುಸಿ ಪರೀಕ್ಷೆ ಪೂರ್ವಭಾವಿ ಸಭೆಯಲ್ಲಿ ಜಿಲ್ಲಾಧಿಕಾರಿ ಡಾ. ಕುಮಾರ್ ಮಾತನಾಡಿದರು.

ಸೋಮವಾರ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ನಡೆದ ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆಗಳ ಪೂರ್ವಭಾವಿ ಸಭೆ ನಡೆಸಿ ಮಾತನಾಡಿದ ಅವರು, ಜಿಲ್ಲೆಯಲ್ಲಿ 26 ಪರೀಕ್ಷಾ ಕೇಂದ್ರಗಳಲ್ಲಿ 13,996 ವಿದ್ಯಾರ್ಥಿಗಳು ಪರೀಕ್ಷೆ ಬರೆಯಲಿದ್ದಾರೆ. ಜಿಲ್ಲೆಯಲ್ಲಿ ಯಾವುದೇ ಸೂಕ್ಷ್ಮ, ಅತಿಸೂಕ್ಷ್ಮ ಪರೀಕ್ಷಾ ಕೇಂದ್ರ ಇಲ್ಲ, ಎಲ್ಲಾ ಪರೀಕ್ಷಾ ಕೇಂದ್ರಗಳ ಮೇಲೆ ತೀವ್ರ ನಿಗಾ ವಹಿಸಬೇಕು. ಸೂಕ್ತ ಪೊಲೀಸ್ ಬಂದೋಬಸ್ತ್ ಮಾಡಲಾಗುವುದು ಎಂದು ಹೇಳಿದರು.

ಪರೀಕ್ಷಾ ಕೇಂದ್ರಗಳಲ್ಲಿ ವಿದ್ಯಾರ್ಥಿಗಳಿಗೆ ಸೂಕ್ತ ಆಸನ ಹಾಗೂ ಪರೀಕ್ಷೆ ಬರೆಯಲು ಡೆಸ್ಕ್ ವ್ಯವಸ್ಥೆ ಮಾಡಬೇಕು. ಕುಡಿಯುವ ನೀರು, ಶೌಚಾಲಯ ಸೇರಿದಂತೆ ಮೂಲಸೌಕರ್ಯದ ವ್ಯವಸ್ಥೆಯಾಗಬೇಕು ಎಂದರು.

ಕೊಠಡಿಗಳಲ್ಲಿ ಗಡಿಯಾರ, ಸಿಸಿ ಟಿವಿ ವ್ಯವಸ್ಥೆ ಕಡ್ಡಾಯವಾಗಿ ಇರಬೇಕು. ಎಲ್ಲಾ ಪರೀಕ್ಷಾ ಕೇಂದ್ರಗಳಿಗೆ ಸೂಕ್ತ ಪೊಲೀಸ್ ಬಂದೋಬಸ್ತ್ ಮಾಡಬೇಕು ಎಂದರು.

ಪರೀಕ್ಷೆ ನಡೆಯುವ ದಿನಗಳಂದು ಪರೀಕ್ಷಾ ಕೇಂದ್ರಗಳ ಸುತ್ತಲೂ 200 ಮೀ. ಸುತ್ತಳತೆಯಲ್ಲಿ 144 ನೇ ಕಲಂ ಜಾರಿಗೊಳಿಸಲು ಮತ್ತು ಪರೀಕ್ಷಾ ಕೇಂದ್ರಗಳ ಸುತ್ತಮುತ್ತಲಿನ ಜೆರಾಕ್ಸ್ ಅಂಗಡಿಗಳನ್ನು ಮುಚ್ಚಿಸಬೇಕು ಎಂದರು.

ಪ್ರತಿ ಪರೀಕ್ಷಾ ಕೇಂದ್ರಕ್ಕೆ ಒಬ್ಬರಂತೆ 26 ಮುಖ್ಯ ಅಧೀಕ್ಷಕರುಗಳನ್ನು ನೇಮಕ ಮಾಡಲಾಗಿದೆ. ಮುಖ್ಯ ಅಧೀಕ್ಷಕರನ್ನು ಹೊರತುಪಡಿಸಿ ಕೊಠಡಿ ಮೇಲ್ವಿಚಾರಕರು, ಇತರೆ ಸಿಬ್ಬಂದಿಗಳು ಮತ್ತು ವಿದ್ಯಾರ್ಥಿಗಳು ಮೊಬೈಲ್ ಇನ್ನಿತರ ಎಲೆಕ್ಟ್ರಾನಿಕ್ ಸಾಧನಗಳನ್ನು ಬಳಸುವುದನ್ನು ಕಡ್ಡಾಯವಾಗಿ ನಿಷೇಧಿಸಬೇಕು ಎಂದರು.

ಅಪರ ಜಿಲ್ಲಾಧಿಕಾರಿ ಡಾ ಎಚ್ ಎಲ್ ನಾಗರಾಜು ಅವರು ಮಾತನಾಡಿ, ಜಿಲ್ಲಾ ಖಜಾನೆಯಿಂದ ಸಂಬಂಧಿಸಿದ ಪರೀಕ್ಷಾ ಕೇಂದ್ರಗಳಿಗೆ ಪ್ರಶ್ನೆ ಪತ್ರಿಕೆ ವಿತರಿಸಲು ಪ್ರಶ್ನೆ ಪತ್ರಿಕೆ ಮಾರ್ಗಾಧಿಕಾರಿ ತಂಡಗಳಿಗೆ ಅಗತ್ಯವಿರುವ ವಾಹನಗಳ ಸೌಕರ್ಯ ಒದಗಿಸಿ ಎಂದರು

ಸಭೆಯಲ್ಲಿ ಜಿಪಂ ಸಿಇಒ ಶೇಕ್ ತನ್ವೀರ್ ಆಸಿಫ್, ಪದವಿ ಪೂರ್ವ ಶಿಕ್ಷಣ ಇಲಾಖೆಯ ಉಪ ನಿರ್ದೇಶಕ ಸಿ ಚೆಲುವಯ್ಯ, ಸಾರ್ವಜನಿಕ ಶಿಕ್ಷಣ ಇಲಾಖೆ ಉಪ ನಿರ್ದೇಶಕ ಎಚ್. ಶಿವರಾಮೇಗೌಡ, ಡಯಟ್ ಪ್ರಾಂಶುಪಾಲರು ಪುರುಷೋತ್ತಮ್, ಕುಷ್ಠರೋಗ ನಿರ್ಮೂಲನಾಧಿಕಾರಿ ಡಾ. ಸೋಮಶೇಖರ್, ಆಯುಷ್ ವೈದ್ಯಾಧಿಕಾರಿ ಡಾ. ಸೀತಾಲಕ್ಷ್ಮಿ ಹಾಗೂ ಇನ್ನಿತರರು ಉಪಸ್ಥಿತರಿದ್ದರು.

ಸಮಾಜ ಸೇವೆಗೆ ವಿದ್ಯೆಗಿಂತ ಹೃದಯವಂತಿಕೆ ಮುಖ್ಯ

ಮಂಡ್ಯ, ಫೆ.27– ಸಾಮಾಜಿಕ ಸೇವೆ ಮಾಡಲು ಯಾವುದೇ ರೀತಿಯ ವಿದ್ಯಾರ್ಹತೆ ಅವಶ್ಯಕತೆ ಇಲ್ಲ. ವಿದ್ಯಾರ್ಹತೆಗಿಂತ ಮಿಗಿಲು ಎಂದರೆ ಮನಸ್ಸು, ಹೃದಯವಂತಿಕೆ ಮತ್ತು ಮಾನವೀಯ ಮೌಲ್ಯಗಳು ಮುಖ್ಯ ಎಂದು ಜಿಲ್ಲಾಧಿಕಾರಿ ಡಾ.ಕುಮಾರ್ ತಿಳಿಸಿದರು.

ಮಂಗಳವಾರ ನಗರದ ಮಾಂಡವ್ಯ ಪದವಿಪೂರ್ವ ಕಾಲೇಜಿನ ಆವರಣದಲ್ಲಿ ಮಂಡ್ಯ ಜಿಲ್ಲಾ ಸ್ವಯಂ ಸೇವಾ ಸಂಸ್ಥೆಗಳ ಒಕ್ಕೂಟ, ಫೆವಾರ್ಡ್ – ಮಂಡ್ಯ ವತಿಯಿಂದ ನಡೆದ ಅಂತಾರಾಷ್ಟ್ರೀಯ ಸ್ವಯಂಸೇವಾ ಸಂಸ್ಥೆಗಳ ದಿನಾಚರಣೆ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಮಾನವೀಯ ಮೌಲ್ಯಗಳಿಗಿಂತ ದೊಡ್ಡದಾದ ದೇವರು ಯಾರಲ್ಲೂ ಕಾಣಲು ಸಾಧ್ಯವಿಲ್ಲ. ನಿಜವಾದ ದೇವರು ಕಾಣಬೇಕಾದರೆ ಒಳ್ಳೆಯ ಕೆಲಸಗಳನ್ನು ಮಾಡುವ ಮೂಲಕ ಇಡೀ ಸಮಾಜದಲ್ಲಿ ಶಾಶ್ವತವಾದ ಒಳ್ಳೆಯ ಕೆಲಸ ಮಾಡಿದರೆ ನಿಜವಾದ ದೇವರನ್ನು ಕಾಣಬಹುದು ಎಂದರು.

ಯಾವುದೇ ಪ್ರತಿಫಲಾಪೇಕ್ಷೆಯನ್ನು ನಿರೀಕ್ಷೆ ಮಾಡದೆ ಸ್ವಾರ್ಥರಹಿತವಾಗಿ ಸಾಮಾಜಿಕ ಕಳಕಳಿ ಹೊಂದಿ ಸೇವಾಮನೋಭಾವದಿಂದ ಕೆಲಸ ಮಾಡುವುದು ಮುಖ್ಯ. ಸ್ವಯಂ ಸೇವಾ ಸಂಸ್ಥೆಗಳು ಜಿಲ್ಲೆಯಲ್ಲಿ ಯಾವ ರೀತಿ ಅಭಿವೃದ್ಧಿ ಪರ ಚಿಂತನೆಯ ಕೆಲಸ ಮಾಡುತ್ತಿದ್ದಾರೆ ಎಂಬುದಕ್ಕೆ ಕೈಗನ್ನಡಿಯಾಗಿದೆ. ಜಿಲ್ಲೆಯಲ್ಲಿ ಅತ್ಯಂತ ಕ್ರಿಯಾಶೀಲವಾಗಿ ಸಮಾಜಮುಖಿಯಾಗಿ ಕೆಲಸ ಮಾಡುತ್ತಿದ್ದಾರೆ. ಒಳ್ಳೆಯ ಕೆಲಸ ಮಾಡಲು ಮಾನವೀಯತೆಯುಳ್ಳ ಹೃದಯ ವಂತಿಕೆ ಮನಸ್ಸಿರಬೇಕು ಎಂದು ಹೇಳಿದರು.

ಲಯನ್ಸ್ ಸಂಸ್ಥೆ ಜಿಲ್ಲಾ ಮಾಜಿ ರಾಜ್ಯಪಾಲ ನಾಗರಾಜ್ ಬೈರಿ ಮಾತನಾಡಿ, ಸೇವೆ ಎಂದಿಗೂ ನಮ್ಮೆಲ್ಲರಿಗೂ ಆದರ್ಶವಾಗಬೇಕು.ಅಂತಹ ಸೇವೆಯನ್ನು ನಿಸ್ವಾರ್ಥವಾಗಿ ಸ್ವಯಂ ಸೇವಾ ಸಂಸ್ಥೆಗಳು ಮಾಡುತ್ತಿವೆ. ಸ್ವಾತಂತ್ರ್ಯ ನಂತರ ಅನೇಕ ಸ್ವಯಂ ಸೇವಾ ಸಂಸ್ಥೆಗಳು ಬಹಳಷ್ಟು ಹುಟ್ಟಿಕೊಂಡಿವೆ. ಕೊಡಗು ಹಾಗೂ ಉತ್ತರ ಕರ್ನಾಟಕ ಪ್ರವಾಹ ಕಂಡ ಸಂದರ್ಭದಲ್ಲಿ ಸ್ವಯಂ ಸೇವಾ ಸಂಸ್ಥೆಗಳು ಸ್ಪಂದಿಸುವ ಮೂಲಕ ದೊಡ್ಡ ಮಟ್ಟದಲ್ಲಿ ಕೆಲಸ ಮಾಡಿರುವುದನ್ನು ಕಂಡಿದ್ದೇವೆ ಎಂದು ಹೇಳಿದರು.



ಅಂತಾರಾಷ್ಟ್ರೀಯ ಸ್ವಯಂಸೇವಾ ಸಂಸ್ಥೆಗಳ ದಿನಾಚರಣೆ ಕಾರ್ಯಕ್ರಮದಲ್ಲಿ ಜಿಲ್ಲಾಧಿಕಾರಿ ಡಾ. ಕುಮಾರ್ ಮಾತನಾಡಿದರು.

ರೆಡ್‌ಕ್ರಾಸ್ ಸಂಸ್ಥೆ ಉಪಾಧ್ಯಕ್ಷೆ ಮೀರಾ ಶಿವಲಿಂಗಯ್ಯ ಮಾತನಾಡಿ, ಮಾನವೀಯ ಸೇವೆಯ ಮಹತ್ವವನ್ನು ಅರಿತು ಸ್ವಯಂ ಸೇವಾ ಸಂಸ್ಥೆಗಳು ಕೆಲಸ ಮಾಡಿದಾಗ ಸೇವೆಯಿಂದ ಅನುಭವ ಪಡೆಯಬಹುದು. ಸರ್ಕಾರ ಏನೇ ಕೆಲಸ ಮಾಡಬೇಕಾದರೂ ಎಲ್ಲರಿಗೂ ಸಮಬಾಳು ಸಿಕ್ಕಲಿ ಎಂದು ಕೆಲಸ ಮಾಡುತ್ತದೆ ಅಂತಹ ಸಹೃದಯತೆ ಎಲ್ಲರಲ್ಲೂ ಇರಬೇಕು ಎಂದರು.

ಮೊದಲೆಲ್ಲ ಸಮಾಜ, ಸರ್ಕಾರ, ಮಾರುಕಟ್ಟೆ ಎಂಬುದು ಇತ್ತು, ಜಾಗತೀಕರಣದ ಪ್ರಭಾವದಿಂದಾಗಿ ಈಗ ಮೊದಲು ಮಾರುಕಟ್ಟೆ, ಸರ್ಕಾರ, ಸಮಾಜ ಬಂದಿದೆ. ಆದ್ದರಿಂದ ಮೌಲ್ಯಯುತ ಸಮಾಜ ಕಟ್ಟಬೇಕಾದರೆ ತಂತ್ರಜ್ಞಾನವನ್ನು ಅರಿಯಬೇಕು ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಜಿಪಂ ಸಿಇಓ ಶೇಕ್ ತನ್ವೀರ್ ಆಸೀಫ್, ಹಿರಿಯ ಸಹಕಾರಿ ಧುರೀಣ ಕೌಡ್ಲೆ ಚೆನ್ನಪ್ಪ, ಸಹಾಯಕ ಉಪ ಅರಣ್ಯ ಸಂರಕ್ಷಣಾಧಿಕಾರಿ ಶಂಕರೇಗೌಡ, ನಂಜಮ್ಮ, ಮೋಟೆಗೌಡ ಚಾರಿಟಬಲ್ ಟ್ರಸ್ಟ್ ಅಧ್ಯಕ್ಷ ಕೆ.ಟಿ.ಹನುಮಂತು, ಫೆವಾರ್ಡ್– ಕೆ ರಾಜ್ಯಾಧ್ಯಕ್ಷ ಮಹೇಶ್ ಚಂದ್ರಗುರು, ಫೆವಾರ್ಡ್ ಜಿಲ್ಲಾಧ್ಯಕ್ಷ ಡಾ. ನಾಗಪ್ಪ, ಮುಖಂಡರಾದ ಕಾರಸವಾಡಿ ಮಹಾದೇವು, ದೇವರಾಜ್ ಕೊಪ್ಪ, ಸೇರಿದಂತೆ ಮತ್ತಿತರರು ಹಾಜರಿದ್ದರು.

ಆಸ್ತಿ ವಿವಾದ: ಮಗನಿಂದಲೇ ತಂದೆಯ ಹತ್ಯೆ

ಮಂಡ್ಯ, ಫೆ.27– ಆಸ್ತಿ ವಿಚಾರಕ್ಕೆ ಸಂಬಂಧಿಸಿದಂತೆ ಮಗನೇ ತಂದೆಯನ್ನು ಬರ್ಬರವಾಗಿ ಹತ್ಯೆ ಮಾಡಿರುವ ಘಟನೆ ತಾಲೂಕಿನ ಸುಂಡಹಳ್ಳಿ ಗ್ರಾಮದಲ್ಲಿ ಜರುಗಿದೆ.

ಗ್ರಾಮದ ನಂಜಪ್ಪ (65) ಮಗನಿಂದ ಹತ್ಯೆಗೊಳಗಾದವನಾಗಿದ್ದು, ತಲೆ ಮೇಲೆ ಕಲ್ಲು ಎತ್ತಿ ಹಾಕಿ ಆತನ ಮಗ ಮಹದೇವು ಹತ್ಯೆ ಮಾಡಿದ್ದಾನೆ.

ಮಗಳ ಹೆಸರಿಗೆ ಮಹದೇವನ ತಂದೆ ನಂಜಪ್ಪ ಆಸ್ತಿ ಬರೆದುಕೊಟ್ಟಿದ್ದ ಹಿನ್ನೆಲೆಯಲ್ಲಿ ತನಗೆ ಆಸ್ತಿ ಕೊಡಲಿಲ್ಲವೆಂದು ಆಕ್ರೋಶಗೊಂಡ ಮಗ ಮಹದೇವ ಮಂಗಳವಾರ ಬೆಳಗ್ಗಿನ ಜಾವ ಗ್ರಾಮದ ರಸ್ತೆಯಲ್ಲಿ ಓಡಾಡಿಸಿಕೊಂಡು ಹತ್ಯೆ ಮಾಡಿದ್ದಾನೆ.

ನಂಜಪ್ಪನನ್ನು ಬಿಡಿಸಿಕೊಳ್ಳಲು ಬಂದ ತಾಯಿ ಮಹದೇವಮ್ಮಳಿಗೂ ಸಣ್ಣಪುಟ್ಟ ಗಾಯಗಳಾಗಿದ್ದು, ಹತ್ಯೆ ಬಳಿಕ ಮಗ ಮಹದೇವ ಪರಾರಿಯಾಗಿದ್ದಾನೆ. ಮಂಡ್ಯ ಮಿಮ್ಸ್ ಶವಾಗಾರಕ್ಕೆ ಮೃತದೇಹವನ್ನು ಸ್ಥಳಾಂತರಗೊಳಿಸಿ, ಮರಣೋತ್ತರ ಪರೀಕ್ಷೆ ಬಳಿಕ ವಾರಸುದಾರರಿಗೆ ಮೃತದೇಹ ಹಸ್ತಾಂತರಿಸಲಾಗಿದ್ದು, ಈ ಸಂಬಂಧ ಮಂಡ್ಯ ಗ್ರಾಮಾಂತರ ಠಾಣೆಯ ಪೊಲೀಸರು ಪ್ರಕರಣ ದಾಖಲಿಸಿಕೊಂಡು ಆರೋಪಿ ಬಂಧನಕ್ಕೆ ಬಲೆ ಬೀಸಿದ್ದಾರೆ.

ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪನವರ ಹುಟ್ಟುಹಬ್ಬ ಆಚರಣೆ

ಆಟೋ ಚಾಲಕರಿಗೆ ಸಮವಸ್ತ್ರ ವಿತರಣೆ



ಶ್ರೀರಂಗಪಟ್ಟಣ, ಫೆ.27– ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರ 81ನೇ ವರ್ಷದ ಹುಟ್ಟುಹಬ್ಬದ ಪ್ರಯುಕ್ತ ಆಟೋ ಚಾಲಕರು ಮತ್ತು ಮಾಲೀಕರಿಗೆ ಸಮವಸ್ತ್ರವನ್ನು ವಿತರಿಸಲಾಯಿತು. ಇಂದು ಶ್ರೀರಂಗಪಟ್ಟಣ ರಂಗನಾಥ ಸ್ವಾಮಿ ಕ್ರೀಡಾಂಗಣದಲ್ಲಿ ಬಿಜೆಪಿ ಮುಖಂಡ ಇಂಡವಾಳು ಸಚ್ಚಿದಾನಂದ ಪಟ್ಟಣದ ಆಟೋ ಚಾಲಕರಿಗೆ ಸಮವಸ್ತ್ರದ ಕಿಟ್ ಅನ್ನು ವಿತರಿಸಿದರು. ನಂತರ ಮಾತನಾಡಿದ ಅವರು, ನಮ್ಮ ಜಿಲ್ಲೆಯಲ್ಲಿ ಹುಟ್ಟಿದ ಯಡಿಯೂರಪ್ಪ ರಾಜ್ಯದಲ್ಲಿ ನಾಲ್ಕುಬಾರಿ ಮುಖ್ಯಮಂತ್ರಿಯಾಗಿ ಹತ್ತು ಹಲವಾರು ಜನಪರ ಯೋಜನೆಗಳನ್ನು ರಾಜ್ಯಕ್ಕೆ ಕೊಡುಗೆಯಾಗಿ ನೀಡಿದ್ದಾರೆ. ಅವರ 40 ವರ್ಷಗಳ ರಾಜಕೀಯ ಜೀವನ ಅಷ್ಟು ಸುಗಮವಾಗಿರಲಿಲ್ಲ. ಹಲವಾರು ಏಳುಬೀಳುಗಳನ್ನು ಅವರು ನೋಡಿದ್ದಾರೆ, ಅದಕ್ಕಾಗಿಯೇ ಅವರ ಹುಟ್ಟುಹಬ್ಬವನ್ನು ಅರ್ಥಪೂರ್ಣವಾಗಿ ಆಚರಿಸಲು ಇಂದು ನಾವು ನಮ್ಮ ತಾಲೂಕಿನ ಶ್ರಮಿಕಜೀವಿಗಳಾದ ಆಟೋ ಚಾಲಕರಿಗೆ ಸಮವಸ್ತ್ರ ವಿತರಿಸುತ್ತಿದ್ದೇವೆ ಎಂದರು.

ಈ ಸಂದರ್ಭದಲ್ಲಿ ರೈತ ಮುಖಂಡರಾದ ಕೆ.ಎಸ್. ನಂಜುಂಡೇಗೌಡ ಹಾಗೂ ಜಿಲ್ಲಾ ಮುಖಂಡರಾದ ನಗುವನಹಳ್ಳಿ ಟಿ.ಶ್ರೀಧರ್, ಹೊಸಳ್ಳಿ ಪೈಲ್ವಾನ್ ಮಹಾದೇವ್, ಶ್ರೀರಂಗಪಟ್ಟಣ ಪುರಸಭ ಸದ್ಯಸರಾದ ರಾಜಣ್ಣ, ಗಂಜಾಂ ಶಿವು, ಕೃಷ್ಣಪ್ಪ, ಎಸಿಸಿ ಪ್ರಕಾಶ್, ಪುರಸಭೆ ಮಾಜಿ ಸದಸ್ಯರು, ತಾಲೂಕು ಅಧ್ಯಕ್ಷ ಪಿ.ಹಳ್ಳಿ ರಮೇಶ್, ಕೃಷ್ಣರಾಜೇಂದ್ರ ಸೊಸೈಟಿ ಅಧ್ಯಕ್ಷ ರಘು, ದರ್ಶನ್ ಲಿಂಗರಾಜು, ಸುಮಂತ್, ಕಾರ್ಯದರ್ಶಿ ಸಂತೋಷ್ ಇನ್ನಿತರರಿದ್ದರು

ಮನೆದೇವರ ಸನ್ನಿಧಾನದಲ್ಲಿ ವಿಶೇಷ ಪೂಜೆ



ಕೆ.ಆರ್.ಪೇಟೆ, ಫೆ.27– ತಾಲೂಕಿನ ಬೂಕನಕೆರೆಯ ಸುಪುತ್ರ, ಮಾಜಿ ಸಿಎಂ ಬಿ.ಎಸ್.ಯಡಿಯೂರಪ್ಪ ಅವರ 81ನೇ ಹುಟ್ಟುಹಬ್ಬದ ಅಂಗವಾಗಿ ತಾಲೂಕು ಬಿಜೆಪಿ ಕಾರ್ಯಕರ್ತರು ಯಡಿಯೂರಪ್ಪ ಅವರ ಮನೆ ದೇವರು ಸ್ವತಂತ್ರ ಸಿದ್ದಲಿಂಗೇಶ್ವರ ಶ್ರೀ ಕ್ಷೇತ್ರದಲ್ಲಿ ವಿಶೇಷ ಪೂಜೆ, ಅರ್ಚನೆ, ಅಭಿಷೇಕ ಪ್ರಸಾದ ವಿನಿಯೋಗ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು.

ತಾಲೂಕು ಪಂಚಾಯಿತಿ ಮಾಜಿ ಸದಸ್ಯರಾದ ಮೀನಾಕ್ಷಿ ಪುಟ್ಟರಾಜು, ತಾಲೂಕು ಬಿಜೆಪಿ ಅಧ್ಯಕ್ಷ ಪರಮೇಶ್ ಅರವಿಂದ್, ತಾಲೂಕು ಬಿಜೆಪಿ ಪ್ರಧಾನ ಕಾರ್ಯದರ್ಶಿ ಚೋಕನಹಳ್ಳಿ ಪ್ರಕಾಶ್, ಡಿಸಿಸಿ ಬ್ಯಾಂಕ್ ಮಾಜಿ ನಿರ್ದೇಶಕ ತೋಟಪ್ಪಶೆಟ್ಟಿ, ಶೈಲೇಂದ್ರ ಮತ್ತಿತರರ ನೇತೃತ್ವದಲ್ಲಿ ಸ್ವತಂತ್ರ ಸಿದ್ದಲಿಂಗೇಶ್ವರರ ಸ್ವಾಮೀಜಿಯವರ ಗದ್ದುಗೆಗೆ ವಿಶೇಷ ಪೂಜೆ ಸಲ್ಲಿಸಿ ಯಡಿಯೂರಪ್ಪ ಅವರಿಗೆ ದೀರ್ಘಾಯಸ್ಸು ಕೋರಿ ಪ್ರಾರ್ಥನೆ ಸಲ್ಲಿಸಲಾಯಿತು. ಈ ಸಂದರ್ಭದಲ್ಲಿ ಗವೀಮಠದ ಶ್ರೀಗಳಾದ ಸ್ವತಂತ್ರ ಚನ್ನವೀರಯ್ಯ ಸ್ವಾಮೀಜಿ, ತಾಪಂ ಮಾಜಿ ಸದಸ್ಯರಾದ ಮೀನಾಕ್ಷಿ ಪುಟ್ಟರಾಜು, ಮುಖಂಡರಾದ ಶೈಲೇಂದ್ರ ವಿ.ಡಿ.ಶಂಕರ್, ಗಂಜಿಗೆರೆ ವಿಜಯ್ ಕುಮಾರ್, ದಡದಹಳ್ಳಿ ರೇವಣ್ಣ, ಗುರುಮೂರ್ತಿ, ರಾಜಶೇಖರ್, ಮಹೇಶ್, ಚೋಕನಹಳ್ಳಿ ರಮೇಶ್, ಗ್ರಾಪಂ ಸದಸ್ಯ ಶಂಕರ್, ಆಕಾಶವಾಣಿ ಗಾಯಕಿ ಜಯಮ್ಮ, ಅರ್ಚಕರಾದ ಹೇಮಂತ್ ಶಾಸ್ತ್ರೀ ಸೇರಿದಂತೆ ಹಲವಾರು ಮುಖಂಡರು ಹಾಗೂ ಅಭಿಮಾನಿಗಳು ಭಾಗವಹಿಸಿದ್ದರು.


ಸೋಮಶೇಖರ್‌ಗೆ ಅನರ್ಹತೆ ಭಯವಿಲ್ಲ!


ಬೆಂಗಳೂರು, ಫೆ.27– ರಾಜ್ಯಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿಗೆ ಅಡ್ಡ



ಮತದಾನ ಮಾಡಿರುವ ಬಿಜೆಪಿ ಶಾಸಕ ಎಸ್.ಟಿ. ಸೋಮಶೇಖರ್‌ಗೆ ಅನರ್ಹತೆ ಭಯವಿಲ್ಲ. ಕಾರಣ ಪಕ್ಷಾಂತರ ನಿಷೇಧ ಇಲ್ಲವೇ, ವ್ಹಿಪ್ ವಿಧಾನಸಭೆ ಯಿಂದ ರಾಜ್ಯಸಭೆಗೆ ನಡೆಯುವ ಚುನಾವಣೆಗೆ ಅನ್ವಯಿಸುವುದಿಲ್ಲ. ಹಾಗಾಗಿ ಅವರು ಸದ್ಯಕ್ಕೆ ಸೇಫ್. ಆದರೆ, ಅವರು ಬಿಜೆಪಿ ಶಾಸಕರಾಗಿರುವುದರಿಂದ ಆ ಪಕ್ಷ ಇವರನ್ನು ಪಕ್ಷದಿಂದ ಉಚ್ಚಾಟನೆ ಮಾಡಬಹುದು. ಒಂದು ವೇಳೆ ಇವರನ್ನು ಅನರ್ಹಗೊಳಿಸುವಂತೆ ಸ್ಪೀಕರ್‌ಗೆ ದೂರು ಸಲ್ಲಿಸಬಹುದು. ಇಂತಹ ಸಂದರ್ಭದಲ್ಲಿ ಅನರ್ಹತೆಗೊಳಪಡಿಸುವ ಸಾಧ್ಯತೆಗಳು ತೀರಾ ಕಡಿಮೆ. ಹಾಗಾಗಿ ಎಸ್.ಟಿ. ಸೋಮಶೇಖರ್ ಅಡ್ಡ ಮತದಾನ ಮಾಡಿದ್ದರೂ ಸಹ ಯಾವುದೇ ರೀತಿಯ ಸಂಕಷ್ಟಕ್ಕೀಡಾಗುವ ಸಾಧ್ಯತೆಗಳಿಲ್ಲ.

ವಾಹನಗಳ ಟೈರ್ ಸವೆದಿದ್ದರು ದಂಡ!





ಕರ್ನಾಟಕ ರಾಜ್ಯ ಪೊಲೀಸ್
TRD. 309. SAEPA. 2006
ಬೆಂಗಳೂರು ದಿನಾಂಕ
29.10.2007
ಸಿ ಆರ್ ಆರ್ ನಂಬರ್
K/920/7604/138
ದಿನಾಂಕ 27/02/2024 12:37:16 PM
ಸಮಯ 12:37
ಆರಕ್ಷಕ ಠಾಣೆ KRISHNARAJA TRAFFIC PS
ಸ್ಥಳ
Krishnaraja Traffic PS Limits
lat 12.2943455
long 76.65870166666667
ವಾಹನ CAR
ನೋಂದಣಿ ಸಂಖ್ಯೆ
KA03MF3090
ಡಿ ಎಲ್
KA0420090009602
ಚಾಲಕ ಹೆಸರು
mukundan
ಮಾಲೀಕರ ಹೆಸರು
ಉಲ್ಲಂಘನೆಯ ಪ್ರಕಾರ
1. BALDTYRES(500)
ಒಟ್ಟು ಮೊತ್ತ
500
Payment by Cash
ಚಾಲಕ / ಮಾಲೀಕರ ಸಹಿ
ಅಧಿಕಾರಿ ಸಹಿ

ಮೈಸೂರು, ಫೆ.27(ಎಸ್‌ಪಿಎನ್)– ಕಾರು ಚಾಲಕರೇ ಎಚ್ಚರ.. ಎಚ್ಚರ.. ನಿಮ್ಮ ಕಾರಿನ ಟೈರ್ ಸಂಪೂರ್ಣ ಸವೆದಿದ್ದರೆ, ಅದಕ್ಕೂ ಬೀಳಲಿದೆ ದಂಡ. ಹೌದು ಕಾರಿನ ಟೈರ್ ಸಂಪೂರ್ಣ ಸವೆದಿದ್ದ ಹಿನ್ನೆಲೆಯಲ್ಲಿ ಕಾರು ಚಾಲಕನೋರ್ವನಿಗೆ ಮಂಗಳವಾರ ಕೃಷ್ಣರಾಜ ಸಂಚಾರ ಪೊಲೀಸರು 500 ರೂ. ದಂಡ ವಿಧಿಸಿದ್ದಾರೆ.


ಮೈಸೂರು ಕಾರು ಚಾಲಕ ಮುಕುಂದ್ ದಂಡತೆತ್ತವರು. ಇವರು, ನಂಜನಗೂಡು ರಸ್ತೆಯಲ್ಲಿ ಮಂಗಳವಾರ ಕೆ.ಆರ್. ಸಂಚಾರ ಪೊಲೀಸರು ತಪಾಸಣೆ ನಡೆಸುತ್ತಿದ್ದ ವೇಳೆ ಕಾರಿನಲ್ಲಿ (ಕೆಎ.03 ಎಂಎಫ್ 3090) ನಂಜನಗೂಡು ರಸ್ತೆಯಿಂದ ಮೈಸೂರು ಕಡೆಗೆ ವೇಗವಾಗಿ ಕಾರಿನಲ್ಲಿ ಬರುತ್ತಿದ್ದರು. ಈ ವೇಳೆ ಸಂಚಾರ ಪೊಲೀಸರು ತಪಾಸಣೆಗೆ ಕಾರು ನಿಲ್ಲಿಸಲು ಕೈಯೊಡ್ಡಿದ್ದಾರೆ.

ಈ ವೇಳೆ ಚಾಲಕ ಮುಕುಂದ್ ತಕ್ಷಣ ಕಾರು ನಿಲ್ಲಿಸಲು ಸಾಧ್ಯವಾಗದೇ ಸುಮಾರು 200 ಮೀಟರ್‌ನಷ್ಟು ಮುಂದಕ್ಕೆ ಹೋಗಿ ನಿಲ್ಲಿಸಿದ್ದಾರೆ. ಈ ಗಾಬರಿಯಲ್ಲಿ ಚಾಲಕ ಮುಕುಂದ್ ಎದುರುಗಡೆ ಬರುತ್ತಿದ್ದ ಸ್ಕೂಟರ್‌ಗೆ ಡಿಕ್ಕಿ ಹೊಡೆಯುವ ಸಂಭವವಿತ್ತು. ಅಷ್ಟರಲ್ಲಿ ಬ್ರೇಕ್ ಅಪ್ಲೈ ಮಾಡಿದ ಹಿನ್ನೆಲೆಯಲ್ಲಿ ಕಾರು ನಿಂತಿದೆ.

ತಕ್ಷಣ ಸಂಚಾರಿ ಪೊಲೀಸರು ಕಾರಿನ ಟೈರ್‌ಗಳನ್ನು ಪರಿಶೀಲಿಸಿದಾಗ, ಸಂಪೂರ್ಣ ಸವೆದಿದ್ದವು. ಈ ಕಾರಣದಿಂದಾಗಿ ಕಾರು ಬ್ರೇಕ್ ಅಪ್ಲೈ ಆಗುತ್ತಿರಲಿಲ್ಲ. ಹಾಗಾಗಿ ಕಾರು ಚಾಲಕರು, ದ್ವಿಚಕ್ರ ವಾಹನ ಸವಾರರಿಗೆ ವಾಹನದ ಟೈರ್ ಸವೆತದಿಂದ ಆಗುವ ಅನಾಹುತದ ಬಗ್ಗೆ ಜಾಗೃತಗೊಳಿಸುವ ಸಲುವಾಗಿ ಟೈರ್ ಸವೆತಕ್ಕೆ 500 ರೂ. ದಂಡ ವಿಧಿಸಲಾಗಿದೆ ಎಂದು ಕೃಷ್ಣರಾಜ ಸಂಚಾರಿ ಠಾಣೆ ಇನ್ಸ್‌ಪೆಕ್ಟರ್ 'ಮೈಸೂರು ಮಿತ್ರ'ನಿಗೆ ಮಾಹಿತಿ ನೀಡಿದರು.

ಮಂಗಳವಾರ ನಡೆಸಿದ ತಪಾಸಣೆಯಲ್ಲಿ ಕಾರಿನ ಸೀಟ್ ಬೆಲ್ಟ್ ಹಾಕದವರು, ಹೆಲ್ಮೆಟ್ ಧರಿಸದವರು ಸೇರಿದಂತೆ ಒಟ್ಟು 44 ಪ್ರಕರಣ ದಾಖಲಿಸಿ 23 ಸಾವಿರ ರೂ ದಂಡ ವಿಧಿಸಲಾಗಿದೆ ಎಂದರು.

ಸರ್ಕಾರಿ ನೌಕರರ ಗೃಹ ನಿರ್ಮಾಣ ಸಹಕಾರ ಸಂಘದ ನಿರ್ದೇಶಕರುಗಳ ಅವಿರೋಧ ಆಯ್ಕೆ




ಮಹೇಶ್ | ಅಣ್ಣೇಗೌಡ | ನಾಗರಾಜು | ರಾಜಣ್ಣ | ಲೋಕೇಶ್ | ರಾಮಲಿಂಗಯ್ಯ | ಅವಿನಾಶ್ | ಕಮಲಮ್ಮ | ಗೋಪಮ್ಮ | ಮಂಜಪ್ಪ | ಜೋಸೆಫ್ | ಕೃಷ್ಣ | ರಾಣಿ

ಮೈಸೂರು, ಫೆ.27–ಮೈಸೂರು ಸರ್ಕಾರಿ ನೌಕರರ ಗೃಹ ನಿರ್ಮಾಣ ಸಹಕಾರ ಸಂಘ ನಿಯಮಿತದ ಆಡಳಿತ ಮಂಡಳಿಯ ನಿರ್ದೇಶಕರುಗಳಾಗಿ ಸಾಮಾನ್ಯ ಕ್ಷೇತ್ರದಿಂದ ಮಹೇಶ್, ಕೆ.ಎನ್.ಅಣ್ಣೇಗೌಡ, ಎನ್.ನಾಗರಾಜು, ಎಂ.ರಾಜಣ್ಣ, ಬಿ.ಸಿ.ಲೋಕೇಶ್, ರಾಮಲಿಂಗಯ್ಯ, ಎಸ್.ಅವಿನಾಶ್, ಮಹಿಳಾ ಕ್ಷೇತ್ರದಿಂದ ಶ್ರೀಮತಿ ಪಿ. ಕಮಲಮ್ಮ, ಕುಮಾರಿ ಕೆ.ಎಂ. ಗೋಪಮ್ಮ, ಹಿಂದುಳಿದ ವರ್ಗ, ಪ್ರವರ್ಗ–ಎ ವಿಭಾಗದಿಂದ ಎಸ್.ಮಂಜಪ್ಪ ಆರ್. ಜೋಸೆಫ್, ಪರಿಶಿಷ್ಟ ಜಾತಿಯಿಂದ ಕೃಷ್ಣ, ಪರಿಶಿಷ್ಟ ಪಂಗಡದಿಂದ ಶ್ರೀಮತಿ ಎ.ಬಿ. ರಾಣಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಆಡಳಿತ ಮಂಡಳಿ ನಿರ್ದೇಶಕರುಗಳ ಚುನಾವಣೆಯನ್ನು ಮಾ.3ರಂದು ನಿಗದಿಪಡಿಸಲಾಗಿತ್ತು. ಆದರೆ ಈಗಾಗಲೇ ಅವಿರೋಧ ಆಯ್ಕೆ ನಡೆದಿರುವ ಬಗ್ಗೆ ಚುನಾವಣಾಧಿಕಾರಿಗಳು ಪ್ರಕಟಣೆ ಹೊರಡಿಸಿದ್ದಾರೆ.

2035ರ ವೇಳೆಗೆ ಭಾರತಕ್ಕೆ ಸ್ವಂತ ಬಾಹ್ಯಾಕಾಶ ನಿಲ್ದಾಣ: ಮೋದಿ

ತಿರುವನಂತಪುರಂ, ಫೆ.27– 2035ರ ವೇಳೆಗೆ ಭಾರತಕ್ಕೆ ತನ್ನದೇ ಸ್ವಂತ ಬಾಹ್ಯಾಕಾಶ ನಿಲ್ದಾಣ ಇರಲಿದ್ದು, ಇದು ಬಾಹ್ಯಾಕಾಶದ ಅಧ್ಯಯನಕ್ಕೆ ಪೂರಕವಾಗಿರಲಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದ್ದಾರೆ. ತಿರುವನಂತಪುರಂನಲ್ಲಿರುವ ವಿಕ್ರಮ್ ಸಾರಾಭಾಯ್ ಬಾಹ್ಯಾಕಾಶ ಕೇಂದ್ರ (ವಿಎಸ್‌ಎಸ್‌ಸಿ)ನಲ್ಲಿ ಮಾತನಾಡಿರುವ ಪ್ರಧಾನಿ ಮೋದಿ, ಭಾರತೀಯ ಗಗನಯಾತ್ರಿ ಚಂದ್ರನ ಮೇಲೆ ನಮ್ಮದೇ ರಾಕೆಟ್‌ನಲ್ಲಿ ಇಳಿಯಲಿದ್ದಾರೆ ಎಂದು ಹೇಳಿದ್ದಾರೆ.



2035ರ ವೇಳೆಗೆ ಭಾರತ ತನ್ನದೇ ಆದ ಬಾಹ್ಯಾಕಾಶ ನಿಲ್ದಾಣವನ್ನು ಹೊಂದಲಿದ್ದು, ಬಾಹ್ಯಾಕಾಶದ ಅಜ್ಞಾತ ವಿಸ್ತಾರಗಳ ಅಧ್ಯಯನಕ್ಕೆ ಇದು ಸಹಕಾರಿಯಾಗಲಿದೆ. ಈ ಅಮೃತಕಾಲದಲ್ಲಿ ಭಾರತೀಯ ಗಗನಯಾನಿಗಳು ಚಂದ್ರನ ಮೇಲೆ ನಮ್ಮ ಸ್ವಂತ ರಾಕೆಟ್‌ನಿಂದ ಇಳಿಯಲಿದ್ದಾರೆ ಎಂದು ಹೇಳಿದ್ದಾರೆ.

ಭಾರತ 21ನೇ ಶತಮಾನದಲ್ಲಿ ಜಾಗತಿಕ ಮಟ್ಟದಲ್ಲಿ ಬಲಿಷ್ಠ ದೇಶವಾಗಿ ಹೊರಹೊಮ್ಮುತ್ತಿದ್ದು ಎಲ್ಲಾ ಕ್ಷೇತ್ರಗಳಲ್ಲಿಯೂ ಗಣನೀಯ ಅಭಿವೃದ್ಧಿ ಸಾಧಿಸುತ್ತಿದೆ ಎಂದು ಮೋದಿ ತಿಳಿಸಿದ್ದಾರೆ.

ಕಳೆದ 10 ವರ್ಷಗಳಲ್ಲಿ ಭಾರತ 400 ಕ್ಕೂ ಹೆಚ್ಚು ಉಪಗ್ರಹಗಳನ್ನು ಉಡಾವಣೆ ಮಾಡಿದೆ, 10 ವರ್ಷಗಳ ಹಿಂದೆ ಕೇವಲ 33 ಉಪಗ್ರಹಗಳನ್ನು ಉಡಾವಣೆ ಮಾಡಲಾಗಿತ್ತು ಎಂದು ಪ್ರಧಾನಿ ಮೋದಿ ಹೇಳಿದ್ದು, ಗಗನ್‌ಯಾನ್ ಮಿಷನ್‌ನಲ್ಲಿ ಬಳಸಲಾಗುತ್ತಿರುವ ಉಪಕರಣಗಳು ಹೆಚ್ಚಾಗಿ ಭಾರತದಲ್ಲಿಯೇ ತಯಾರಿಸಲ್ಪಟ್ಟಿರುವ ಬಗ್ಗೆ ಪ್ರಧಾನಿ ಮೋದಿ ತಮ್ಮ ಸಂತೋಷವನ್ನು ವ್ಯಕ್ತಪಡಿಸಿದ್ದಾರೆ.

ಬಾಹ್ಯಾಕಾಶಕ್ಕೆ ಹಾರಲಿರುವ ಗಗನಯಾತ್ರಿಗಳ ಹೆಸರು ಘೋಷಿಸಿದ ಪ್ರಧಾನಿ

ದೇಶದ ಚೊಚ್ಚಲ ಮಾನವ ಸಹಿತ ಗಗನಯಾನ ತರಬೇತಿ ಪಡೆಯುತ್ತಿರುವ ನಾಲ್ವರು ಗಗನಯಾತ್ರಿಗಳ ಹೆಸರನ್ನು ಪ್ರಧಾನಿ ನರೇಂದ್ರ ಮೋದಿ ಮಂಗಳವಾರ ಪ್ರಕಟಿಸಿದ್ದಾರೆ.



ಪ್ರಧಾನಿ ಮೋದಿ ಘೋಷಣೆ ಮಾಡಿದ ನಾಲ್ವರು ಗಗನ ಯಾತ್ರಿ ಗಳೆಂದರೆ ಪ್ರಶಾಂತ್ ಬಾಲ ಕೃಷ್ಣನ್ ನಾಯರ್, ಅಂಗದ್ ಪ್ರತಾಪ್, ಅಜಿತ್ ಕೃಷ್ಣನ್ ಮತ್ತು ಶುಭಾಂಶು ಶುಕ್ಲಾ ಈ ನಾಲ್ಕು ಮಂದಿ ಗಗನಯಾತ್ರಿಗಳಿಗೆ ಗಗನಯಾನದ ಕಿಟ್ ನೀಡುವ ಮೂಲಕ ಪ್ರಧಾನಿ ಮೋದಿ ಅವರಿಗೆ ಶುಭ ಕೋರಿದರು. ಅಲ್ಲದೆ ಅವರು ದೇಶದ 1.4 ಬಿಲಿಯನ್ ಜನರ ಆಕಾಂಕ್ಷೆಗಳನ್ನು ಒಳಗೊಂಡಿರುವ ನಾಲ್ಕು ಶಕ್ತಿಗಳು ಎಂದೂ ಬಣ್ಣಿಸಿದರು.

ಬಳಿಕ ಮಾತನಾಡಿದ ಪ್ರಧಾನಿ ಮೋದಿ, 'ನಾಲ್ಕು ದಶಕಗಳ ನಂತರ, ಒಬ್ಬ ಭಾರತೀಯನು ಬಾಹ್ಯಾಕಾಶಕ್ಕೆ ತೆರಳಲು ಸಿದ್ಧನಾಗಿದ್ದಾನೆ. ಈ ಬಾರಿ ಕೌಂಟ್‌ಡೌನ್, ಸಮಯ ಮತ್ತು ರಾಕೆಟ್ ಕೂಡ ನಮ್ಮದಾಗಿರಲಿದೆ. ಗಗನಯಾನ ಮಾನವ ಹಾರಾಟದ ಮಿಷನ್‌ನಲ್ಲಿ ಬಳಸಲಾದ ಹೆಚ್ಚಿನ ಉಪಕರಣಗಳನ್ನು ಭಾರತದಲ್ಲಿ ತಯಾರಿಸಲಾಗುತ್ತದೆ ಎಂಬುದಕ್ಕೆ ನನಗೆ ಹೆಮ್ಮೆ ಮತ್ತು ಸಂತೋಷವಾಗಿದೆ ಎಂದರು.

ಎಐಡಿಎಸ್‌ಓ ನೇತೃತ್ವದಲ್ಲಿ ಚಂದ್ರಶೇಖರ್ ಆಜಾದ್ ಹುತಾತ್ಮ ದಿನಾಚರಣೆ



ಮೈಸೂರು ವಿಶ್ವವಿದ್ಯಾನಿಲಯದ ಹಾಕಿ ಮೈದಾನದಲ್ಲಿ ಎಐಡಿಎಸ್‌ಓ ಕಾರ್ಯಕರ್ತರು ಕ್ರೀಡಾಪಟುಗಳೊಂದಿಗೆ ಸ್ವಾತಂತ್ರ್ಯ ಹೋರಾಟಗಾರ ಚಂದ್ರಶೇಖರ್ ಆಜ್ಹಾದ್ ಹುತಾತ್ಮ ದಿನವನ್ನು ಆಚರಿಸಿದರು.

ಮೈಸೂರು,ಫೆ.27(ಎಂಟಿವೈ)– ಮೈಸೂರು ವಿಶ್ವವಿದ್ಯಾನಿಲಯದ ವಿವಿಧ ಮೈದಾನದಲ್ಲಿ ಆಲ್ ಇಂಡಿಯಾ ಡೆಮಾಕ್ರೆಟಿಕ್ ಸ್ಟೂಡೆಂಟ್ಸ್ ಆರ್ಗನೈಜೇಷನ್ (ಎಐಡಿಎಸ್‌ಓ) ಕಾರ್ಯಕರ್ತರು ವಿವಿಧ ಕ್ರೀಡಾಪಟುಗಳೊಂದಿಗೆ ಸ್ವಾತಂತ್ರ್ಯ ಹೋರಾಟಗಾರ ಚಂದ್ರಶೇಖರ್ ಆಜ್ಹಾದ್ ಅವರ ಹುತಾತ್ಮ ದಿನವನ್ನು ಆಚರಿಸಿದರು.

ಮೈಸೂರು ವಿಶ್ವವಿದ್ಯಾನಿಲಯದ ಹಾಕಿ, ಕ್ರಿಕೆಟ್, ಬಾಸ್ಕೆಟ್ ಬಾಲ್ ಮೈದಾನ ಹಾಗೂ ಮಹಾರಾಜ ಕಾಲೇಜು ಮೈದಾನದಲ್ಲಿ ಎಐಡಿಎಸ್‌ಓ ಕಾರ್ಯಕರ್ತರು ಸ್ವಾತಂತ್ರ್ಯ ಹೋರಾಟಗಾರ ಚಂದ್ರಶೇಖರ್ ಆಜ್ಹಾದ್ ಅವರ ಭಾವಚಿತ್ರ ಪ್ರದರ್ಶಿಸಿ, ಮೌನ ಆಚರಿಸುವ ಮೂಲಕ ಸ್ವಾತಂತ್ರ್ಯ ಹೋರಾಟಗಾರರ ಆತ್ಮಕ್ಕೆ ಶಾಂತಿ ಕೋರಿದರು.

ಈ ವೇಳೆ ಎಐಡಿಎಸ್‌ಓ ಕಾರ್ಯಕರ್ತರು ಮಾತನಾಡಿ, ಚಂದ್ರಶೇಖರ್ ಆಜಾದ್ ಅವರು ತನ್ನ 14ನೇ ವಯಸ್ಸಿನಲ್ಲಿಯೇ ಭಾರತ ದೇಶವನ್ನು ಬ್ರಿಟಿಷರ ದಾಸ್ಯದಿಂದ ಮುಕ್ತಿಗೊಳಿಸಲು ಸ್ವಾತಂತ್ರ್ಯ ಸಂಗ್ರಾಮಕ್ಕೆ ಧುಮುಕಿದರು. ಸ್ವತಂತ್ರ ಭಾರತದ ಕನಸಿನೊಂದಿಗೆ ಅವರ ವಿರುದ್ಧ ಹೋರಾಡುತ್ತಲೇ, 1931 ಫೆ.27ರಂದು ತನ್ನ 24 ನೇ ವಯಸ್ಸಿನಲ್ಲಿಯೇ ಹುತಾತ್ಮರಾದರು. ದೇಶದ ಸ್ವಾತಂತ್ರ್ಯಕ್ಕಾಗಿ ಮಿಡಿದ ಈ ಯುವ ಕ್ರಾಂತಿಕಾರಿಯ ಜೀವನ ಹೋರಾಟದ ಸ್ಫೂರ್ತಿಯು ಇಂದಿಗೂ ಅಜರಾಮರ. ಅವರ ತ್ಯಾಗ ಬಲಿದಾನ ಮತ್ತು ವಿಚಾರಗಳನ್ನು ಜನಸಾಮಾನ್ಯರು, ವಿದ್ಯಾರ್ಥಿಗಳ ನಡುವೆ ಹರಡುವ ಮಹಾನ್ ಉದ್ದೇಶದಿಂದ ಹುತಾತ್ಮ ದಿನವನ್ನು ಆಚರಿಸಲಾಗುತ್ತಿದೆ ಎಂದರು.

ಕಾರ್ಯಕ್ರಮದಲ್ಲಿ ಎಐಡಿಎಸ್‌ಓ ಜಿಲ್ಲಾ ಅಧ್ಯಕ್ಷ ಸುಭಾಷ್, ಕಾರ್ಯದರ್ಶಿ ಚಂದ್ರಕಲಾ ಹಾಗೂ ಉಪಾಧ್ಯಕ್ಷ ನಿತಿನ್ ಹಾಗೂ ಎಐಡಿಎಸ್‌ಓ ಕಾರ್ಯಕರ್ತ ರಾದ ಚಂದನ, ಹೇಮಾಲತಾ, ತೇಜು ಹಾಗೂ ಅಭಿಷೇಕ್ ಮುಂತಾದವರು ಪಾಲ್ಗೊಂಡಿದ್ದರು.

ಕದನೂರಿನಲ್ಲಿ ಪತ್ನಿ ಕೊಲೆ, ಪತಿ ಬಂಧನ

ವಿರಾಜಪೇಟೆ, ಫೆ.27– ಅಕ್ರಮ ಸಂಬಂಧ ಹೊಂದಿದ್ದಾಳೆ ಎಂದು ಪತಿ, ಪತ್ನಿಯನ್ನು ಮಾರಕಾಸ್ತ್ರಗಳಿಂದ ಹಲ್ಲೆ ನಡೆಸಿ ಕೊಲೆ ಮಾಡಿರುವ ಘಟನೆ ವಿರಾಜಪೇಟೆ ಗ್ರಾಮಾಂತರ ಪೊಲೀಸ್ ಠಾಣೆ ವ್ಯಾಪ್ತಿಯ ಕದನೂರು ಗ್ರಾಮದಲ್ಲಿ ಸೋಮವಾರ ರಾತ್ರಿ ನಡೆದಿದೆ.



ಸಮೀಪದ ಕದನೂರು ಗ್ರಾಮದ ತೋಟದ ಲೈನ್ ಮನೆಯೊಂದರಲ್ಲಿ ವಾಸವಿದ್ದ ತಮಿಳುನಾಡು ಮೂಲದ ತಮಿಳರ ಪಿ.ಸುರೇಶ್, ತನ್ನ ಪತ್ನಿ ಉಷಾ(26) ಳನ್ನು ಕೊಲೆ ಮಾಡಿದ್ದಾನೆ. ಕೊಲೆ ಆರೋಪಿ ಪಿ.ಸುರೇಶ್‌ನನ್ನು ಪೊಲೀಸರು ಬಂಧಿಸಿದ್ದಾರೆ.

ಗಂಡ–ಹೆಂಡತಿ ಇಬ್ಬರೂ ತಮ್ಮ ಎರಡು ಹೆಣ್ಣು ಮಕ್ಕಳೊಂದಿಗೆ ಕೂಲಿ ಮಾಡಿಕೊಂಡು ಅನ್ಯೋನ್ಯತೆಯಿಂದ ಜೀವನ ನಡೆಸುತ್ತಿದ್ದರು. ಆದರೆ, ಸೋಮವಾರ ರಾತ್ರಿ ಪತ್ನಿ ಉಷಾ ಬೇರೊಬ್ಬನೊಂದಿಗೆ ಅಕ್ರಮ ಸಂಬಂಧ ಹೊಂದಿರುವುದು ಪತಿ ತಮಿಳರ ಸುರೇಶ್‌ಗೆ ಗೊತ್ತಾಗಿದೆ. ಇದರಿಂದ ಕೋಪಗೊಂಡು ಮಾರಕಾಸ್ತ್ರಗಳಿಂದ ಪತ್ನಿ ಮೇಲೆ ಹಲ್ಲೆ ನಡೆಸಿ, ಕೊಲೆ ಮಾಡಿದ್ದಾನೆ.

ಪೊಲೀಸರ ವಿಚಾರಣೆ ವೇಳೆ ಸುರೇಶ್ ಕೊಲೆ ಮಾಡಿರುವುದಾಗಿ ತಪ್ಪೊಪ್ಪಿಕೊಂಡಿದ್ದಾನೆ. ಬಳಿಕ ಗ್ರಾಮಾಂತರ ಠಾಣೆ ಪೊಲೀಸರು ಈತನನ್ನು ಬಂಧಿಸಿ, ನ್ಯಾಯಾಂಗ ವಶಕ್ಕೆ ಒಪ್ಪಿಸಿದ್ದಾರೆ.

ಜಮ್ಮು–ಕಾಶ್ಮೀರದ ಜಮಾತ್–ಇ–ಇಸ್ಲಾಮಿ ಮೇಲಿನ ನಿಷೇಧ 5 ವರ್ಷ ವಿಸ್ತರಣೆ

ನವದೆಹಲಿ, ಫೆ.27– ಜಮ್ಮು ಮತ್ತು ಕಾಶ್ಮೀರದಲ್ಲಿ ಜಮಾತ್–ಇ–ಇಸ್ಲಾಮಿ ಸಂಘಟನೆಯ ನಿಷೇಧವನ್ನು ಮುಂದಿನ ಐದು ವರ್ಷಗಳ ಕಾಲ ವಿಸ್ತರಿಸಲು ಸರ್ಕಾರ ನಿರ್ಧರಿಸಿದೆ ಎಂದು ಕೇಂದ್ರ ಸಚಿವ ಅಮಿತ್ ಶಾ ಮಂಗಳವಾರ ತಿಳಿಸಿದ್ದಾರೆ.

ಸಂಘಟನೆಯ ಮೂಲಕ ದೇಶದ ಭದ್ರತೆ, ದೇಶದ ಸಮಗ್ರತೆ ಮತ್ತು ಸಾರ್ವಭೌಮತ್ವಕ್ಕೆ ಧಕ್ಕೆ ತರುವ ಕೆಲಸಗಳು ಮುಂದುವರಿದ ಕಾರಣ ನಿಷೇಧವನ್ನು ಮುಂದುವರಿಸಲಾಗಿದೆ ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಹೇಳಿದ್ದಾರೆ. ಈ ಕುರಿತು ಸಾಮಾಜಿಕ ಜಾಲತಾಣ ಎಕ್ಸ್‌ನಲ್ಲಿ ಪೋಸ್ಟ್ ಹಂಚಿಕೊಂಡ ಅಮಿತ್ ಶಾ, ಭಯೋತ್ಪಾದನೆ ಮತ್ತು ಪ್ರತ್ಯೇಕತಾವಾದದ ವಿರುದ್ಧ ಪ್ರಧಾನಿ ನರೇಂದ್ರ ಮೋದಿಯವರ ಶೂನ್ಯ ಸಹಿಷ್ಣುತೆಯ ನೀತಿಯನ್ನು ಅನುಸರಿಸುವ ಸರ್ಕಾರವು ಜಮ್ಮು ಕಾಶ್ಮೀರದಲ್ಲಿ ಜಮಾತ್–ಇ–ಇಸ್ಲಾಮಿ ಸಂಘಟನೆಯ ಮೇಲಿನ ನಿಷೇಧವನ್ನು ಐದು ವರ್ಷಗಳವರೆಗೆ ವಿಸ್ತರಿಸಿದೆ ಎಂದು ಬರೆದುಕೊಂಡಿದ್ದಾರೆ. 2019ರ ಫೆಬ್ರವರಿ 28ರಂದು ಮೊದಲ ಬಾರಿಗೆ ಈ ಸಂಘಟನೆಯನ್ನು ನಿಷೇಧಿಸಿ ಕೇಂದ್ರ ಸರ್ಕಾರ ಆದೇಶ ಹೊರಡಿಸಿತ್ತು.

ಪ್ರಗತಿಪರ ಚಿಂತಕ ಪ.ಮಲ್ಲೇಶ್ ಸ್ಮರಣೆಯಲ್ಲಿ ಮಾ.1, 2ರಂದು ರಾಷ್ಟ್ರೀಯ ವಿಚಾರ ಸಂಕಿರಣ

ಮೈಸೂರು, ಫೆ.27(ಜಿಎ)–ಮೈಸೂರು ಪ್ರಗತಿಪರ ಸಂಘಟನೆಗಳ ಒಕ್ಕೂಟದ ವತಿಯಿಂದ ಪ.ಮಲ್ಲೇಶ್ ಅವರ 90ನೇ ಜನ್ಮದಿನದ ಅಂಗವಾಗಿ 'ಪ.ಮಲ್ಲೇಶ್–90 ಭಾರತ ಜನತಂತ್ರದ ಸಮಕಾಲೀನ ತಲ್ಲಣಗಳು' ಕುರಿತ ಎರಡು ದಿನಗಳ ರಾಷ್ಟ್ರೀಯ ವಿಚಾರ ಸಂಕಿರಣವನ್ನು ಮಾ.1 ಮತ್ತು 2ರಂದು ಕಲಾಮಂದಿರದಲ್ಲಿ ಆಯೋಜಿಸಲಾಗಿದೆ ಎಂದು ಹಿರಿಯ ಪತ್ರಕರ್ತ ಜಿ.ಪಿ.ಬಸವರಾಜು ತಿಳಿಸಿದರು.



ಪ.ಮಲ್ಲೇಶ್

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮಾ.1ರಂದು ಬೆಳಿಗ್ಗೆ 10.30ಕ್ಕೆ ನವದೆಹಲಿಯ ಮಹಿಳಾ ಹೋರಾಟಗಾರ್ತಿ ತೀಸ್ತಾ ಸೆಟಲ್ ವಾಡ್ ವಿಚಾರ ಸಂಕಿರಣಕ್ಕೆ ಚಾಲನೆ ನೀಡುವರು. ಹಿರಿಯ ವಕೀಲ ಪ್ರೊ.ರವಿವರ್ಮ ಕುಮಾರ್ ದಿಕ್ಸೂಚಿ ಭಾಷಣ ಮಾಡಲಿದ್ದಾರೆ. ಹಿರಿಯ ರಂಗಕರ್ಮಿ ಸಿ.ಬಸವಲಿಂಗಯ್ಯ ಉಪಸ್ಥಿತರಿರುವರು ಎಂದರು.

ನಂತರ 'ಜನತಂತ್ರದ ಆಶಯಗಳು' ಕುರಿತು ಮಧ್ಯಾಹ್ನ 12ಗಂಟೆಯಿಂದ 1ರವರೆಗೆ ನಟ ಪ್ರಕಾಶ್ ರೈ, ಸಾಮಾಜಿಕ ಕಾರ್ಯಕರ್ತ ಅನ್ಮೂಲ್ ಅವಿಜಿತ್ ಮಾತನಾಡಲಿದ್ದಾರೆ. ಮಧ್ಯಾಹ್ನ 1ರಿಂದ 2ರವರೆಗೆ 'ಪ್ರಜಾಪ್ರಭುತ್ವದಲ್ಲಿ ವಿರೋಧ ಪಕ್ಷಗಳು ಮತ್ತು ಮಾಧ್ಯಮಗಳು' ಕುರಿತು ಹಿರಿಯ ಪತ್ರಕರ್ತರಾದ ಪರನ್ ಜೋಯ್ ಗುಹಾ ಥಾಕೂರ್‌ತ, ದಿನೇಶ್ ಅಮಿನ್ ಮಟ್ಟು, ಜಗದೀಶ್ ಕೊಪ್ಪ ಚರ್ಚಿಸಲಿದ್ದಾರೆ. 'ಹೊಸ ರಾಷ್ಟ್ರೀಯ ಶಿಕ್ಷಣ ನೀತಿ ಮತ್ತು ಯುವಜನತೆಯ ಭವಿಷ್ಯ' ಕುರಿತು ಶಿಕ್ಷಣ ತಜ್ಞ ಡಾ.ವಿ.ಪಿ.ನಿರಂಜನಾರಾಧ್ಯ ಮತ್ತು ನಿವೃತ್ತ ಪ್ರಾಧ್ಯಾಪಕ ಪ್ರೊ.ಮುಜಾಫರ್ ಅಸ್ಸಾದಿ ಮಧ್ಯಾಹ್ನ 2.45ರಿಂದ 3.45ರವರೆಗೆ ಮಾತನಾಡಲಿದ್ದಾರೆ. ನಂತರ ಮಧ್ಯಾಹ್ನ 3.45ರಿಂದ 4.30ರವರೆಗೆ 'ಕರಾಳ ಕೃಷಿ ಕಾನೂನುಗಳ ವಿರುದ್ಧದ ಹೋರಾಟ ಮತ್ತು ರೈತ ಚಳುವಳಿ' ವಿಷಯ ಕುರಿತು ಕೃಷಿ ಬೆಲೆ ಆಯೋಗದ ಮಾಜಿ ಅಧ್ಯಕ್ಷ ಪ್ರಕಾಸ್ ಕಮ್ಮರಡಿ ಮತ್ತು ಪ್ರಗತಿಪರ ಕೃಷಿಕರಾಗಿರುವ ನಟ ಕಿಶೋರ್‌ಕುಮಾರ್ ಸುದ್ದಿಗೋಷ್ಠಿಯಲ್ಲಿ ಮಾತನಾಡಲಿದ್ದಾರೆ ಎಂದು ಮಾಹಿತಿ ನೀಡಿದರು.



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಮಂಗಳವಾರ ನಡೆದ ಸುದ್ದಿಗೋಷ್ಠಿಯಲ್ಲಿ ಜನತಂತ್ರದ ಸಮಕಾಲೀನ ತಲ್ಲಣಗಳು ಕುರಿತ ಎರಡು ದಿನಗಳ ರಾಷ್ಟ್ರೀಯ ವಿಚಾರಸಂಕಿರಣದ ಪೋಸ್ಟರ್ ಬಿಡುಗಡೆಗೊಳಿಸಿದರು.

ಸಂಜೆ 5ಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ವಿಚಾರ ಸಂಕಿರಣದ ಆಶಯ ನುಡಿಗಳನ್ನಾಡಲಿದ್ದಾರೆ. ಶಾಸಕ ಬಿ.ಆರ್.ಪಾಟೀಲ್ ಅಧ್ಯಕ್ಷತೆ ವಹಿಸಲಿದ್ದಾರೆ. ಈ ವೇದಿಕೆ ಕಾರ್ಯಕ್ರಮ ಮುಕ್ತಾಯವಾದ ನಂತರ ಸುಮತಿ ನಿರ್ದೇಶನದಲ್ಲಿ ಸಂಜೆ 6.45ಕ್ಕೆ ಪಿ.ಲಂಕೇಶ್ ಅನುವಾದ ಮಾಡಿರುವ 'ಅಂತಿಗೊನೆ' ನಾಟಕವನ್ನು ಮೈಸೂರಿನ ಜನಮನ ಸಾಂಸ್ಕೃತಿಕ ಸಂಘಟನೆ ಪ್ರಸ್ತುತಪಡಿಸಲಿದ್ದಾರೆ ಎಂದರು.

ನಂತರ ಪ್ರಗತಿಪರ ಹೋರಾಟಗಾರ ಉಗ್ರನರಸಿಂಹೇಗೌಡ ಮಾತನಾಡಿ, ಮಾ.2ರಂದು ಬೆಳಗ್ಗೆ 10.30ರಿಂದ 11.15 ರವರೆಗೆ 'ಕೋಮುವಾದದ ಸ್ವರೂಪಗಳು' ವಿಷಯ ಕುರಿತು ವಿಮರ್ಶಕ ಪ್ರೊ.ರಾಜೇಂದ್ರ ಚೆನ್ನಿ ಮಾತನಾಡಲಿದ್ದಾರೆ. 11.30ರಿಂದ ಮಧ್ಯಾಹ್ನ 12.45ರವರೆಗೆ 'ಕಾರ್ಪೊರೇಟ್ ಜಗತ್ತಿನ ಸುಳಿಯಲ್ಲಿ ಭಾರತ' ಕುರಿತು ಹಿರಿಯ ಚಿಂತಕ ಶಿವಸುಂದರ್, ಆರ್ಥಿಕ ತಜ್ಞ ಪ್ರೊ.ಟಿ.ಆರ್. ಚಂದ್ರಶೇಖರ್ ಚರ್ಚಿಸಲಿದ್ದಾರೆ. ಮಧ್ಯಾಹ್ನ 12.45 ರಿಂದ 2ರವರೆಗೆ 'ಭಾರತದಲ್ಲಿ ಕಾರ್ಮಿಕ ಚಳುವಳಿಯ ಭವಿಷ್ಯ'ದ ಬಗ್ಗೆ ಹಿರಿಯ ಕಾರ್ಮಿಕ ಕಾನೂನು ತಜ್ಞ ಬಾಬು ಮ್ಯಾಥ್ಯು, ಹೋರಾಟಗಾರ ಸಿದ್ದನಗೌಡ ಪಾಟೀಲ್ ಮತ್ತು ಎಐಯುಟಿಸಿಯ ಕೆ.ಸೋಮಶೇಖರ್ ಮಾತನಾಡಲಿದ್ದಾರೆ ಎಂದರು.

'ಭಾರತದಲ್ಲಿ ಸಮಕಾಲೀನ ಮಹಿಳಾ ಚಳುವಳಿಯ ಸವಾಲುಗಳು ಮತ್ತು ಸಾಧ್ಯತೆಗಳು' ಮಧ್ಯಾಹ್ನ 2.30 ರಿಂದ 3.30ರವರೆಗೆ ಹಿರಿಯ ಹೋರಾಟಗಾರ್ತಿ, ಚಿಂತಕಿ ಬೃಂದಾ ಕಾರಟ್, ಪ್ರಾಧ್ಯಾಪಕಿ ಸಬಿತಾ ಬನ್ನಾಡಿ ಮತ್ತು ಬಿಜಾಪುರ ವಿವಿ ನಿವೃತ್ತ ಪ್ರಾಧ್ಯಾಪಕಿ ಡಾ.ಆರ್.ಸುನಂದಮ್ಮ ಚರ್ಚಿಸಲಿದ್ದಾರೆ. ನಂತರ 3.30 ರಿಂದ ಸಂಜೆ 4.15ರವರೆಗೆ 'ಭಾರತೀಯ ಸಮಾಜದಲ್ಲಿ ಗಾಂಧಿ ಮತ್ತು ಅಂಬೇಡ್ಕರ್' ಗೋಷ್ಠಿಯಲ್ಲಿ ಬೆಂಗಳೂರು ವಿವಿ ನಿವೃತ್ತ ಪ್ರಾಧ್ಯಾಪಕ ಡಾ.ಎಸ್.ಚಂದ್ರಶೇಖರ್ ಮತ್ತು ಬರಹಗಾರ್ತಿ ಡಾ.ಹೆಚ್.ಎಸ್.ಅನುಪಮಾ ಮಾತನಾಡಲಿದ್ದಾರೆ ಎಂದು ವಿವರಿಸಿದರು.

ವಿಚಾರ ಸಂಕಿರಣದ ಸಮಾರೋಪವನ್ನು ಸಂಜೆ 4.15ಕ್ಕೆ ಆಯೋಜಿಸಿದ್ದು, ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಅಧ್ಯಕ್ಷತೆ ವಹಿಸಲಿದ್ದಾರೆ. ಈ ವೇಳೆ ಸುಕನ್ಯಾ ಕನಾರಳ್ಳಿ ಅವರ 'ಡಿಫರೆಂಟ್ ಟೇಲ್ಸ್'ನ ಪುಸ್ತಕವನ್ನು ಅಕ್ಕಮಹಾದೇವಿ ಮಹಿಳಾ ವಿವಿ ವಿಶ್ರಾಂತ ಕುಲಪತಿ ಪ್ರೊ.ಸಬೀಹಾ ಭೂಮಿಗೌಡ ಬಿಡುಗಡೆಗೊಳಿಸಲಿದ್ದಾರೆ. ನಂತರ ಎರಡು ದಿನಗಳ ವಿಚಾರ ಸಂಕಿರಣದ ಒಟ್ಟಾರೇ ಸಾರಾಂಶವನ್ನು 'ಮೈಸೂರು ಘೋಷಣೆ' ಅಡಿ ಹೈದ್ರಾಬಾದ್‌ನ ರಾಜಕೀಯ ಸಿದ್ಧಾಂತಿ, ಬರಹಗಾರರಾದ ಕಾಂಚ ಐಲಯ್ಯ ಮಂಡಿಸಲಿದ್ದಾರೆ ಎಂದು ವಿವರಿಸಿದರು. ಸುದ್ದಿಗೋಷ್ಠಿಯಲ್ಲಿ ರೈತ ಮುಖಂಡ ಹೊಸಕೋಟೆ ಬಸವರಾಜು, ಸಾಹಿತಿ ಕಾಳಚೆನ್ನೇಗೌಡ, ಪ್ರಗತಿಪರ ಹೋರಾಟಗಾರ ಉಗ್ರನರಸಿಂಹೇಗೌಡ, ಅಭಿರುಚಿ ಪ್ರಕಾಶದ ಗಣೇಶ್, ಸವಿತಾ ಪಮಲ್ಲೇಶ್, ಡಾ.ಹರೀಶ್‌ಕುಮಾರ್ ಉಪಸ್ಥಿತರಿದ್ದರು.

ಲೋಕಸಭಾ ಚುನಾವಣೆಗೆ ಇವಿಎಂ–ವಿವಿ ಪ್ಯಾಟ್ ತೀವ್ರ ತಪಾಸಣೆಗೆ ಜಿಲ್ಲಾಡಳಿತ ಸಿದ್ಧತೆ

ಮೈಸೂರು, ಫೆ. 27(ಆರ್‌ಕೆ)– ಏಪ್ರಿಲ್ ತಿಂಗಳಲ್ಲಿ ನಡೆಯಲಿರುವ ಲೋಕಸಭಾ ಸಾರ್ವತ್ರಿಕ ಚುನಾವಣೆಗೆ ಮೈಸೂರು ಜಿಲ್ಲಾಡಳಿತ ಸರ್ವ ರೀತಿಯಲ್ಲಿ ಸಜ್ಜಾಗುತ್ತಿದೆ.



ಇವಿಎಂ, ವಿವಿಪ್ಯಾಟ್ ಯಂತ್ರಗಳನ್ನಿರಿಸಿರುವ ಗೋದಾಮು.

ಭಾರತ ಚುನಾವಣಾ ಆಯೋಗ (ಇಸಿಐ)ದ ನಿರ್ದೇಶನದಂತೆ ಜಿಲ್ಲಾ ಚುನಾವಣಾಧಿಕಾರಿ ಡಾ.ಕೆ.ವಿ. ರಾಜೇಂದ್ರ ಮತಗಟ್ಟೆ ಅಧಿಕಾರಿಗಳು, ಸಿಬ್ಬಂದಿ, ರಾಜಕೀಯ ಪಕ್ಷಗಳ ಮುಖಂಡರುಗಳಿಗೆ ಈಗಾಗಲೇ ಮತದಾನ ಪ್ರಕ್ರಿಯೆ, ಚುನಾವಣಾ ನೀತಿ ಸಂಹಿತೆ ಪಾಲನೆ ಕುರಿತಂತೆ ಹಲವು ಸುತ್ತಿನ ತರಬೇತಿ ನೀಡಿದ್ದಾರೆ.

ಮತದಾನ ಪ್ರಕ್ರಿಯೆಯ ಪ್ರಮುಖ ಅಂಗವಾದ ವಿದ್ಯುನ್ಮಾನ ಮತ ಯಂತ್ರ (Electronic Voting Machine) ಹಾಗೂ ಮತದಾನ ದೃಢೀಕರಿಸುವ ವಿವಿ ಪ್ಯಾಟ್ ಯಂತ್ರಗಳನ್ನು ಸಿಕಂದರಾ ಬಾದ್‌ನ ಎಲೆಕ್ಟ್ರಾನಿಕ್ ಕಂಪನಿಯಿಂದ ತರಿಸಲಾಗಿದ್ದು, ಮೊದಲ ಹಂತದ ಪರೀಕ್ಷೆ (First Level Checking) ಮಾಡಿ ಮೈಸೂರಿನ ಸಿದ್ಧಾರ್ಥನಗರದಲ್ಲಿರುವ ಜಿಲ್ಲಾಧಿಕಾರಿ ಕಚೇರಿ ಸಮುಚ್ಚಯದ ಬಳಿಯ ಗೋದಾಮಿನಲ್ಲಿ ಸುರಕ್ಷಿತವಾಗಿರಿಸಲಾಗಿದೆ.

ಮೊದಲ ಹಂತದ ಪರೀಕ್ಷೆಯಲ್ಲಿ ಲೋಪದೋಷಗಳಿರುವ ಯಂತ್ರಗಳನ್ನು ವಾಪಸ್ ಕಳುಹಿಸಿ ಬೇರೆ ಇವಿಎಂ ಮತ್ತು ವಿವಿ ಪ್ಯಾಟ್ ಯಂತ್ರಗಳನ್ನು ತರಿಸಲಾಗಿದೆ. ಇದೀಗ ಭಾರೀ ಬಿಗಿ ಕಣ್ಗಾವಲಿನೊಂದಿಗೆ ಗೋದಾಮಿನಲ್ಲಿರಿಸಿರುವ ಮತಯಂತ್ರಗಳನ್ನು ಲೋಕಸಭಾ ಚುನಾವಣೆ ಘೋಷಣೆಯಾದ ಬಳಿಕ ವಿಧಾನಸಭಾ ಕ್ಷೇತ್ರವಾರು ಮತಗಟ್ಟೆಗಳಿಗೆ ತಲುಪಿಸಲಾಗುವುದು. ಈಗಾಗಲೇ ಮತಯಂತ್ರ ತಯಾರಿಸಿರುವ ಸಿಕಂದರಾ ಬಾದ್‌ನ ಸರ್ಕಾರಿ ಸ್ವಾಮ್ಯದ ಎಲೆಕ್ಟ್ರಾನಿಕ್ಸ್ ಕಾರ್ಪೊರೇಷನ್ ಆಫ್



ಇಂಡಿಯಾ (ಇಸಿಐಎಲ್) ಲಿಮಿಟೆಡ್ ಇಂಜಿನಿಯರ್‌ಗಳು, ತಂತ್ರಜ್ಞರು ಮೈಸೂರಿಗೆ ಆಗಮಿಸಿ ಇವಿಎಂ, ವಿವಿಪ್ಯಾಟ್‌ಗಳನ್ನು ಪರಿಶೀಲಿಸಿ ವರದಿ ನೀಡಿದ್ದಾರೆ.

ಲೋಕಸಭಾ ಚುನಾವಣಾ ವೇಳಾಪಟ್ಟಿ ಪ್ರಕಟವಾಗುತ್ತಿದ್ದಂತೆಯೇ ಅವುಗಳನ್ನು ರ್ಯಾಂಡಮೈಸೇಷನ್ ಮಾಡಿ ಸೀರಿಯಲ್ ನಂಬರ್ ಮೂಲಕ ಹಂಚಿಕೆಯಾಗುವ ಮತದಾನ ಕೇಂದ್ರಕ್ಕೆ ರವಾನಿಸಲಾಗುವುದು. ಇವಿಎಂ, ವಿವಿಪ್ಯಾಟ್ ನಿರ್ವಹಣೆ ಮಾಡುತ್ತಿರುವ ನೋಡಲ್ ಅಧಿಕಾರಿಯಾದ ಮುಡಾ ಆಯುಕ್ತ ಜಿ.ಟಿ.ದಿನೇಶ್‌ಕುಮಾರ್ ಮೊದಲ ಹಂತದ ರ್ಯಾಂಡಮೈಸೇಷನ್ ಮಾಡಿ ಮತಗಟ್ಟೆಗಳಿಗೆ ರವಾನಿಸುವರು.

ನಂತರ ಮತಗಟ್ಟೆಗಳಲ್ಲೂ ಮತಗಟ್ಟೆ



ಅಧಿಕಾರಿಗಳು ಎರಡನೇ ಹಂತದ ರ್ಯಾಂಡಮೈಸೇಷನ್ ಪ್ರಕ್ರಿಯೆ ನಡೆಸಿ, ಸರಿಯಾಗಿ ಕೆಲಸ ಮಾಡುತ್ತಿವೆ ಎಂಬುದನ್ನು ಖಾತರಿಪಡಿಸಿಕೊಂಡು ನಂತರ ಮತದಾನ ಪ್ರಕ್ರಿಯೆ ಆರಂಭಿಸುವರು. ಮತದಾನಕ್ಕೆ ಬಳಸುವ ಅಳಿಸಲಾಗದ ಶಾಯಿಯನ್ನು ಮೈಸೂರಿನ ಅರಗು ಮತ್ತು ಬಣ್ಣದ ಕಾರ್ಖಾನೆಯಿಂದ ಖರೀದಿಸಿ ಭಾರತ ಚುನಾವಣಾ ಆಯೋಗವು ಆಯಾ ಜಿಲ್ಲೆಗಳಿಗೆ ಪೂರೈಸಿದೆ.

ಜಿಲ್ಲಾಧಿಕಾರಿಗಳ ಕಚೇರಿ, ಪಾಲಿಕೆ, ಜಿಲ್ಲಾ ಪಂಚಾಯ್ತಿ ಕಚೇರಿ, ಆಯಾ ಗ್ರಾಮ ಪಂಚಾಯ್ತಿ ಕಚೇರಿಗಳು, ರೈಲು ನಿಲ್ದಾಣ, ಬಸ್ ನಿಲ್ದಾಣಗಳಂತಹ ಸಾರ್ವಜನಿಕ ಸ್ಥಳಗಳಲ್ಲಿ ಮತಯಂತ್ರ, ವಿವಿಪ್ಯಾಟ್‌ಗಳನ್ನು ಇರಿಸಿ ಅವುಗಳನ್ನು ಬಳಸುವ ಬಗ್ಗೆ ಪ್ರಾತ್ಯಕ್ಷಿತೆ ನೀಡಲಾಗುತ್ತಿದ್ದು ಜಾಗೃತಿ ಮೂಡಿಸಲಾಗುತ್ತಿದೆ.

ಸಂವಿಧಾನ ಸಮಾವೇಶದ ಹೆಸರಲ್ಲಿ ಭಾರತದ ಸೈನಿಕರ ರೇಪಿಸ್ಟ್‌ಗಳು ಎಂದು ಕರೆದ ದೇಶದ್ರೋಹಿಗಳಿಗೆ ವೇದಿಕೆ

ಕಾಂಗ್ರೆಸ್ ಸರ್ಕಾರದ ವಿರುದ್ಧ ವಿಪಕ್ಷ ನಾಯಕ ಅಶೋಕ್ ಆಕ್ರೋಶ

ಬೆಂಗಳೂರು,ಫೆ.27(ಕೆಎಂಶಿ)– ಸಂವಿಧಾನ ಸಮಾವೇಶದ ಹೆಸರಿನಲ್ಲಿ ಕಾಂಗ್ರೆಸ್ ಸರ್ಕಾರ ಅರ್ಬನ್ ನಕ್ಸಲ್‌ಗಳಿಗೆ, ಭಾರತದ ಸೈನಿಕರನ್ನು ರೇಪಿಸ್ಟ್‌ಗಳು ಎಂದು ಅವಮಾನಿಸಿದ ದೇಶದ್ರೋಹಿಗಳಿಗೆ ವೇದಿಕೆ ಕಲ್ಪಿಸಿ ಕೊಟ್ಟಿದೆ ಎಂದು ವಿಧಾನ ಸಭೆಯಲ್ಲಿನ ವಿರೋಧ ಪಕ್ಷದ ನಾಯಕ ಆರ್.ಅಶೋಕ್ ಟೀಕಿಸಿದ್ದಾರೆ.



ಈ ಸಂಬಂಧ ಟ್ವೀಟ್ ಮಾಡಿರುವ ಅವರು, ವಿಕೃತ ಮನಸ್ಕರಿಗೆ ಸರ್ಕಾರ ಜನರ ಹಣವನ್ನು ವೆಚ್ಚ ಮಾಡುತ್ತಿದೆ, ರಾಜ್ಯದಲ್ಲಿ ಹಿಂದೆಂದೂ ಕಂಡರಿಯದ ಭೀಕರ ಬರಗಾಲ ಆವರಿಸಿದೆ, 900ಕ್ಕೂ ಹೆಚ್ಚು ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ, ಕೃಷಿ ಕಾರ್ಮಿಕರು ಹೊಟ್ಟೆಪಾಡಿಗಾಗಿ ಮನೆ, ಮಠ ಬಿಟ್ಟು ಗುಳೆ ಹೋಗುತ್ತಿದ್ದಾರೆ ಎಂದಿದ್ದಾರೆ.

ಬೆಂಗಳೂರಿನಲ್ಲಿ ಕುಡಿಯುವ ನೀರಿಗಾಗಿ ಜನ ಪರಿತಪಿಸುತ್ತಿದ್ದಾರೆ, 'ದುರ್ಭಿಕ್ಷದಲ್ಲಿ ಅಧಿಕ ಮಾಸ' ಎಂಬಂತೆ ಸಂವಿಧಾನ ಸಮಾವೇಶಕ್ಕೆ ಆಗಮಿಸುವ ಅತಿಥಿಗಳಿಗೆ ರಾಜ್ಯ ಸರ್ಕಾರ ಅಂತಾರಾಷ್ಟ್ರೀಯ ವಿಮಾನ ಟಿಕೆಟ್, ಪಂಚತಾರಾ ಹೋಟೆಲ್ ವಾಸ್ತವ್ಯಕ್ಕೆ ನೂರಾರು ಕೋಟಿ ದುಂದು ವೆಚ್ಚ ಮಾಡಿದೆ, ಸಂವಿಧಾನ ಸಮಾವೇಶ ಮಾಡುವ ಅವಶ್ಯಕತೆ ಏನಿತ್ತು ಎಂದು ಸಿದ್ದರಾಮಯ್ಯ ಅವರನ್ನು ಪ್ರಶ್ನಿಸಿದ್ದಾರೆ.

ಇಂತಹ ಸಮಾವೇಶಗಳಿಂದ ಕಾಂಗ್ರೆಸ್ ಪೋಷಿತ ಗಂಜಿ ಗಿರಾಕಿಗಳಿಗೆ ಲಾಭವೇ ಹೊರತು ರಾಜ್ಯದ ಕನ್ನಡಿಗರಿಗೆ ಯಾವುದೇ ಲಾಭವಿಲ್ಲ, ಸಂವಿಧಾನ ಹಾಗೂ ಸಂವಿಧಾನದ ಆಶಯಗಳ ಬಗ್ಗೆ ಮುಖ್ಯಮಂತ್ರಿ ಹಾಗೂ ಸಚಿವರಿಗೆ ಗೌರವ ಇದ್ದಿದ್ದರೆ ಸಮಾವೇಶದ ಹಣವನ್ನು ಶಾಲಾ, ಕಾಲೇಜುಗಳ ವಿದ್ಯಾರ್ಥಿಗಳಿಗೆ ಮತ್ತು ಹಳ್ಳಿ ಹಳ್ಳಿಗಳಲ್ಲಿ ಸಂವಿಧಾನದ ಮಹತ್ವದ ಬಗ್ಗೆ ಅರಿವು ಮೂಡಿಸುವ ರಚನಾತ್ಮಕ ಕಾರ್ಯಕ್ರಮಗಳನ್ನು ಮಾಡಬಹುದಿತ್ತು.

ಅದನ್ನು ಬಿಟ್ಟು ದೇಶದ್ರೋಹಿ ಹೇಳಿಕೆಗಳನ್ನು ನೀಡುವ ನಿತಾಶಾ ಕೌಲ್ ಅಂತಹವರಿಗೆ ಆಹ್ವಾನ ಕೊಟ್ಟಿದ್ದೀರಲ್ಲಾ, ಇದು ನಿಮ್ಮ ನಾಯಕ ರಾಹುಲ್ ಗಾಂಧಿ ಅಪ್ಪಣೆಯಂತೆ ನಡೆದಿದೆಯೇ ಎಂದಿದ್ದಾರೆ.


ಪತ್ರಿಕೆ ಜಾಹೀರಾತಿಗೆ 21.70 ಕೋಟಿ ರೂ., ಇತರೆ ಜಾಹೀರಾತುಗಳಿಗೆ 100 ಕೋಟಿ ರೂ. ಸೇರಿದಂತೆ 122 ಕೋಟಿ ರೂ.ಗಳನ್ನು ಆರ್ಥಿಕ ಬಿಕ್ಕಟ್ಟಿನಲ್ಲೂ ಪ್ರಚಾರದ ಗೀಳಿಗೆ ವೆಚ್ಚ ಮಾಡಲಾಗಿದೆ. ಕಾಂಗ್ರೆಸ್‌ನಲ್ಲಿನ ಅತೃಪ್ತ ಶಾಸಕರನ್ನು ಸಮಾಧಾನಪಡಿಸಲು ಗ್ಯಾರಂಟಿ ಜಾರಿ ಸಮಿತಿ, ನಿಗಮ ಮಂಡಳಿ, ಸಚಿವಾಲಯ ಸಲಹೆಗಾರರು ಎಂಬಿತ್ಯಾದಿ 90 ಸಂಪುಟ ದರ್ಜೆ ಸ್ಥಾನಮಾನಗಳನ್ನು ನೀಡುವ ಮೂಲಕ ಕನ್ನಡಿಗರ ತೆರಿಗೆ ಹಣ ಪೋಲು ಮಾಡಲಾಗುತ್ತಿದೆ ಎಂದು ಅಶೋಕ್ ಟೀಕಿಸಿದ್ದಾರೆ.

ವಿಕಲಚೇತನರಿಗೂ ಸಾಮಾನ್ಯರಿಗೆ ನೀಡುವ ಶಿಕ್ಷಣವನ್ನೇ ಕಲಿಸಲಿ

● ಮೈಸೂರು ವಿವಿ ಕಾಲೇಜು ಅಭಿವೃದ್ಧಿ ಮಂಡಳಿ ನಿರ್ದೇಶಕ ಪ್ರೊ.ಡಿ.ಆನಂದ್ ಪ್ರತಿಪಾದನೆ ● ವಿಕಲಚೇತನರಲ್ಲಿ ಸಾಧಿಸುವ ವಿಶೇಷ ಸಾಮರ್ಥ್ಯವಿದೆ

ಮೈಸೂರು,ಫೆ.27(ಎಂಟಿವೈ)– ವಿಕಲಚೇತನರನ್ನು ಸಮಾಜದ ಮುಖ್ಯವಾಹಿನಿಗೆ ತರಲು ಶಿಕ್ಷಣ ಕೊಡಿಸುವ ಅಗತ್ಯವಿದೆ ಎಂದು ಮೈಸೂರು ವಿಶ್ವವಿದ್ಯಾಲಯದ ಕಾಲೇಜು ಅಭಿವೃದ್ಧಿ ಮಂಡಳಿ ನಿರ್ದೇಶಕ ಪ್ರೊ.ಡಿ.ಆನಂದ್ ಅಭಿಪ್ರಾಯಪಟ್ಟಿದ್ದಾರೆ.

ಮೈಸೂರಿನ ಪಡುವಾರಹಳ್ಳಿಯಲ್ಲಿ ಮಹಾರಾಣಿ ಮಹಿಳಾ ವಾಣಿಜ್ಯ ಮತ್ತು ನಿರ್ವಹಣಾ ಕಾಲೇಜಿನ ಸಭಾಂಗಣದಲ್ಲಿ ಸಮರ್ಥನಂ ವಿಕಲಚೇತನರ ಸಂಸ್ಥೆ, ದಿವ್ಯಾಂಗ ಸಬಲೀಕರಣ ಸಮಿತಿ, ಐಕ್ಯೂಎಸಿ ಘಟಕ, ಮಹಾರಾಣಿ ಮಹಿಳಾ ವಾಣಿಜ್ಯ ಮತ್ತು ನಿರ್ವಹಣಾ ಕಾಲೇಜು ಸಂಯುಕ್ತಾಶ್ರದಲ್ಲಿ ಮಂಗಳವಾರ ಆಯೋಜಿಸಿದ್ದ 'ಅಂಗವೈಕಲ್ಯ ಮತ್ತು ಅಂತರ್ಗತ ಶಿಕ್ಷಣದಲ್ಲಿ ಕಾಲೇಜು ಪ್ರಾಧ್ಯಾಪಕರ ಸಾಮರ್ಥ್ಯ ವೃದ್ಧಿ' ಕುರಿತು ಮೈಸೂರು ವಿಭಾಗದ ಪ್ರಾಧ್ಯಾಪಕರಿಗೆ ಹಮ್ಮಿಕೊಂಡಿದ್ದ ಕಾರ್ಯಾಗಾರವನ್ನು ಉದ್ಘಾಟಿಸಿ ಮಾತನಾಡಿದ ಅವರು, ಪ್ರಸ್ತುತ ಸಂದರ್ಭದಲ್ಲಿ ವಿವಿಧ ಕ್ಷೇತ್ರಗಳಲ್ಲಿ ವಿಕಲಚೇತನರೂ ಗಮನಾರ್ಹ ಸಾಧನೆ ಮಾಡಿದ್ದಾರೆ. ಅವಕಾಶ, ಪ್ರೋತ್ಸಾಹ ದೊರೆತರೆ ಸಾಧನೆ ಮಾಡಲು ಅಂಗವೈಕಲ್ಯ ಅಡ್ಡಿಯಾಗುವುದಿಲ್ಲ. ಈ ನಿಟ್ಟಿನಲ್ಲಿ ಅಂಗವೈಕಲ್ಯದ ಕೊರಗು ವಿಶೇಷಚೇತನರಲ್ಲಿ ಕಾಡದಂತೆ



ಮೈಸೂರಿನ ಪಡುವಾರಹಳ್ಳಿಯಲ್ಲಿ ಮಹಾರಾಣಿ ಮಹಿಳಾ ವಾಣಿಜ್ಯ ಮತ್ತು ನಿರ್ವಹಣಾ ಕಾಲೇಜಿನ ಸಭಾಂಗಣದಲ್ಲಿ 'ಅಂಗವೈಕಲ್ಯ ಮತ್ತು ಅಂತರ್ಗತ ಶಿಕ್ಷಣದಲ್ಲಿ ಕಾಲೇಜು ಪ್ರಾಧ್ಯಾಪಕರ ಸಾಮರ್ಥ್ಯ ವೃದ್ಧಿ' ವಿಷಯದ ಕುರಿತು ಮೈಸೂರು ವಿಭಾಗದ ಪ್ರಾಧ್ಯಾಪಕರಿಗೆ ಆಯೋಜಿಸಿದ್ದ ಕಾರ್ಯಾಗಾರವನ್ನು ಮೈಸೂರು ವಿಶ್ವವಿದ್ಯಾಲಯದ ಕಾಲೇಜು ಅಭಿವೃದ್ಧಿ ಮಂಡಳಿ ನಿರ್ದೇಶಕ ಪ್ರೊ.ಡಿ.ಆನಂದ್ ಉದ್ಘಾಟಿಸಿದರು.

ನೋಡಿಕೊಳ್ಳುವ ಜವಾಬ್ದಾರಿ ಪೋಷಕರದ್ದಾಗಿದೆ. ವಿಶೇಷ ಚೇತನ ಮಕ್ಕಳನ್ನು ನಿರ್ಲಕ್ಷ್ಯಿಸದೆ, ಸಾಮಾನ್ಯ ಮಕ್ಕಳಿಗೆ ಕೊಡಿಸುವ ಶಿಕ್ಷಣವನ್ನೇ ವಿಶೇಷ ಚೇತನರಿಗೂ ನೀಡುವುದಕ್ಕೆ ಮುಂದಾಗಬೇಕು. ಉನ್ನತ ಶಿಕ್ಷಣ ಪಡೆದರೆ ವಿಶೇಷಚೇತನರೂ ಸಾಧನೆಯ ಹಾದಿ ಮೆಟ್ಟುತ್ತಾರೆ ಎಂದು ತಿಳಿಸಿದರು.

ದಿವ್ಯಾಂಗ ಹಾಗೂ ವಿಕಲಚೇತನ ವಿದ್ಯಾರ್ಥಿಗಳು ಸಾಧನೆಯಲ್ಲಿ ತೊಡಗುವಂತೆ ಪ್ರಾಧ್ಯಾಪಕರು ಸ್ಫೂರ್ತಿ ತುಂಬಬೇಕು. ವಿಶೇಷಚೇತನರು ಅಸಮರ್ಥರಲ್ಲ, ಅವರಲ್ಲೂ ಸಾಧಿಸುವ ಛಲವಿರುತ್ತದೆ. ಅವರಲ್ಲಿರುವ

> "ದೈಹಿಕವಾಗಿ ಎಲ್ಲಾ ಅಂಗಾಂಗವೂ ಸರಿಯಾಗಿದ್ದವರು ಇದ್ದು ಸಾಧನೆ ಮಾಡುವುದು ದೊಡ್ಡ ವಿಚಾರವಲ್ಲ. ಆದರೆ, ಸವಾಲುಗಳ ಹಿಮ್ಮೆಟ್ಟಿ ತಮ್ಮಲ್ಲಿರುವ ನ್ಯೂನತೆಗಳನ್ನು ಲೆಕ್ಕಿಸದೇ ಅದನ್ನು ಸವಾಲಾಗಿ ಸ್ವೀಕರಿಸಿ ಸಾಧನೆ ಮಾಡುವವರೇ ನಿಜವಾದ ಸಾಧಕರು. –ಪ್ರೊ.ಡಿ.ಆನಂದ್

ಸಾಮರ್ಥ್ಯವನ್ನು ಗುರುತಿಸಿ ಪ್ರೋತ್ಸಾಹಿಸಬೇಕು. ವಿಶೇಷ ಚೇತನರನ್ನು ಸಮಾಜದ ಮುಖ್ಯ ವಾಹಿನಿಗೆ ತರಲು ಶಿಕ್ಷಣದ ಮಹತ್ವ ಅರಿಯಬೇಕು. ಶಿಕ್ಷಣದ ಮೂಲಕ ಅಂಗವೈಕಲ್ಯದ ಕೊರತೆ ನಿವಾರಿಸಿ, ದೇಶ ಹಾಗೂ ಸಮಾಜವನ್ನು ಕಟ್ಟುವ ಕಾರ್ಯದಲ್ಲಿ ತಮ್ಮನ್ನು ತೊಡಗಿಸಿಕೊಳ್ಳುವಂತೆ ಮಾಡಲು ವಿಶ್ವಸಂಸ್ಥೆಯು ಹಲವು ಯೋಜನೆಗಳನ್ನು ರೂಪಿಸಿ ಕಾರ್ಯಗತಗೊಳಿಸುತ್ತಿದೆ ಎಂದರು. ಕಾರ್ಯಕ್ರಮದಲ್ಲಿ ಕಾಲೇಜಿನ ಪ್ರಭಾರ ಪ್ರಾಂಶುಪಾಲರಾದ ಡಾ.ಆರ್.ನಳಿನಿ, ಕಾಲೇಜಿನ ಐಕ್ಯೂಎಸಿ ಘಟಕದ ಸಂಚಾಲಕ ಡಾ.ವಿ.ಮಂಜುನಾಥ್, ಕಾಲೇಜಿನ ದಿವ್ಯಾಂಗ ಸಬಲೀಕರಣ ಸಮಿತಿ ಸಂಚಾಲಕ ಡಾ.ಪಿ.ವಿ.ನಾಗರಾಜ, ಸಮರ್ಥನಂ ಅಂಗವಿಕಲರ ಸಂಸ್ಥೆಯ ಟ್ರಸ್ಟಿ ವಾಸಂತಿ ಸವಣೂರು, ಸಂಪನ್ಮೂಲ ವ್ಯಕ್ತಿಗಳಾದ ಡಾ.ವಿಕ್ಟರ್, ಡಾ.ಜಯಂತ್ ಕುಮಾರ್ ಹಾಗೂ ಇನ್ನಿತರರು ಉಪಸ್ಥಿತರಿದ್ದರು.

ಮಾ.2ರಂದು ಜೇನು ಕೃಷಿ ತರಬೇತಿ

ಮೈಸೂರು, ಫೆ.27–ಜಿಲ್ಲಾ ಪಂಚಾಯತ್, ತೋಟಗಾರಿಕೆ ಇಲಾಖೆ ವತಿಯಿಂದ ಮಾ.2ರಂದು ಜೇನು ಕೃಷಿ ಪ್ರಾತ್ಯಕ್ಷಿತ ತರಬೇತಿ ಕಾರ್ಯಕ್ರಮವನ್ನು ತೋಟಗಾರಿಕೆ ಇಲಾಖೆಯ ಅಧೀನದ ಮೈಸೂರಿನ ಫ್ರಾನ್ಸಿ ಕಂಪನಿ ಎದುರು ಭಾರತ್ ಕ್ಯಾನ್ಸರ್ ಆಸ್ಪತ್ರೆಯ ಹತ್ತಿರದ ಹೆಬ್ಬಾಳು ತೋಟಗಾರಿಕೆ ಕ್ಷೇತ್ರದಲ್ಲಿ ಏರ್ಪಡಿಸಲಾಗಿದೆ.



ಹೆಚ್ಚಿನ ಮಾಹಿತಿಗಾಗಿ ಕಸಬಾ ಹೋಬಳಿಯ ಸಹಾಯಕ ತೋಟಗಾರಿಕೆ ಅಧಿಕಾರಿ ಮೊ.ಸಂ 99013 87284, ವರುಣ ಹೋಬಳಿಯ ಸಹಾಯಕ ತೋಟಗಾರಿಕೆ ಅಧಿಕಾರಿ ಮೊ.ಸಂ 7259592484, ಜಯಪುರ ಹೋಬಳಿಯ ಸಹಾಯಕ ತೋಟಗಾರಿಕೆ ಅಧಿಕಾರಿ ಮೊ.ಸಂ. 8904673607 ಹಾಗೂ ಇಲವಾಲ ಹೋಬಳಿಯ ಸಹಾಯಕ ತೋಟಗಾರಿಕೆ ಅಧಿಕಾರಿ ಮೊ.ಸಂ. 9986086262 ಅವರನ್ನು ಸಂಪರ್ಕಿಸಬಹುದಾಗಿದೆ ಎಂದು ಜಿಪಂನ ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು ತಿಳಿಸಿದ್ದಾರೆ.

ಮಾ.3ರಿಂದ 6ರವರೆಗೆ ಪಲ್ಸ್ ಪೋಲಿಯೋ

ಮೈಸೂರು, ಫೆ.27–ಮಾ.3ರಿಂದ 6ರವರೆಗೆ 2024ನೇ ಸಾಲಿನ ಪಲ್ಸ್ ಪೋಲಿಯೋ ಲಸಿಕಾ ಕಾರ್ಯಕ್ರಮವನ್ನು ದೇಶದಾದ್ಯಂತ ಹಮ್ಮಿಕೊಳ್ಳಲಾಗಿದೆ. ಈ ಹಿನ್ನೆಲೆಯಲ್ಲಿ ಜಿಲ್ಲಾ ಮಟ್ಟದ ಉದ್ಘಾಟನಾ ಸಮಾರಂಭವನ್ನು ಮಾ.3ರಂದು ಬೆಳಿಗ್ಗೆ 9 ಗಂಟೆಗೆ ಮೈಸೂರಿನ ಚಾಮುಂಡಿಪುರಂನ ನಂಜುಮಳಿಗೆ ವೃತ್ತದ ಬಳಿ ಇರುವ ಸೇಠ್ ಮೋಹನ್‌ದಾಸ್ ತುಳಸಿದಾಸ್ ಆಸ್ಪತ್ರೆ ಆವರಣದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಇಂದು ಶ್ರೀ ಸಂತ ಸೇವಾಲಾಲ್ ಜಯಂತಿ

ಮೈಸೂರು,ಫೆ.27–ಜಿಲ್ಲಾಡಳಿತ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಶ್ರೀ ಸಂತ ಸೇವಾಲಾಲ್ ಜಯಂತಿಯನ್ನು ಫೆ.28 ರಂದು ಸಂಜೆ 4.30 ಗಂಟೆಗೆ ಕಲಾಮಂದಿರದಲ್ಲಿ ಏರ್ಪಡಿಸಲಾಗಿದೆ. ತಿ.ನರಸೀಪುರದ ಪಿಂಜರಾ ಪೋಲ್ ಗೋ ಶಾಲೆಯ ಶ್ರೀ 1008 ಚೇತನಗಿರಿ ಸ್ವಾಮೀಜಿಯವರ ದಿವ್ಯ ಸಾನಿಧ್ಯದಲ್ಲಿ, ಮುಖ್ಯಮಂತ್ರಿ ಸಿದ್ದರಾಮಯ್ಯ ಉಪಸ್ಥಿತಿಯಲ್ಲಿ ಕಾರ್ಯಕ್ರಮವನ್ನು ಜಿಲ್ಲಾ ಉಸ್ತುವಾರಿ ಸಚಿವ ಡಾ. ಎಚ್.ಸಿ.ಮಹದೇವಪ್ಪ ಉದ್ಘಾಟಿಸಲಿದ್ದು, ಚಾಮರಾಜ ಕ್ಷೇತ್ರದ ವಿಧಾನಸಭಾ ಶಾಸಕ ಕೆ.ಹರೀಶ್‌ಗೌಡ ಅಧ್ಯಕ್ಷತೆ ವಹಿಸಲಿದ್ದಾರೆ. ಪಶುಸಂಗೋಪನೆ ಮತ್ತು ರೇಷ್ಮೆ ಸಚಿವ ಕೆ.ವೆಂಕಟೇಶ್ ಹಾಗೂ ಅರಣ್ಯ ವಸತಿ ಮತ್ತು ವಿಹಾರ ಧಾಮಗಳ ನಿಗಮದ ಅಧ್ಯಕ್ಷ ಅನಿಲ್‌ಕುಮಾರ್ ಉಪಸ್ಥಿತರಿರುವರು. ಮುಖ್ಯ ಅತಿಥಿಗಳಾಗಿ ಮೈಸೂರು–ಕೊಡಗು ಲೋಕಸಭಾ ಸದಸ್ಯ ಪ್ರತಾಪ್ ಸಿಂಹ, ಚಾಮರಾಜನಗರ ಲೋಕಸಭಾ ಸದಸ್ಯ ವಿ.ಶ್ರೀನಿವಾಸ್ ಪ್ರಸಾದ್, ಮಂಡ್ಯ ಲೋಕಸಭಾ ಸದಸ್ಯೆ ಸುಮಲತಾ ಅಂಬರೀಶ್ ಭಾಗವಹಿಸುವರು. ವಿಧಾನಸಭೆಯ ಶಾಸಕರಾದ ತನ್ವೀರ್ ಸೇಠ್, ಜಿ.ಟಿ.ದೇವೇಗೌಡ, ರವಿಶಂಕರ್.ಡಿ, ಜಿ.ಡಿ.ಹರೀಶ್‌ಗೌಡ, ದರ್ಶನ್ ಧ್ರುವನಾರಾಯಣ, ಟಿ.ಎಸ್.ಶ್ರೀವತ್ಸ ಹಾಗೂ ವಿಧಾನ ಪರಿಷತ್‌ನ ಶಾಸಕರಾದ ಮರಿತಿಬ್ಬೇಗೌಡ, ಎಚ್.ವಿಶ್ವನಾಥ್, ಡಾ.ಡಿ.ತಿಮ್ಮಯ್ಯ, ಸಿ.ಎನ್.ಮಂಜೇಗೌಡ, ಮಧು ಜಿ.ಮಾದೇಗೌಡ ಸಮಾರಂಭದ ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ. ಅಂತರಾಷ್ಟ್ರೀಯ ಸಂಪನ್ಮೂಲ ತಜ್ಞರು, ಕಲಾವಿದರು ಹಾಗೂ ಸಾಹಿತಿಗಳಾದ ಡಾ.ಎ.ಆರ್.ಗೋವಿಂದಸ್ವಾಮಿ ಉಪನ್ಯಾಸ ನೀಡಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.



ನಾನಾ ಸಮಾಜ ಪರ ಕಾರ್ಯಗಳ ಮೂಲಕ ಮಾಜಿ ಸಿಎಂ ಯಡಿಯೂರಪ್ಪ ಹುಟ್ಟುಹಬ್ಬ ಆಚರಣೆ

ಮೈಸೂರು,ಫೆ.27(ಜಿಎ)–ಮೈಸೂರಿನ ವಿವಿಧೆಡೆ ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಹುಟ್ಟುಹಬ್ಬವನ್ನು ಬಿಜೆಪಿ ಮುಖಂಡರು, ಅವರ ಅಭಿಮಾನಿಗಳು ಸಮಾಜಮುಖಿ ಕಾರ್ಯಗಳ ಮೂಲಕ ಅರ್ಥಪೂರ್ಣವಾಗಿ ಆಚರಿಸಿದರು.

ನಗರದ ಬಿಜೆಪಿ ಕಚೇರಿಯಲ್ಲಿ ಪೌರ ಕಾರ್ಮಿಕರನ್ನು ಅಭಿನಂದಿಸಲಾಯಿತು. ಈ ವೇಳೆ ಮಾತನಾಡಿದ ಜಿಲ್ಲಾ ಗ್ರಾಮಾಂತರ ಅಧ್ಯಕ್ಷ ಎಲ್.ಆರ್.ಮಹದೇವ ಸ್ವಾಮಿ, ಬಿ.ಎಸ್.ಯಡಿಯೂರಪ್ಪನವರು ಬಾಲ್ಯದಲ್ಲೇ ಸಂಘದ ಮುಖಾಂತರ ಹಲವಾರು ಸಂಘಟನೆಗಳಲ್ಲಿ ಭಾಗಿಯಾಗಿ, ಜನಪರ ಹೋರಾಟಗಾರರಾಗಿ ಹೊರ ಹೊಮ್ಮಿದವರು ಎಂದು ಹೇಳಿದರು.

ಅವರು ಮುಖ್ಯಮಂತ್ರಿಯಾಗಿದ್ದಾಗ ಹೆಣ್ಣು ಮಕ್ಕಳ ಭವಿಷ್ಯಕ್ಕಾಗಿ ಮಹತ್ವಾಕಾಂಕ್ಷೆಯ ಭಾಗ್ಯಲಕ್ಷ್ಮಿ ರೂಪಿಸಿದ್ದರು. ಇದರಿಂದ 18 ವರ್ಷ ಪೂರ್ಣಗೊಂಡ ನಂತರ ಪ್ರತಿ ಹೆಣ್ಣು ಮಗುವಿಗೆ ಒಂದು ದೊಡ್ಡ ಮೊತ್ತದ ಹಣ ಕೈಸೇರುವಂತೆ ಮಾಡಿದರು. ಈ ಯೋಜನೆಯಿಂದ ಲಕ್ಷಾಂತರ ಹೆಣ್ಣು ಮಕ್ಕಳ ಬದುಕಿಗೆ ಆಸರೆಯಾಗಿದ್ದು, ಹಲವಾರು ಫಲಾನುಭವಿಗಳು ಇಂದಿಗೂ ಅವರನ್ನು ಸ್ಮರಿಸುತ್ತಿದ್ದಾರೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಸಂಸದ ಪ್ರತಾಪ್ ಸಿಂಹ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಮಹೇಶ್, ಫಣೀಶ್, ನಗರ ಪ್ರಧಾನ ಕಾರ್ಯದರ್ಶಿ ಮಹೇಶ್ ಕೇಬಲ್, ಬಿ.ಎಂ.ರಘು, ಗಿರಿಧರ್, ಬಿಜೆಪಿ ಮುಖಂಡರು ಉಪಸ್ಥಿತರಿದ್ದರು.



ಬಿಜೆಪಿ ಕಚೇರಿಯಲ್ಲಿ ಪೌರಕಾರ್ಮಿಕರನ್ನು ಅಭಿನಂದಿಸುವ ಮೂಲಕ ಯಡಿಯೂರಪ್ಪ ಅವರ ಹುಟ್ಟುಹಬ್ಬ ಆಚರಿಸಲಾಯಿತು.



ಬೆಳವಾಡಿಯ ಎಸ್.ಆರ್.ಎಸ್ ಟ್ರಾಕ್ಟರ್ಸ್ ಗ್ರೂಪ್‌ನ ವತಿಯಿಂದ ಸಬ್ಸಿಡಿಯಲ್ಲಿ ಟ್ರಾಕ್ಟರ್‌ಗಳನ್ನು ನೀಡಲಾಯಿತು.

ಮೈಸೂರಿನ ಬೆಳವಾಡಿಯಲ್ಲಿರುವ ಎಸ್.ಆರ್.ಎಸ್.ಟ್ರಾಕ್ಟರ್ಸ್ ಗ್ರೂಪ್‌ನ ಮಾಲೀಕ ರುದ್ರೇಶ್ ಸಬ್ಸಿಡಿ ದರದಲ್ಲಿ ರೈತರಿಗೆ ಟ್ರಾಕ್ಟರ್ ವಿತರಿಸುವ ಮೂಲಕ ಯಡಿಯೂರಪ್ಪ ಜನ್ಮ ದಿನಾಚರಣೆಯನ್ನು 'ರೈತಾಚರಣೆ'ಯೆಂದು ಘೋಷಿಸಿದರು. ಈ ವೇಳೆ ಮೈಲ್ಯಾಕ್ ಮಾಜಿ ಅಧ್ಯಕ್ಷ ಫಣೀಶ್, ನಂದೀಶ್ ಹಂಚ್ಯಾ, ವಸ್ತುಪ್ರದರ್ಶನ ಪ್ರಾಧಿಕಾರದ ಮಾಜಿ ಅಧ್ಯಕ್ಷ ಹೇಮಂತ್‌ಕುಮಾರ್‌ಗೌಡ, ಎಸ್‌ಆರ್‌ಎಸ್ ಮುಖ್ಯಸ್ಥ ವೆಂಕಟೇಶ್, ಎಂ.ಡಿ. ಮಂಜುಳಾ ರುದ್ರೇಶ್, ಕೇಬಲ್ ಮಹೇಶ್, ಪಂಚಾಕ್ಷರಿ, ಬಿದರಗೂಡು ಕುಮಾರ್, ವಿನೋದ್ ಹಾಗೂ ಶೋರೂಂನ ಸಿಬ್ಬಂದಿ ಉಪಸ್ಥಿತರಿದ್ದರು.



ಬಿಜೆಪಿ ಮೈಸೂರು ನಗರ ಯುವ ಮೋರ್ಚಾ ವತಿಯಿಂದ ಯಡಿಯೂರಪ್ಪ ಅವರ ಹುಟ್ಟುಹಬ್ಬವನ್ನು ಪಕ್ಷದ ಕಚೇರಿ ಮುಂಭಾಗ ಸಿಹಿಯನ್ನು ಸಾರ್ವಜನಿಕರಿಗೆ ವಿತರಿಸುವ ಮೂಲಕ ಆಚರಿಸಲಾಯಿತು. ಈ ಸಂದರ್ಭದಲ್ಲಿ ಯುವ ಮೋರ್ಚಾ ಅಧ್ಯಕ್ಷ ಎಂ.ಜೆ. ಕಿರಣ್‌ಗೌಡ, ನಗರ ಬಿಜೆಪಿ ಪ್ರಧಾನ ಕಾರ್ಯದರ್ಶಿ ಬಿ.ಎಂ.ರಘು, ನಗರಪಾಲಿಕೆ ಮಾಜಿ ಸದಸ್ಯರಾದ ಸುಬ್ಬಯ್ಯ, ಎಂ.ಚಿಕ್ಕವೆಂಕಟು, ಬಿಜೆಪಿ ಮುಖಂಡರಾದ ಈ.ರಮೇಶ, ದಿನೇಶ್‌ಗೌಡ, ಶಿವರಾಜ್, ಜೀವನ್, ಶಿವು ನಾಗವೇಣಿ ಇನ್ನಿತರರು ಉಪಸ್ಥಿತರಿದ್ದರು.

ಮೈಸೂರಿನ ಅಗ್ರಹಾರದಲ್ಲಿರುವ 101 ಗಣಪತಿ ದೇವಸ್ಥಾನದಲ್ಲಿ ಮಾಜಿ ಮುಖ್ಯಮಂತ್ರಿ ಬಿಎಸ್.ಯಡಿಯೂರಪ್ಪ ಅಭಿಮಾನಿ ಬಳಗದ ವತಿಯಿಂದ ವಿಶೇಷ ಪೂಜೆ ಸಲ್ಲಿಸಿ, ಸಾರ್ವಜನಿಕರಿಗೆ ಸಿಹಿ ಹಂಚಿ ಜನ್ಮದಿನ ಆಚರಣೆ ಮಾಡಲಾಯಿತು. ಈ ಸಂದರ್ಭದಲ್ಲಿ ನಗರ ಪಾಲಿಕೆ ಮಾಜಿ ಸದಸ್ಯರಾದ ಮಾ.ವಿ. ರಾಮಪ್ರಸಾದ್, ಎಂ.ಡಿ.ಪಾರ್ಥಸಾರಥಿ, ಜಗದೀಶ್, ಬಿಜೆಪಿ ಮೈಸೂರು ನಗರ ಕಾರ್ಯಕಾರಣಿ ಸದಸ್ಯರಾದ ಸುತ್ತೂರು ಶ್ರೀಕಂಠಮೂರ್ತಿ, ಬಿಜೆಪಿ ಎನ್.ಆರ್. ಕ್ಷೇತ್ರದ ಯುವ ಮೋರ್ಚಾ ಅಧ್ಯಕ್ಷ ಡಿ.ಲೋಹಿತ್, ಮುಖಂಡರಾದ ಸಂದೀಪ್, ಚಂದ್ರ ಶೇಖರ್, ಶಿವರಾಜು, ಹೂಟಗಳ್ಳಿ ನಾಗರಾಜು, ಬಸವರಾಜು, ವೀರಗಾಸೆ ಕಲಾವಿದ ಅಂಬಾಳೆ ಶಿವಣ್ಣ, ಸಚೀಂದ್ರ, ಪಾರ್ವತಪ್ಪ, ನಂದನ್, ಧರ್ಮೆಂದ್ರ, ಮಹದೇವಸ್ವಾಮಿ ಉಪಸ್ಥಿತರಿದ್ದರು.

ಮೈಸೂರು ಮಿತ್ರ ಬುಧವಾರ 28 ಫೆಬ್ರವರಿ 2024

ಕಾವೇರಿ ತವರಿನಲ್ಲೇ ಬತ್ತಿ ಹೋದ ನೀರು

ಕೊಡಗು ಜಿಲ್ಲೆಯಲ್ಲಿ ಬರದ ಪರಿಸ್ಥಿತಿ



ಈ ಬಾರಿ ಕಡಿಮೆ ಮಳೆಯಾದ್ದರಿಂದ ಸಂಗಮ ಪ್ರದೇಶದಲ್ಲಿ ನೀರು ಬತ್ತಿರುವುದು.

ಮಡಿಕೇರಿ, ಫೆ.27– ಕೊಡಗು ಜಿಲ್ಲೆಯಲ್ಲಿ ಬರದ ಪರಿಸ್ಥಿತಿ ಎದುರಾಗಿದ್ದು, ಕಾವೇರಿ ತವರಿನಲ್ಲೇ ನೀರಿಲ್ಲ.

ಭಾಗಮಂಡಲ ತ್ರಿವೇಣಿ ಸಂಗಮದಲ್ಲಿ ಕಾವೇರಿ ನದಿ ನೀರು ಬತ್ತಿ ಹೋಗಿದ್ದು, ಕೇವಲ ತಗ್ಗು ಪ್ರದೇಶದಲ್ಲಿ ಮಾತ್ರ ತೊರೆಯಂತೆ ನೀರು ಹರಿಯುತ್ತಿದೆ. ಇದರಿಂದ ಭಕ್ತರು ಪಿಂಡಪ್ರದಾನ ಹಾಗೂ ಪುಣ್ಯಸ್ನಾನಕ್ಕೂ ಪರದಾಡಬೇಕಿದೆ. ಫೆಬ್ರವರಿ ಕೊನೆ ವಾರದಲ್ಲಿ ಇಂತಹ ಪರಿಸ್ಥಿತಿ ಕಂಡುಬಂದಿರುವುದು 60 ವರ್ಷಗಳ ಬಳಿಕ ಇದೇ ಮೊದಲು ಎನ್ನಲಾಗುತ್ತಿದೆ. ಏಪ್ರಿಲ್, ಮೇ ತಿಂಗಳಲ್ಲಿ ನದಿಗಳಲ್ಲಿ ನೀರು ಗಣನೀಯವಾಗಿ ಬತ್ತಿರುವುದು ಸಾಮಾನ್ಯವಾಗಿದ್ದು, ಇದೀಗ ಬೇಸಿಗೆ ಆರಂಭದಲ್ಲೇ ತ್ರಿವೇಣಿ ಸಂಗಮ ಬತ್ತುತ್ತಿರುವುದು ಕಂಡುಬರುತ್ತಿದೆ. ಸಂಗಮ ಬರಿದಾಗಿರುವ ಹಿನ್ನೆಲೆಯಲ್ಲಿ ನದಿಯ ಒಡಲಿನಲ್ಲಿ ಮರಳು ಕಾಣುತ್ತಿದೆ.

ಮಳೆ ಕೊರತೆ: ಜಿಲ್ಲೆಯಲ್ಲಿ ಬರ ಮತ್ತು ನೀರಿನ ಮೂಲಗಳು ಬತ್ತುತ್ತಿರುವುದಕ್ಕೆ ಮಳೆಯ ತೀವ್ರ ಕೊರತೆಯೇ ಕಾರಣವಾಗಿದೆ. ಈ ಬಾರಿಯ ಮುಂಗಾರು ತೀವ್ರ ದುರ್ಬಲವಾಗಿ ಜಿಲ್ಲೆಯಲ್ಲಿ ವಾಡಿಕೆಯ ಮಳೆ ಕೂಡ ಸುರಿದಿಲ್ಲ. ಇನ್ನು ನಿರೀಕ್ಷೆ ಹೊಂದಿದ್ದ ಮಳೆ ನಕ್ಷತ್ರಗಳಾದ ಆಶ್ಲೇಷ, ಮೃಗಶಿರ, ಆರಿದ್ರ ಮಳೆ ಸಂಪೂರ್ಣವಾಗಿ ಕೈಕೊಟ್ಟಿದ್ದವು. ನಿಗದಿತ ಅವಧಿಯಲ್ಲಿ ಮಳೆಯಾಗದ ಕಾರಣ ನದಿಗಳು ಮತ್ತು ಜಲ ಮೂಲಗಳ ಒಡಲು ಬೇಸಿಗೆ ಆರಂಭ ಮುನ್ನವೇ ಕಾಣುವಂತಾಗಿದೆ.

ಮಳೆ ಬಾರದಿದ್ದರೆ ಸಂಕಷ್ಟ: ತಲಕಾವೇರಿ ಮತ್ತು ಬ್ರಹ್ಮಗಿರಿ ಬೆಟ್ಟದ ಸಾಲುಗಳು ವಾರ್ಷಿಕವಾಗಿ ಅತಿ ಹೆಚ್ಚು ಮಳೆ ಬೀಳುವ ಪ್ರದೇಶಗಳಾಗಿದ್ದು, ಈ ಬಾರಿ ಕಳೆದ ಸಾಲಿಗಿಂತ ಕಡಿಮೆ ಮಳೆಯಾಗಿದೆ. ಇದರ ಪರಿಣಾಮ ಕಾವೇರಿ ನದಿ ಮತ್ತು ಸಂಗಮ ಪ್ರದೇಶದಲ್ಲಿ ನೀರಿನ ತೀವ್ರ ಕೊರತೆ ಕಂಡುಬಂದಿದೆ. ಅಂತರ್ಜಲ ಮಟ್ಟವೂ ಕುಸಿತವಾಗಿರುವುದು ಈ ವ್ಯಾಪ್ತಿಯಲ್ಲಿ ಬರದ ಛಾಯೆಗೆ ಕಾರಣವಾಗಿದೆ. ಇದೀಗ ಮಾರ್ಚ್ ಮೊದಲ ವಾರದಲ್ಲಿ ತಲಕಾವೇರಿ, ಭಾಗಮಂಡಲ, ಬ್ರಹ್ಮಗಿರಿ ಮತ್ತು ಸುತ್ತಮುತ್ತಲ ವ್ಯಾಪ್ತಿಯಲ್ಲಿ ಮಳೆ ಸುರಿಯದೇ ಹೋದಲ್ಲಿ ಪರಿಸ್ಥಿತಿ ಮತ್ತಷ್ಟು ಗಂಭೀರವಾಗುವ ಎಲ್ಲಾ ಲಕ್ಷಣಗಳು ಕಂಡು ಬರುತ್ತಿವೆ.

ಸಿಎನ್‌ಸಿಯಿಂದ ಪುಷ್ಪನಮನ ಸಲ್ಲಿಕೆ



ಮಡಿಕೇರಿಯ ಕೋಟೆ ಆವರಣ ಮತ್ತು ದೇವಟ್ ಪರಂಬು ಕೊಡವ ನರಮೇಧ ಸ್ಮಾರಕ ಸ್ಥಳದಲ್ಲಿ ಪುಷ್ಪ ನಮನ ಸಲ್ಲಿಸಿದ ಸಿಎನ್‌ಸಿ ಪ್ರಮುಖರು.

ಮಡಿಕೇರಿ, ಫೆ.27–ರಾಜಕೀಯ ಹತ್ಯೆ ಮತ್ತು ಅಮಾನವೀಯ ಮರಣದಂಡನೆಗಳಿಂದ ಮೃತಪಟ್ಟ ಕೊಡವ ಬುಡಕಟ್ಟು ಹಿರಿಯರಿಗೆ ಅಂತಾರಾಷ್ಟ್ರೀಯ ಮಾತೃಭಾಷಾ ದಿನದ ಪ್ರಯುಕ್ತ ಕೊಡವ ನ್ಯಾಷನಲ್ ಕೌನ್ಸಿಲ್ ಸಂಘಟನೆ ವತಿಯಿಂದ ಗೌರವ ಅರ್ಪಿಸಲಾಯಿತು.

ನಗರದ ಕೋಟೆ ಆವರಣ ಮತ್ತು ದೇವಟ್ ಪರಂಬು ಕೊಡವ ನರಮೇಧ ಸ್ಮಾರಕ ಸ್ಥಳದಲ್ಲಿ ಪುಷ್ಪ ನಮನ ಸಲ್ಲಿಸಿದ ಸಿಎನ್‌ಸಿ ಪ್ರಮುಖರು, ಕೊಡವ ಪರಂಪರೆ ಮತ್ತು ಕೊಡವರ ಸ್ಥಿತಿ ಸ್ಥಾಪಕತ್ವವನ್ನು ಗೌರವಿಸಿದರು.

ಈ ಸಂದರ್ಭ ಮಾತನಾಡಿದ ಸಿಎನ್‌ಸಿ ಅಧ್ಯಕ್ಷ ಎನ್.ಯು.ನಾಚಪ್ಪ, ಮನುಷ್ಯ ಯಾವುದೇ ಕಷ್ಟ ಅಥವಾ ಸುಖದಲ್ಲಿದ್ದಾಗ ತನ್ನ ಮಾತೃಭಾಷೆಯ ಮೂಲಕವೇ ಭಾವನೆಗಳನ್ನು ವ್ಯಕ್ತಪಡಿಸುತ್ತಾನೆ. ಅದೇ ರೀತಿ ಹತ್ಯಾಕಾಂಡಕ್ಕೆ ಗುರಿಯಾದ ಹಿರಿಯ ಕೊಡವ ಜೀವಗಳು ಮಾತೃಭಾಷೆಯ ಮೂಲಕವೇ ತಮ್ಮ ನೋವು ಮತ್ತು ರೋದನವನ್ನು ಹೊರಹಾಕಿ ಪ್ರಾಣ ಬಿಟ್ಟಿದ್ದಾರೆ. ಈ ಜೀವಗಳಿಗೆ ಅಂತಾರಾಷ್ಟ್ರೀಯ ಮಾತೃಭಾಷಾ ದಿನದಂದು ಗೌರವ ಅರ್ಪಿಸುವುದು ಪ್ರತಿಯೊಬ್ಬ ಕೊಡವರ ಕರ್ತವ್ಯವಾಗಿರುವುದರಿಂದ ಸಿಎನ್‌ಸಿ ಕಾರ್ಯಕ್ರಮ ಹಮ್ಮಿಕೊಂಡಿದೆ ಎಂದರು.

ಪ್ರಮುಖರಾದ ಬೊಪ್ಪಂಡ ಬೊಳ್ಳಮ್ಮ ನಾಣಯ್ಯ, ಚೋಳಪಂಡ ಜ್ಯೋತಿ ನಾಣಯ್ಯ, ಆಲಮಂಡ ಜೈ, ಪಟ್ಟಮಾಡ ಕುಶ, ಮಂದಪಂಡ ಮನೋಜ್, ಕಾಂಡೇರ ಸುರೇಶ್, ಅಜ್ಜಿಕುಟ್ಟೀರ ಲೋಕೇಶ್, ಬಾಚರಣಿಯಂಡ ಚಿಪ್ಪಣ್ಣ, ಕಿರಿಯಮಾಡ ಶರಿನ್, ಚಂಬಂಡ ಜನತ್, ನಂದಿನೆರವಂಡ ಅಚ್ಚಯ್ಯ, ಪುಟ್ಟಿಚಂಡ ದೇವಯ್ಯ, ಚೋಳಪಂಡ ನಾಣಯ್ಯ, ಬೇಪಡಿಯಂಡ ದಿನು, ಬೇಪಡಿಯಂಡ ಬಿದ್ದಪ್ಪ, ಮಣವಟ್ಟಿರ ಸ್ವರೂಪ್, ಅಪ್ಪೇಂಗಡ ಮಾಲೆ ಹಾಗೂ ಕೋಡಿರ ರತನ್ ಹಾಜರಿದ್ದರು.

ಕುಶಾಲನಗರ ಅಭಿವೃದ್ಧಿಗೆ ವಿಶೇಷ ಅನುಷ್ಠಾನಕ್ಕೆ ಒತ್ತು



ಕುಶಾಲನಗರ ಪುರಸಭೆಯ ಆಯವ್ಯಯ ಸಭೆ ಉಪವಿಭಾಗಾಧಿಕಾರಿ ನರ್ವಾಡೆ ವಿನಾಯಕ್ ಕಾರ್ಭರ ಅಧ್ಯಕ್ಷತೆಯಲ್ಲಿ ನಡೆಯಿತು.

ಕುಶಾಲನಗರ, ಫೆ.27– ಇಲ್ಲಿನ ಪುರಸಭೆಯಲ್ಲಿ ಮಂಗಳವಾರ ನಡೆದ 2024–25ನೇ ಸಾಲಿನ ಆಯವ್ಯಯ ಸಭೆಯಲ್ಲಿ ಪಟ್ಟಣದ ಸರ್ವತೋಮುಖ ಅಭಿವೃದ್ಧಿಗೆ ವಿಶೇಷ ಯೋಜನೆಗಳನ್ನು ಅನುಷ್ಠಾನಗೊಳಿಸುವುದರೊಂದಿಗೆ ಉಳಿತಾಯ ಬಜೆಟ್ ಅನ್ನು ಪುರಸಭೆಯ ಆಡಳಿತ ಅಧಿಕಾರಿ, ಉಪವಿಭಾಗಾಧಿಕಾರಿ ನರ್ವಾಡೆ ವಿನಾಯಕ್ ಕಾರ್ಭರ ಮಂಡಿಸಿದರು.

ವಾಣಿಜ್ಯ ನಗರಿಯ ಅಭಿವೃದ್ಧಿಗೆ ಪೂರಕವಾದ ಬಜೆಟ್‌ನೊಂದಿಗೆ 9.23 ಲಕ್ಷ ರೂ. ಉಳಿತಾಯ ಬಜೆಟ್ ಮಂಡಿಸಲಾಯಿತು. ಪುರಸಭೆ ವ್ಯಾಪ್ತಿಯಲ್ಲಿ ಸುಸಜ್ಜಿತ ತಾಲೂಕು ಗ್ರಂಥಾಲಯ ಕಟ್ಟಡ ನಿರ್ಮಾಣಕ್ಕೆ ಸಿಎ ನಿವೇಶನ. ಸಮುದಾಯ ಭವನ ಅಭಿವೃದ್ಧಿಗೆ 1 ಕೋಟಿ ರೂ., ಪುರಸಭೆ ನೂತನ ಕಚೇರಿ ಕಟ್ಟಡಕ್ಕೆ 3 ಕೋಟಿ ರೂ., ಸ್ಮಶಾನ ಅಭಿವೃದ್ಧಿಗೆ 30 ಲಕ್ಷ ರೂ., ವಾಣಿಜ್ಯ ಮಳಿಗೆಗಳ ನಿರ್ಮಾಣಕ್ಕೆ 50 ಲಕ್ಷ ರೂ. ಅನುದಾನ ಮೀಸಲಿಡಲಾಯಿತು.

ಪುರಸಭೆ ಮುಖ್ಯಾಧಿಕಾರಿ ಕೃಷ್ಣಪ್ರಸಾದ್ ಮಾತನಾಡಿ, ಪಟ್ಟಣದ ಜನರಿಗೆ ಮೂಲಸೌಲಭ್ಯ ಒದಗಿಸುವುದು ಮತ್ತು ಪುರಸಭೆಯನ್ನು ಆರ್ಥಿಕವಾಗಿ ಸದೃಢಗೊಳಿಸುವುದು. ತೆರಿಗೆ ಸಂಗ್ರಹಿಸಿ, ಅನುದಾನ ಪಡೆದು ಅಭಿವೃದ್ಧಿಗೆ ಚಿಂತನೆ ನಡೆಸಲಾಗಿದೆ ಎಂದು ತಿಳಿಸಿದರು.

ಸಭೆಯಲ್ಲಿ ಸದಸ್ಯರಾದ ಬಿ.ಜೈವರ್ಧನ್, ಡಿ.ಕೆ.ತಿಮ್ಮಪ್ಪ, ಅಮೃತ್‌ರಾಜ್, ರೇಣುಕಾ, ಪ್ರಮೋದ್, ವಿ.ಎಸ್. ಆನಂದ್ ಕುಮಾರ್, ದಿನೇಶ್, ಜಗದೀಶ್, ಖಲಿಮುಲ್ಲಾ, ಸುರೆಯಾ ಬಾನು, ಜಯಲಕ್ಷ್ಮೀ, ಜಯಲಕ್ಷ್ಮೀ ನಂಜುಂಡಸ್ವಾಮಿ, ಪುಟ್ಟಲಕ್ಷ್ಮಮ್ಮ, ಶೈಲಾ, ರೂಪಾ ಮತ್ತು ಆರೋಗ್ಯ ನಿರೀಕ್ಷಕ ಉದಯಕುಮಾರ್, ಸಿಬ್ಬಂದಿ ಇದ್ದರು.

ಮಾ.9, ಆಳ್ವಾಸ್ ಸಾಂಸ್ಕೃತಿಕ ವೈಭವ



ಮಡಿಕೇರಿಯಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಆಳ್ವಾಸ್ ಸಾಂಸ್ಕೃತಿಕ ವೈಭವ ಸಮಿತಿಯ ಸಂಚಾಲಕ ಡಾ.ಆನಂದ್ ಕಾರ್ಲ ಮಾತನಾಡಿದರು.

ವಿರಾಜಪೇಟೆ, ಫೆ.27–ವಿರಾಜಪೇಟೆ ಹಾಗೂ ಗೋಣಿಕೊಪ್ಪಲು ಕಾವೇರಿ ವಿದ್ಯಾ ಸಂಸ್ಥೆ ವತಿಯಿಂದ ಮಾ.9ರಂದು ಸಂಜೆ 6ಕ್ಕೆ ವಿರಾಜಪೇಟೆ ಕಾವೇರಿ ಕಾಲೇಜು ಆವರಣದಲ್ಲಿ ಆಳ್ವಾಸ್ ಸಾಂಸ್ಕೃತಿಕ ವೈಭವ–2024 ಆಯೋಜಿಸಲಾಗಿದೆ ಎಂದು ಕಾವೇರಿ ಕಾಲೇಜಿನ ಪ್ರಾಂಶುಪಾಲರಾದ ಆಳ್ವಾಸ್ ಸಾಂಸ್ಕೃತಿಕ ವೈಭವ ಸಮಿತಿಯ ಸಂಚಾಲಕ ಡಾ.ಆನಂದ್ ಕಾರ್ಲ ತಿಳಿಸಿದರು.

ವಿದ್ಯಾರ್ಥಿಗಳು ಮತ್ತು ಪೋಷಕರು ಕಾಲೇಜಿನ ಕ್ಯಾಂಪಸ್‌ನಲ್ಲಿ ಆಕರ್ಷಿತರಾಗಬೇಕು ಎಂಬ ಆಶಯದೊಂದಿಗೆ ಆಳ್ವಾಸ್ ಸಾಂಸ್ಕೃತಿಕ ವೈಭವ ಏರ್ಪಡಿಸಲಾಗಿದ್ದು, ಹಿಂದೆ ಗೋಣಿಕೊಪ್ಪಲಿನಲ್ಲಿ ಕಾರ್ಯಕ್ರಮ ಆಯೋಜಿಸಲಾಗಿತ್ತು. ಕಾರ್ಯಕ್ರಮದಲ್ಲಿ ಐದು ಸಾವಿರ ಜನ ಸೇರುವ ನಿರೀಕ್ಷೆ ಇದೆ. ಮುಖ್ಯ ಅತಿಥಿಗಳಾಗಿ ಸಂಸದ ಪ್ರತಾಪ್ ಸಿಂಹ, ಶಾಸಕ ಎ.ಎಸ್.ಪೊನ್ನಣ್ಣ, ವಿಧಾನ ಪರಿಷತ್ ಸದಸ್ಯ ಮಂಡೇಪಂಡ ಸುಜಾ ಕುಶಾಲಪ್ಪ, ಆಳ್ವಾಸ್‌ನ ಮುಖ್ಯಸ್ಥ ಡಾ. ಮೋಹನ್ ಆಳ್ವ, ಕಾವೇರಿ ವಿದ್ಯಾಸಂಸ್ಥೆಯ ಅಧ್ಯಕ್ಷ ಇಟ್ಟೀರ ಬಿದ್ದಪ್ಪ, ಕಾರ್ಯದರ್ಶಿ ಕುಲ್ಲಚಂಡ ಬೋಪಣ್ಣ ಮತ್ತಿತರರು ಭಾಗವಹಿಸಲಿದ್ದಾರೆ ಎಂದು ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದರು.

ತಾಲೂಕು ಕಸಾಪ ಅಧ್ಯಕ್ಷ ರಾಜೇಶ್ ಪದ್ಮನಾಭ ಮಾತನಾಡಿ, ಆಳ್ವಾಸ್‌ನ ಸಾಂಸ್ಕೃತಿಕ ವೈಭವ ಆಯೋಜನೆಗೆ ಅಂದಾಜು 10 ಲಕ್ಷ ರೂ. ಅಗತ್ಯ ಇದೆ. ಹಳೇ ವಿದ್ಯಾರ್ಥಿಗಳು, ಪೋಷಕರು, ದಾನಿಗಳು ಸಹಕಾರ ನೀಡಬೇಕು. ಹಣಕಾಸಿನ ಎಲ್ಲಾ ವಹಿವಾಟು ಪಾರದರ್ಶಕವಾಗಿ ಇಡಲಾಗುವುದು ಎಂದರು.

ಸುದ್ದಿಗೋಷ್ಠಿಯಲ್ಲಿ ಸಮಿತಿಯ ಕಾರ್ಯದರ್ಶಿ ಡಾ.ಕೆ.ಜಿ.ವೀಣಾ, ಸದಸ್ಯೆ ಮನೆಯಪಂಡ ದೇಚಮ್ಮ ಉಪಸ್ಥಿತರಿದ್ದರು.

ಸ್ವಗ್ರಾಮ ಕುಮಟೂರಿನಲ್ಲಿ ಚಿಣ್ಣಪ್ಪ ಅಂತ್ಯಕ್ರಿಯೆ



ಮಡಿಕೇರಿ, ಫೆ.27–ನಾಗರಹೊಳೆ ಅಭಯಾರಣ್ಯದ ಸಂರಕ್ಷಕ ಎಂದೇ ಖ್ಯಾತಿ ಪಡೆದಿದ್ದ ಪರಿಸರ ಪ್ರೇಮಿ ನಿವೃತ್ತ ಅರಣ್ಯಾಧಿಕಾರಿ ಕೊಟ್ರಂಗಡ ಎಂ.ಚಿಣ್ಣಪ್ಪ ಅವರ ಅಂತ್ಯಕ್ರಿಯೆ ಕೊಡವ ಸಾಂಪ್ರದಾಯಿಕ ವಿಧಿ ವಿಧಾನಗಳೊಂದಿಗೆ ಸ್ವಗ್ರಾಮ ಕುಮಟೂರು ಗ್ರಾಮದಲ್ಲಿ ಮಂಗಳವಾರ ನೆರವೇರಿತು.

ಚಿಣ್ಣಪ್ಪ ಅವರ ಪುತ್ರ ಮನು ಅಂತಿಮ ಕಾರ್ಯ ನಡೆಸಿದರು. ಜಿಲ್ಲಾ ಅರಣ್ಯ ಇಲಾಖೆಯ ಡಿಸಿಎಫ್ ಭಾಸ್ಕರ್, ಡಿಸಿಎಫ್ ಶರಣ ಬಸಪ್ಪ ಸಿಎಫ್ ಹರ್ಷ ನರಗುಂದ ಸೇರಿದಂತೆ ಅನೇಕ ಅಧಿಕಾರಿಗಳು, ಸಿಬ್ಬಂದಿ ಅಂತಿಮ ದರ್ಶನ ಪಡೆದರು. ಪರಿಸರ ಸಂಘಟನೆಗಳ ಪ್ರಮುಖರಾದ ಡಾ.ಉಲ್ಲಾಸ್ ಕಾರಂತ್, ಡಾ.ಸಾಂಭಕುಮಾರ್, ಮಾಜಿ ಐಪಿಎಸ್ ಅಧಿಕಾರಿ ಬಿ.ಭಾಸ್ಕರ್ ರಾವ್, ಹೆಸರಾಂತ ಸಾಕ್ಷ್ಯಚಿತ್ರ ನಿರ್ದೇಶಕ ಶೇಖರ್ ದತ್ತಾತ್ರಿ, ಪ್ರವೀಣ್ ಭಾರ್ಗವ್, ಕೃಪಾಕರ ಸೇನಾನಿ, ವೈಲ್ಡ್‌ಲೈಫ್ ಫಸ್ಟ್‌ನ ತಮ್ಮು ಪೂವಯ್ಯ, ಪಿ.ಎಂ.ಮುತ್ತಣ್ಣ, ಸತೀಶ್ ಅಪ್ಪಚ್ಚು, ಪ್ರಮೋದ್ ಸೋಮಯ್ಯ, ಕೊಟ್ರಂಗಡ ಸುಬ್ರಮಣಿ, ಕಟ್ಟೀರ ಜಾಜಿ, ಪುಟ್ಟು ಚಿಟ್ಟಿಯಪ್ಪ ಟಿ.ಎಲ್.ಶ್ರೀನಿವಾಸ್, ಅಪಾರ ಅಭಿಮಾನಿಗಳು ಅಂತ್ಯಕ್ರಿಯೆಯಲ್ಲಿ ಭಾಗವಹಿಸಿದ್ದರು.

ಕೊಡಗು–ಮೈಸೂರು ಕ್ಷೇತ್ರಕ್ಕೆ ನಾನೂ ಬಿಜೆಪಿ ಆಕಾಂಕ್ಷಿ: ಭಾಸ್ಕರ್ ರಾವ್



ಮಡಿಕೇರಿ, ಫೆ27–ಕೊಡಗು–ಮೈಸೂರು ಲೋಕಸಭಾ ಕ್ಷೇತ್ರಕ್ಕೆ ನಾನು ಕೂಡ ಬಿಜೆಪಿ ಆಕಾಂಕ್ಷಿ ಎಂದು ನಿವೃತ್ತ ಐಪಿಎಸ್ ಅಧಿಕಾರಿ ಭಾಸ್ಕರ್ ರಾವ್ ಹೇಳಿದರು.

ನಗರದಲ್ಲಿ ಮಂಗಳವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಜಿಲ್ಲೆಯ ವಿವಿಧ ಸಂಘ–ಸಂಸ್ಥೆಗಳೊಂದಿಗೆ ಉತ್ತಮ ಬಾಂಧವ್ಯ ಇದೆ. ನನಗೂ ಅವಕಾಶ ನೀಡುವಂತೆ ಈಗಾಗಲೇ ಬಿಜೆಪಿ ವರಿಷ್ಠರ ಗಮನಕ್ಕೆ ತಂದಿದ್ದೇನೆ. ಪಕ್ಷದ ತೀರ್ಮಾನವೇ ಅಂತಿಮ. ಪಕ್ಷ ಯಾರಿಗೆ ಅವಕಾಶ ನೀಡುತ್ತದೋ ಅವರ ಪರವಾಗಿ ಶಿಸ್ತಿನ ಸಿಪಾಯಿಯಾಗಿ ಕೆಲಸ ಮಾಡುವುದಾಗಿ ಸ್ಪಷ್ಟಪಡಿಸಿದರು.

ಜೆಡಿಎಸ್ ಅಭ್ಯರ್ಥಿಯನ್ನು ಬಿಜೆಪಿ ಚಿಹ್ನೆ ಅಡಿಯಲ್ಲಿ ಕಣಕ್ಕಿಳಿಸುವ ವಿಚಾರದ ಕುರಿತು ಪ್ರತಿಕ್ರಿಯಿಸಿದ ಭಾಸ್ಕರ್ ರಾವ್, ಈ ಕುರಿತು ಚರ್ಚೆ ಮಾತ್ರ ನಡೆಯುತ್ತಿದೆ. ಸಂಸದ ಪ್ರತಾಪ್ ಸಿಂಹ 10 ವರ್ಷ ಉತ್ತಮ ಸೇವೆ ಸಲ್ಲಿಸಿದ್ದಾರೆ. ಎಲ್ಲಾ ಪಕ್ಷಗಳಲ್ಲೂ ಎರಡು ಮೂರು ಮಂದಿ ಆಕಾಂಕ್ಷಿಗಳು ಇರುತ್ತಾರೆ. ಅದರಂತೆ ನಾನು ಕೂಡ ಅವಕಾಶ ಬಯಸಿದ್ದೇನೆ. ಅಭ್ಯರ್ಥಿಗಳ ಅಂತಿಮ ತೀರ್ಮಾನ ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸಮಿತಿ ಮಾಡಲಿದೆ ಎಂದು ಹೇಳಿದರು.

ಕಳೆದ 33 ವರ್ಷಗಳಿಂದ ನಾನು ಸರ್ಕಾರದ ವಿವಿಧ ಇಲಾಖೆಗಳಲ್ಲಿ ಸೇವೆ ಸಲ್ಲಿಸಿದ ಅನುಭವವಿದೆ. 1996ರಿಂದ 1999ರವರೆಗೆ ಕೊಡಗು ಜಿಲ್ಲೆಯಲ್ಲಿ ಎಸ್‌ಪಿ ಆಗಿ ಸೇವೆ ಸಲ್ಲಿಸಿದ್ದು, ಮಹಿಳಾ ಪೊಲೀಸ್ ಸಿಬ್ಬಂದಿ ನಿಯೋಜನೆ ಮಾಡಿದ್ದೇನೆ ಮೈತ್ರಿ ಪೊಲೀಸ್ ಸಮುದಾಯ ಭವನ, ಆರ್‌ಟಿಓ ಇಲಾಖೆಯಲ್ಲಿ ಸೇವೆ ಸಲ್ಲಿಸುತ್ತಿದ್ದ ಸಂದರ್ಭ ಆರ್‌ಟಿಓ ಕಚೇರಿಯನ್ನು ಸ್ಥಳಾಂತರಿಸಿರುವುದು, ಹೊರ ಭಾಗದಲ್ಲಿ ಪೊಲೀಸ್ ಚೌಕಿಗಳ ಸ್ಥಾಪನೆ ಸೇರಿದಂತೆ ಜನಪರ ಸೇವೆ ಸಲ್ಲಿಸಿದ್ದೇನೆ ಎಂದು ತಿಳಿಸಿದರು.

ಪಿ.ಕೆ.ಮಹೇಶ್ ನಿಧನ



ಪೊನ್ನಂಪೇಟೆ, ಫೆ.27– ಪೊನ್ನಂಪೇಟೆ ಗ್ರಾಮ ಪಂಚಾಯಿತಿಯ ಕಾರ್ಪೆಂಟರ್ ಪಿ.ಕೆ.ಮಹೇಶ್ (46) ಅನಾರೋಗ್ಯದಿಂದ ಸೋಮವಾರ ಸಂಜೆ ನಿಧನರಾದರು. ಮೃತರು ಪತ್ನಿ ಶ್ರೀಜಾ, ಇಬ್ಬರು ಪುತ್ರರು ಹಾಗೂ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಮಂಗಳವಾರ ಮಧ್ಯಾಹ್ನ ಸ್ವಗ್ರಾಮದ ಹಿಂದೂ ರುದ್ರಭೂಮಿಯಲ್ಲಿ ಅಂತ್ಯಕ್ರಿಯೆ ನೆರವೇರಿತು.

ಚಾ.ನಗರದಲ್ಲಿ ವೆಚ್ಚದ ದರಪಟ್ಟಿ ನಿಗದಿ ಸಭೆ

ಲೋಕಸಭಾ ಸಾರ್ವತ್ರಿಕ ಚುನಾವಣೆ ಹಿನ್ನೆಲೆ ಜಿಲ್ಲಾಧಿಕಾರಿ ಶಿಲ್ಪನಾಗ್ ಚರ್ಚೆ



ಚಾಮರಾಜನಗರ ಜಿಲ್ಲಾಧಿಕಾರಿ ಕಚೇರಿಯಲ್ಲಿ ಡಿಸಿ ಶಿಲ್ಪನಾಗ್ ಅಧ್ಯಕ್ಷತೆಯಲ್ಲಿ ವಿವಿಧ ಪಕ್ಷಗಳ ಪ್ರತಿನಿಧಿಗಳೊಂದಿಗೆ ಲೋಕಸಭಾ ಚುನಾವಣೆಯ ವೆಚ್ಚದ ದರಪಟ್ಟಿ ನಿಗದಿ ಸಭೆ ನಡೆಯಿತು.

ಚಾಮರಾಜನಗರ, ಫೆ.27–ಲೋಕಸಭಾ ಸಾರ್ವತ್ರಿಕ ಚುನಾವಣೆಯಲ್ಲಿ ಸ್ಪರ್ಧಿಸುವ ಅಭ್ಯರ್ಥಿಗಳು ಚುನಾವಣೆಗೆ ಬಳಸಲಾಗುವ ಸಾಮಗ್ರಿಗಳಿಗೆ ಭರಿಸುವ ವೆಚ್ಚದ ದರಪಟ್ಟಿ ನಿಗದಿಪಡಿಸುವ ಸಭೆ ಮಂಗಳವಾರ ವಿವಿಧ ಪಕ್ಷಗಳ ಪ್ರತಿನಿಧಿಗಳೊಂದಿಗೆ ಜಿಲ್ಲಾಧಿಕಾರಿ ಶಿಲ್ಪನಾಗ್ ಅಧ್ಯಕ್ಷತೆಯಲ್ಲಿ ನಡೆಯಿತು.

ಚುನಾವಣಾ ಸಂದರ್ಭದಲ್ಲಿ ಅಭ್ಯರ್ಥಿಗಳು ಸಭೆ, ಸಮಾರಂಭ, ಪ್ರಚಾರ ಸಾಮಗ್ರಿ, ವಾಹನಗಳ ಬಾಡಿಗೆ, ಸಮಾರಂಭಗಳಲ್ಲಿ ಉಪಯೋಗಿಸುವ ವಸ್ತುಗಳು, ಶಾಮಿಯಾನ, ಕುರ್ಚಿ, ಧ್ವನಿವರ್ಧಕ, ಬ್ಯಾನರ್, ಕರಪತ್ರ, ಪೋಸ್ಟರ್, ಎಲ್‌ಇಡಿ ಪರದೆ ಸೇರಿದಂತೆ ಇನ್ನಿತರ ಸಾಮಗ್ರಿಗಳ ದರ ನಿಗದಿ ಸಂಬಂಧ ವಿವರವಾಗಿ ಚರ್ಚಿಸಲಾಯಿತು.

ಜಿಲ್ಲಾಧಿಕಾರಿ ಶಿಲ್ಪನಾಗ್ ಮಾತನಾಡಿ, ಪ್ರತಿಯೊಂದು ವೆಚ್ಚವನ್ನು ಅಭ್ಯರ್ಥಿಗಳ ಅಧಿಕೃತ ಖಾತೆಯಿಂದ ನಿರ್ವಹಿಸಬೇಕು. ಪಾರದರ್ಶಕವಾಗಿ ಚುನಾವಣಾ ಪ್ರಕ್ರಿಯೆ ನಡೆಸುವ ನಿಟ್ಟಿನಲ್ಲಿ ಚುನಾವಣೆ ಆಯೋಗ ನೀಡಿರುವ ಸೂಚನೆ ಹಾಗೂ ಮಾರ್ಗದರ್ಶನವನ್ನು ಪಾಲನೆ ಮಾಡಬೇಕು ಎಂದರು.

ಚುನಾವಣೆ ಸಂಬಂಧ ಎಲ್ಲಾ ಖರ್ಚು ವೆಚ್ಚಗಳನ್ನು ಅಭ್ಯರ್ಥಿಗಳು ಇಡಬೇಕಾಗುತ್ತದೆ. ನಿಗದಿತ ವಹಿಯಲ್ಲಿ ಎಲ್ಲವನ್ನು ನಮೂದಿಸಬೇಕು. ಚುನಾವಣಾ ವೆಚ್ಚ ಅಧಿಕಾರಿಗಳು ಈ ಸಂಬಂಧ ಪರಿಶೀಲಿಸಲಿದ್ದಾರೆ. ಮುಕ್ತ, ನ್ಯಾಯಸಮ್ಮತ ಚುನಾವಣಾ ಪ್ರಕ್ರಿಯೆಗೆ ಎಲ್ಲರೂ ಸಹಕರಿಸಬೇಕು ಎಂದು ತಿಳಿಸಿದರು.

ಸಭೆಯಲ್ಲಿ ಹೆಚ್ಚುವರಿ ಜಿಲ್ಲಾಧಿಕಾರಿ ಗೀತಾ ಹುಡೇದ, ಜಿಲ್ಲಾ ಪಂಚಾಯಿತಿ ಮುಖ್ಯ ಲೆಕ್ಕಾಧಿಕಾರಿ ಬಸವರಾಜು, ಲೋಕೋಪಯೋಗಿ ಇಲಾಖೆಯ ಕಾರ್ಯಪಾಲಕ ಇಂಜಿನಿಯರ್ ಎಸ್.ಪಿ.ಮಹೇಶ್, ವಿವಿಧ ರಾಜಕೀಯ ಪಕ್ಷಗಳ ಪ್ರತಿನಿಧಿಗಳಾದ ಎ.ಎಚ್.ನಜ್ರುಲ್ಲಾ ಖಾನ್, ವೃಷಬೇಂದ್ರಪ್ಪ, ಎನ್.ನಾಗಯ್ಯ, ಮಹದೇವಸ್ವಾಮಿ, ಎಸ್.ಮಹೇಶ್‌ಗೌಡ, ಇತರರು ಉಪಸ್ಥಿತರಿದ್ದರು.

ಕಂಟ್ರೋಲ್ ರೂಂ ಸ್ಥಾಪನೆ

ಚಾಮರಾಜನಗರ, ಫೆ.27–ಲೋಕಸಭಾ ಸಾರ್ವತ್ರಿಕ ಚುನಾವಣೆ ಹಿನ್ನೆಲೆಯಲ್ಲಿ ಅಕ್ರಮ ಮದ್ಯ ಮಾರಾಟ, ತಯಾರಿಕೆ, ದಾಸ್ತಾನು, ಸಾಗಾಣಿಕೆ ಸೇರಿದಂತೆ ಇತ್ಯಾದಿ ಮಾಹಿತಿಯನ್ನು ಅಬಕಾರಿ ಇಲಾಖೆಗೆ ನೀಡಲು ಜಿಲ್ಲಾ ಮತ್ತು ತಾಲೂಕು ಮಟ್ಟದಲ್ಲಿ 24x7 ಕಂಟ್ರೋಲ್ ರೂಂಗಳನ್ನು ತೆರೆಯಲಾಗಿದೆ.

ಜಿಲ್ಲಾಧಿಕಾರಿ ಕಚೇರಿಯಲ್ಲಿ ತೆರೆದಿರುವ ಟೋಲ್‌ಫ್ರೀ ಸಂ:1950 ಮತ್ತು ಅಬಕಾರಿ ಇಲಾಖೆಯ ಟೋಲ್‌ಫ್ರೀ ಸಂ:1800–425–1776ಕ್ಕೆ ಸಾರ್ವಜನಿಕರು ಯಾವುದೇ ದೂರು, ಮಾಹಿತಿಗಳಿದ್ದರೆ ತಿಳಿಸಬಹುದು. ನಗರದ ಅಬಕಾರಿ ಉಪ ಆಯುಕ್ತರ ಕಚೇರಿಯ ದೂ.ಸಂ:08226–224776, ಅಬಕಾರಿ ಉಪವಿಭಾಗ ಅಧೀಕ್ಷಕರ ಕಚೇರಿಯ ದೂ.ಸಂ: 08226–224892, ಚಾಮರಾಜನಗರ ಮತ್ತು ಯಳಂದೂರು ವಲಯದ ಅಬಕಾರಿ ನಿರೀಕ್ಷಕರ ಕಚೇರಿಯ ದೂ.ಸಂ: 08226–223821, ಕೊಳ್ಳೇಗಾಲ ಮತ್ತು ಹನೂರು ಕಚೇರಿಯ ದೂ.ಸಂ: 08224–252433, ಗುಂಡ್ಲುಪೇಟೆ ಕಚೇರಿಯ ದೂ.ಸಂ: 08229–295289ಕ್ಕೆ ಮಾಹಿತಿ ತಿಳಿಸಬಹುದು ಎಂದು ಅಬಕಾರಿಯ ಉಪ ಆಯುಕ್ತರು ತಿಳಿಸಿದ್ದಾರೆ.

ಪ್ರತಿಯೊಬ್ಬರೂ ಸಂವಿಧಾನ ಗೌರವಿಸಬೇಕು

ಕಾರ್ಯಾಗಾರ ಉದ್ಘಾಟಿಸಿದ ಜಿಲ್ಲಾಧಿಕಾರಿ ಶಿಲ್ಪನಾಗ್



ಚಾಮರಾಜನಗರದ ಜೆ.ಎಚ್.ಪಟೇಲ್ ಸಭಾಂಗಣದಲ್ಲಿ ನಾಗರಿಕ ಹಕ್ಕು ಸಂರಕ್ಷಣಾ ಕುರಿತು ಆಯೋಜಿಸಿದ್ದ ವಿಚಾರ ಸಂಕಿರಣ ಮತ್ತು ಕಾರ್ಯಾಗಾರವನ್ನು ಜಿಲ್ಲಾಧಿಕಾರಿ ಶಿಲ್ಪನಾಗ್ ಉದ್ಘಾಟಿಸಿದರು. ತಿಸ್ಸ ಬಂತೇಜಿ, ಪಿ.ಲಕ್ಷ್ಮೀ, ಡಾ.ಪಿ.ದೇವರಾಜು, ಪುಟ್ಟಸ್ವಾಮಿ ಇದ್ದರು.

ಚಾಮರಾಜನಗರ, ಫೆ.27–ಸಮಾಜದಲ್ಲಿ ನಾಗರಿಕ ಹಕ್ಕುಗಳೊಂದಿಗೆ ಎಲ್ಲಾ ವರ್ಗಗಳಿಗೂ ಸಮಾನತೆಯಿಂದ ಬದುಕಲು ಅವಕಾಶ ನೀಡಿರುವ ಸಂವಿಧಾನವನ್ನು ಪ್ರತಿಯೊಬ್ಬರೂ ಗೌರವಿಸಬೇಕು ಎಂದು ಜಿಲ್ಲಾಧಿಕಾರಿ ಶಿಲ್ಪನಾಗ್ ತಿಳಿಸಿದರು.

ನಗರದ ಜೆ.ಎಚ್.ಪಟೇಲ್ ಸಭಾಂಗಣದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ, ಸಮಾಜ ಕಲ್ಯಾಣ ಇಲಾಖೆ ಹಾಗೂ ಪ್ರಜಾ ಪರಿವರ್ತನಾ ವೇದಿಕೆ ವತಿಯಿಂದ 'ನಮ್ಮ ಸಂವಿಧಾನ ನಮ್ಮ ಹೆಮ್ಮೆ–ಸಂವಿಧಾನ ಜಾಗೃತಿ ವರ್ಷ–2024ರ' ಅಂಗವಾಗಿ ನಾಗರಿಕ ಹಕ್ಕು ಸಂರಕ್ಷಣಾ, ಪರಿಶಿಷ್ಟ ಜಾತಿ ಮತ್ತು ಪಂಗಡಗಳ (ದೌರ್ಜನ್ಯ ಪ್ರತಿಬಂಧ) ಕುರಿತು ಆಯೋಜಿಸಿದ್ದ ವಿಚಾರ ಸಂಕಿರಣ ಮತ್ತು ಕಾರ್ಯಾಗಾರ ಉದ್ಘಾಟಿಸಿ ಮಾತನಾಡಿದ ಅವರು, ಸಂವಿಧಾನ ಒಂದು ಪುಣ್ಯಗ್ರಂಥವಾಗಿದೆ. ಸಮಸಮಾಜದ ಉದ್ದೇಶಕ್ಕಾಗಿಯೇ ಡಾ.ಬಿ.ಆರ್.ಅಂಬೇಡ್ಕರ್ ಅವರು ಸಂವಿಧಾನವನ್ನು ರಚಿಸಿದ್ದಾರೆ. ನಾವೆಲ್ಲರು ಸಂವಿಧಾನದಡಿಯಲ್ಲಿ ಬದುಕಬೇಕು. ಸಂವಿಧಾನದ ಆಶೋತ್ತರಗಳನ್ನು ಈಡೇರಿಸಲು ಯುವಜನತೆ ಸಂವಿಧಾನ ಅಧ್ಯಯನ ಮಾಡುವ ಜೊತೆಗೆ ಆದರ ಆಶಯ, ಮೌಲ್ಯಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದರು.

> ಅಂಬೇಡ್ಕರ್ ಕನಸನ್ನು ನನಸು ಮಾಡುವ ನಿಟ್ಟಿನಲ್ಲಿ ಸಂವಿಧಾನ ಜಾಗೃತಿ ವರ್ಷವನ್ನಾಗಿ ಆಚರಿಸಲಾಗುತ್ತಿದೆ. ವಿಶ್ವದ ಅತಿದೊಡ್ಡ ಲಿಖಿತ ಸಂವಿಧಾನ ಎಂಬ ಹೆಗ್ಗಳಿಕೆ ನಮ್ಮದಾಗಿದೆ. ಸಂವಿಧಾನ ದೇಶಕ್ಕೆ ಅಂತರಿಕ ಭದ್ರತೆಯೊಂದಿಗೆ ಸದೃಢತೆಯನ್ನು ಕಲ್ಪಿಸಿದೆ. ಸಂವಿಧಾನದ ಹಕ್ಕುಗಳನ್ನು ಅನುಭವಿಸುವುದು ಮಾತ್ರವಲ್ಲ. ಕರ್ತವ್ಯಗಳನ್ನು ಪಾಲಿಸುವುದು ನಮ್ಮ ಜವಾಬ್ದಾರಿ.
>
> -ಪಿ.ಲಕ್ಷ್ಮೀ, ಜಿಲ್ಲಾ ಪಂಚಾಯಿತಿ ಉಪಕಾರ್ಯದರ್ಶಿ

ಸಂವಿಧಾನದ ಬಗ್ಗೆ ಅರಿವು ಮೂಡಿಸುವ ಸಲುವಾಗಿ ಜಾಗೃತಿ ವರ್ಷವನ್ನಾಗಿ ಆಚರಣೆ ಮಾಡಲಾಗುತ್ತಿದ್ದು, ಜಿಲ್ಲಾದ್ಯಂತ ಅನೇಕ ವೈವಿಧ್ಯಮಯ ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ. ನ.26ರಂದು ಸಂವಿಧಾನ ಪೀಠಿಕೆ ಓದುವ ಮೂಲಕ ಆರಂಭಗೊಂಡ ಸಂವಿಧಾನ ಜಾಗೃತಿ ಜಾಥಾ ಜಿಲ್ಲೆಯ 130 ಗ್ರಾಮ ಪಂಚಾಯಿತಿಗಳಲ್ಲಿ ಸಂಚರಿಸಿ ಸಾರ್ವಜನಿಕರಿಗೆ ವ್ಯಾಪಕ ಅರಿವು ಮೂಡಿಸಿದೆ. ಸಂವಿಧಾನ ಜಾಗೃತಿ ಕಾರ್ಯಕ್ರಮ ಜಿಲ್ಲೆಯಲ್ಲಿ ಸಾರ್ಥಕಗೊಂಡಿದೆ ಎಂದು ತಿಳಿಸಿದರು. ಸಂವಿಧಾನ ಜಾಗೃತಿಗಾಗಿ ವಿದ್ಯಾರ್ಥಿಗಳಿಗೆ ಪ್ರಬಂಧ ಸ್ಪರ್ಧೆ, ಕಲಾವಿದರಿಂದ ಬೀದಿ ನಾಟಕ, ಸತ್ತಿಗೆ ಸೂರಪಾನಿಗಳೊಂದಿಗೆ ಸಿಂಗಾರಗೊಂಡ ಎತ್ತಿನಗಾಡಿಗಳಿಂದ ಆಕರ್ಷಕ ಮೆರವಣಿಗೆ, ಪುಸ್ತಕ ಜೋಳಿಗೆ, ಮಕ್ಕಳಿಂದ ಸಂವಿಧಾನ ಪೀಠಿಕೆ ಓದುವಂತಹ ವಿಶೇಷ ಕಾರ್ಯಕ್ರಮಗಳಿಂದ ಸಂವಿಧಾನ ಜಾಗೃತಿ ಜಾಥಾ ಜನಮನ ಸೂರೆಗೊಂಡಿದೆ. ಎಲ್ಲಾ ವರ್ಗದ ಜನರು, ಸಂಘ–ಸಂಸ್ಥೆಗಳು ಪಾಲ್ಗೊಂಡು ಜಾಥಾಗೆ ಉತ್ತಮ ಸಹಕಾರ ನೀಡಿದ್ದಾರೆ. ಇದರ ಪ್ರತಿಫಲವಾಗಿಯೇ ಜಿಲ್ಲೆಗೆ ಪ್ರಥಮ ಸ್ಥಾನ ಲಭಿಸಿದೆ. ಇದು ನಮ್ಮ ಹೆಮ್ಮೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ವಸತಿಯುಕ್ತ ಸರ್ಕಾರಿ ಪ್ರಥಮದರ್ಜೆ ಕಾಲೇಜಿನ ಪ್ರಾಂಶುಪಾಲ ಡಾ.ಪಿ.ದೇವರಾಜು ಹಾಗೂ ಜಿಲ್ಲಾ ವಕೀಲರ ಸಂಘದ ಮಾಜಿ ಅಧ್ಯಕ್ಷ ಪುಟ್ಟಸ್ವಾಮಿ, ನಾಗರಿಕ ಹಕ್ಕು ಸಂರಕ್ಷಣಾ ಅಧಿನಿಯಮ–1955, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ (ದೌರ್ಜನ್ಯ ಪ್ರತಿಬಂಧ) ಅಧಿನಿಯಮ–1989 ಹಾಗೂ ನಿಯಮಗಳು–1995ರ ಕುರಿತು ವಿಚಾರ ಮಂಡಿಸಿದರು.

ನಳಂದ ಬೌದ್ಧ ವಿಶ್ವವಿದ್ಯಾಲಯದ ತಿಸ್ಸ ಬಂತೇಜಿ ಸಾನ್ನಿಧ್ಯ ವಹಿಸಿದ್ದರು. ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಪದ್ಮಿನಿ ಸಾಹು, ಜಿಲ್ಲಾ ಪಂಚಾಯಿತಿ ಮುಖ್ಯ ಯೋಜನಾಧಿಕಾರಿ ಪ್ರಭುಸ್ವಾಮಿ, ಸಮಾಜ ಕಲ್ಯಾಣ ಇಲಾಖೆಯ ಉಪನಿರ್ದೇಶಕ ಮಲ್ಲಿಕಾರ್ಜುನ, ಸಹಾಯಕ ನಿರ್ದೇಶಕ ಚಿಕ್ಕಬಸವಯ್ಯ, ಪ್ರಜಾ ಪರಿವರ್ತನಾ ವೇದಿಕೆಯ ಜಿಲ್ಲಾಧ್ಯಕ್ಷ ಸಿ.ಎಂ. ಕೃಷ್ಣಮೂರ್ತಿ ಇತರರು ಇದ್ದರು. ಕಾರ್ಯಾಗಾರ ಆರಂಭದಲ್ಲಿ ಜನಪದ ಗಾಯಕ ಸಿ.ಎಂ.ನರಸಿಂಹಮೂರ್ತಿ ಮತ್ತು ತಂಡ ನಡೆಸಿಕೊಟ್ಟ ಭೀಮಗೀತೆ ಗಾಯನ ಎಲ್ಲರ ಗಮನ ಸೆಳೆಯಿತು.

ಇಂದು ಬೇಗೂರಿನಲ್ಲಿ ಮಾರಮ್ಮನ ಹಬ್ಬ



ಬೇಗೂರು (ಗುಂಡ್ಲುಪೇಟೆ), ಫೆ.27– ಬೇಗೂರು ಗ್ರಾಮದೇವತೆ ಮಾರಮ್ಮನ ಹಬ್ಬ ಫೆ.28ರಂದು ವಿಜೃಂಭಣೆಯಿಂದ ನಡೆಯಲಿದೆ. ಬುಧವಾರ ಸಂಜೆ ಮಾರಮ್ಮನ ದೇವಾಲಯ ಆವರಣದಲ್ಲಿ ವಿಶೇಷ ಹೋಮ ನಡೆಯಲಿದ್ದು, ದೇವಿಗೆ ವಿಶೇಷ ಅಭಿಷೇಕಗಳು ನಡೆಯಲಿವೆ. ನಂತರ ದೇವಿಯನ್ನು ವಿವಿಧ ಹೂವಿನಿಂದ ಅಲಂಕರಿಸಲಾಗುವುದು. ರಾತ್ರಿಯಿಂದ ಗುರುವಾರ ಮುಂಜಾನೆವರೆಗೆ ಪೂಜೆ ಸಲ್ಲಿಸುವುದು. ಡೊಳ್ಳು ಕುಣಿತ, ದೋಣ್ಣೆ ಕತ್ತಿ ವರಸೆ ನಡೆಯಲಿದೆ. ಗ್ರಾಮದ ಆಂಜನೇಯಸ್ವಾಮಿ, ಸಿದ್ದಪ್ಪಾಜಿ ಮತ್ತು ಶಕ್ತಿ ಗಣಪತಿ ದೇವಾಲಯಗಳನ್ನೂ ವಿದ್ಯುತ್ ದೀಪಗಳಿಂದ ಅಲಂಕರಿಸಲಾಗುವುದು.

ಕಲೆ, ಸಾಹಿತ್ಯ, ಸಂಸ್ಕೃತಿ ಉಳಿಸಿ ಬೆಳೆಸಿ



ಚಾಮರಾಜನಗರದ ಅಂಬೇಡ್ಕರ್ ಭವನದಲ್ಲಿ ಮಂಗಳವಾರ ಆಯೋಜಿಸಿದ್ದ ಜಿಲ್ಲಾಮಟ್ಟದ ಯುವಜನ ಮೇಳವನ್ನು ನಗರಸಭಾ ಸದಸ್ಯ ಎಂ.ಮಹೇಶ್ ಉದ್ಘಾಟಿಸಿದರು.

ಚಾಮರಾಜನಗರ, ಫೆ.27–ಜಿಲ್ಲೆಯ ಜಾನಪದ ಕಲೆ, ಸಾಹಿತ್ಯ ಮತ್ತು ಸಂಸ್ಕೃತಿಯನ್ನು ಉಳಿಸಿ ಬೆಳೆಸುವ ಜೊತೆಗೆ ಯುವಜನತೆ ಎಲ್ಲಾ ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಭಾಗವಹಿಸಬೇಕು ಎಂದು ನಗರಸಭಾ ಸದಸ್ಯ ಎಂ.ಮಹೇಶ್ ತಿಳಿಸಿದರು.

ನಗರದ ಡಾ.ಬಿ.ಆರ್.ಅಂಬೇಡ್ಕರ್ ಭವನದಲ್ಲಿ ಮಂಗಳವಾರ ಜಿಲ್ಲಾಡಳಿತ, ಜಿಪಂ ಹಾಗೂ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಸಂಯುಕ್ತಾಶ್ರಯದಲ್ಲಿ ಆಯೋಜಿಸಿದ್ದ 'ಜಿಲ್ಲಾ ಮಟ್ಟದ ಯುವಜನ ಮೇಳ' ಉದ್ಘಾಟಿಸಿ ಮಾತನಾಡಿದ ಅವರು, ಜಿಲ್ಲೆ ಜಾನಪದ ಕಲೆಗಳ ತವರೂರಾಗಿದೆ. ವಿವಿಧ ಸಾಂಸ್ಕೃತಿಕ ಕಲೆಗಳು, ಸಾಹಿತ್ಯಾತ್ಮಕ ಚಟುವಟಿಕೆಗಳನ್ನು ಆಗಿಂದಾಗ್ಗೆ ಆಯೋಜಿಸುತ್ತಿರುವುದು ಯುವಜನತೆಯ ಅಗಾಧ ಪ್ರತಿಭೆಗಳನ್ನು ಹೊರಸೂಸಲು ಪ್ರೇರಕವಾಗಿದೆ. ಇಂದಿನ ವಿದ್ಯಾರ್ಥಿಗಳು, ಯುವಕರು ಮೊಬೈಲ್‌ಗೆ ಮಾರುಹೋಗಿ ಸಾಮಾಜಿಕ ಜಾಲತಾಣದಲ್ಲಿ ಸಕ್ರಿಯರಾಗಿದ್ದು, ಇದರಿಂದ ಸಾಂಸ್ಕೃತಿಕ ಚಟುವಟಿಕೆಗಳು ನಶಿಸಿಹೋಗುತ್ತಿವೆ. ಯುವಜನತೆ ಇದನ್ನು ಮನಗಂಡು ಜಿಲ್ಲೆಯ ಕಲೆ, ಸಂಸ್ಕೃತಿಗಳನ್ನು ಉಳಿಸಿ ಬೆಳೆಸಲು ಮುಂದಾಗಬೇಕು ಎಂದರು.

ಜಿಲ್ಲಾಮಟ್ಟದಲ್ಲಿ ಆಯ್ಕೆಯಾದವರು ರಾಜ್ಯ ಹಾಗೂ ರಾಷ್ಟ್ರಮಟ್ಟದಲ್ಲಿ ಜಿಲ್ಲೆಯ ಕೀರ್ತಿ ಪತಾಕೆ ಹಾರಿಸಬೇಕು. ಸಾಕಷ್ಟು ಹಿರಿಯ ಕಲಾವಿದರು ಜಿಲ್ಲೆಯ ಕಲೆ, ಸಾಹಿತ್ಯ, ಸಂಸ್ಕೃತಿಗೆ ಅಪಾರ ಕೊಡುಗೆ ನೀಡಿದ್ದಾರೆ ಎಂದು ತಿಳಿಸಿದರು.

ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕ ಶಿವಸ್ವಾಮಿ ಮಾತನಾಡಿ, ಪ್ರತಿವರ್ಷದಂತೆ ಈ ಬಾರಿಯೂ ಜಿಲ್ಲಾ ಮಟ್ಟದ ಯುವಜನ ಮೇಳ ಆಯೋಜಿಸಲಾಗಿದೆ. ಜಿಲ್ಲೆಯ ಯುವಕ, ಯುವತಿಯರು ಯುವಜನ ಮೇಳವನ್ನು ಸದ್ಬಳಕೆ ಮಾಡಿಕೊಳ್ಳಬೇಕು ಎಂದರು.

ಜಿಲ್ಲಾ ಕ್ರೀಡಾಂಗಣ ಅಭಿವೃದ್ಧಿ ಸಮಿತಿಯ ಸದಸ್ಯ ಶ್ರೀನಿವಾಸಮೂರ್ತಿ, ಜಿಲ್ಲಾ ಯುವ ಪ್ರಶಸ್ತಿ ಪುರಸ್ಕೃತ ಜಿ.ಬಂಗಾರು, ಹಿರಿಯ ಜನಪದ ಗಾಯಕ ಸಿ.ಎಂ.ನರಸಿಂಹಮೂರ್ತಿ, ಕ್ರೀಡಾ ತರಬೇತುದಾರ ಗಣೇಶ್ ಇತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ಕರಡು ಕರ್ನಾಟಕ ಸ್ಲಂ ಕಾಯ್ದೆಗೆ ಸಹಮತ

ಚಾಮರಾಜನಗರದ ರೋಟರಿ ಭವನದಲ್ಲಿ ಕರಡು ಕರ್ನಾಟಕ ಸ್ಲಂ ಕಾಯ್ದೆ ಕುರಿತ ಸಭೆ ವಿವಿಧ ಸಂಘಟನೆಗಳ ಮುಖಂಡರು ಸಮ್ಮುಖದಲ್ಲಿ ನಡೆಯಿತು.



ಚಾಮರಾಜನಗರ, ಫೆ27–ಸ್ಲಂ ನಿವಾಸಿಗಳ ಸಂವಿಧಾನಿಕ ಹಕ್ಕನ್ನು ರಕ್ಷಿಸುವ ನಿಟ್ಟಿನಲ್ಲಿ ಸಿದ್ಧಗೊಂಡಿರುವ ಕರಡು ಕರ್ನಾಟಕ ಸ್ಲಂ ಕಾಯ್ದೆಗೆ ವಿವಿಧ ಸಂಘಟನೆಗಳ ಮುಖಂಡರು ಸಹಮತ ವ್ಯಕ್ತಪಡಿಸಿದರು.

ನಗರದ ರೋಟರಿ ಭವನದಲ್ಲಿ ಸ್ಲಂ ಜನರ ಸಂಘಟನೆ, ಕರ್ನಾಟಕ ಆ್ಯಕ್ಷನ್ ಏಡ್ ಅಸೋಸಿಯೇಷನ್ (ಇಂಡಿಯಾ), ಸ್ವರಾಜ್ ಸಂಘಟನೆ ಮತ್ತು ಹಸಿರು ದಳ ಸಂಸ್ಥೆ ವತಿಯಿಂದ ನಡೆದ ಜಿಲ್ಲಾ ಮಟ್ಟದ ಸಮಾಲೋಚನಾ ಸಭೆಯಲ್ಲಿ ಕರಡು ಕರ್ನಾಟಕ ಸ್ಲಂ ಕಾಯ್ದೆಯ ಸಾರಾಂಶ ಕುರಿತು ಚರ್ಚಿಸಿ, ಕಾನೂನಿನ ಪಾಲನೆ ಅನುಸರಿಸಬೇಕಾದ ಸಾಮಾನ್ಯ ತತ್ವಗಳ ಬಗ್ಗೆ ಸಂಪೂರ್ಣವಾಗಿ ಓದಿ ಸರ್ವಾನುಮತದಿಂದ ಮುಖಂಡರು ಸಹಮತ ವ್ಯಕ್ತಪಡಿಸಿದರು.

ಬೆಂಗಳೂರಿನ ಆ್ಯಕ್ಷನ್ ಏಡ್ ಸಂಸ್ಥೆಯ ವ್ಯವಸ್ಥಾಪಕಿ ನಂದಿನಿ ಮಾತನಾಡಿ, ಸ್ಲಂ ಕಾಯ್ದೆ ಜಾರಿ ಒತ್ತಾಯಕ್ಕೆ ಹೋರಾಟ ಮಾಡಿಕೊಂಡು ಬರಲಾಗಿದೆ. ಈ ಕಾಯ್ದೆ ನಾಲ್ಕು ಐಎಎಸ್ ಅಧಿಕಾರಿಗಳು ಕುಳಿತು ಮಾಡಬಾರದು, ಜನರಿಂದಲೇ ಆಗಬೇಕು. ಆಂದೋಲನ ರೂಪದಲ್ಲಿ ನಡೆಸಬೇಕು ಎಂಬ ಆಶಯ ಇದೆ ಎಂದರು.

ಸಭೆಯಲ್ಲಿ ರೋಟರಿ ಸಂಸ್ಥೆಯ ಮಾಜಿ ಅಧ್ಯಕ್ಷ ಕೆಂಪನಪುರ ಮಹದೇವಸ್ವಾಮಿ, ಪ್ರಗತಿಪರ ಸಂಘಟನೆಗಳ ಒಕ್ಕೂಟದ ಅಧ್ಯಕ್ಷ ಸಿ.ಎಂ.ಕೃಷ್ಣಮೂರ್ತಿ, ಡಿಎಸ್‌ಎಸ್ ಜಿಲ್ಲಾ ಸಂಚಾಲಕ ದೊಡ್ಡಿಂದುವಾಡಿ ಸಿದ್ದರಾಜು, ಬಂಗಾರು, ನಗರಸಭಾ ಸದಸ್ಯ ಶಾಂತರಾಜು, ಸ್ವರಾಜ್ ಸಂಘಟನೆಯ ಶಿವಮ್ಮ, ಹಸಿರು ಸಂಸ್ಥೆಯ ವೆಂಕಟೇಶ್, ನೀಲಯ್ಯ, ವಕೀಲ ಕಾಳಸ್ವಾಮಿ, ಸಾಮಾಜಿಕ ಕಾರ್ಯಕರ್ತ ಅರಕಲವಾಡಿ ನಾಗೇಂದ್ರ, ಜಿ.ಕೆ.ಕುನ್ನಹೊಳಿಯ್ಯ, ಪ್ರಗತಿಪರ, ದಲಿತಪರ, ಡಿಎಸ್‌ಎಸ್ ಸಂಘಟನೆಗಳ ಮುಖಂಡರು, ಮಹಿಳಾ ಸಂಘದ ಸದಸ್ಯರು ಭಾಗವಹಿಸಿದ್ದರು.

ಕಾಂಗ್ರೆಸ್ ಪ್ರಕಾರ ಆತ್ಮಸಾಕ್ಷಿ ಮತ ಎಂದರೆ ಅಡ್ಡ ಮತದಾನ

● ಮಾಜಿ ಸಿಎಂ ಕುಮಾರಸ್ವಾಮಿ ಆಕ್ರೋಶ ● ಅಡ್ಡ ಮತದಾನದ ಜನಕರೇ ಅವರು ● ರಾಜ್ಯಸಭೆ ಚುನಾವಣೆಯಿಂದ ಜೆಡಿಎಸ್-ಬಿಜೆಪಿ ಮೈತ್ರಿ ಮತ್ತಷ್ಟು ಬಲಗೊಂಡಿದೆ



ಬೆಂಗಳೂರು, ಫೆ.27(ಕೆಎಂಶಿ)– ಚುನಾವಣೆ ವ್ಯವಸ್ಥೆಯಲ್ಲಿ ಅಡ್ಡ ಮತದಾನಕ್ಕೆ ಜನ್ಮ ಕೊಟ್ಟಿದ್ದೇ ಕಾಂಗ್ರೆಸ್ ಪಕ್ಷ ಎಂದು ಟೀಕಾಪ್ರಹಾರ ನಡೆಸಿದ ಮಾಜಿ ಮುಖ್ಯಮಂತ್ರಿ, ಜೆಡಿಎಸ್ ರಾಜ್ಯಾಧ್ಯಕ್ಷ ಹೆಚ್.ಡಿ. ಕುಮಾರಸ್ವಾಮಿ, ದೇಶದ ರಾಜಕಾರಣಕ್ಕೆ ಕಾಂಗ್ರೆಸ್ ಪಕ್ಷ ದೊಡ್ಡ ಕಳಂಕ ಎಂದು ಆಕ್ರೋಶ ವ್ಯಕ್ತಪಡಿಸಿದರು.

ರಾಜ್ಯಸಭೆ ಚುನಾವಣೆಯಲ್ಲಿ ಬಿಜೆಪಿ ಶಾಸಕರಿಂದ ಅಡ್ಡ ಮತದಾನ ಮಾಡಿಸಿದ ಕಾಂಗ್ರೆಸ್ ವಿರುದ್ಧ ಕಿಡಿಕಾರಿದ ಅವರು, ಆತ್ಮಸಾಕ್ಷಿ ಮತದಿಂದ ಅಲ್ಲ, ಅಡ್ಡ ಮತದಾನದಿಂದ ಕಾಂಗ್ರೆಸ್ ಪಕ್ಷವು ರಾಜ್ಯಸಭೆ ಚುನಾವಣೆಯಲ್ಲಿ ಗೆಲುವು ಸಾಧಿಸಿದೆ. ಇದು ಪ್ರಜಾಪ್ರಭುತ್ವ, ಸಂವಿಧಾನ ಎಂದೆಲ್ಲ ಭಜನೆ ಮಾಡುವ ಪಕ್ಷ ಮಾಡುವ ಕೆಲಸವೇ ಎಂದು ಕೇಳಿದರು.

ಆತ್ಮಸಾಕ್ಷಿ ಮತ ಎನ್ನುವ ಪದವನ್ನು ದೇಶದಲ್ಲಿ ಮೊದಲು ಹುಟ್ಟು ಹಾಕಿದ್ದೇ ಕಾಂಗ್ರೆಸ್. ಆತ್ಮಸಾಕ್ಷಿ ಮತ ಎಂದರೆ ಅಡ್ಡ ಮತ ಎಂದೇ ಅರ್ಥ. 1969ರಲ್ಲಿ ಅಂದಿನ ಪ್ರಧಾನಿಗಳಾದ ಇಂದಿರಾಗಾಂಧಿ ಅವರು ತಮ್ಮ ಕೈಗೊಂಬೆ ರಾಷ್ಟ್ರಪತಿ ಬೇಕೆಂದು ಕಾಂಗ್ರೆಸ್ ಅಧಿಕೃತ ಅಭ್ಯರ್ಥಿಯಾಗಿದ್ದ ನೀಲಂ ಸಂಜೀವರೆಡ್ಡಿ ಅವರ ವಿರುದ್ಧ ವಿ.ವಿ.ಗಿರಿ ಅವರನ್ನು ಕಣಕ್ಕೆ ಇಳಿಸಿ ಆತ್ಮಸಾಕ್ಷಿ ಮತ ಹಾಕುವಂತೆ ಕರೆ ನೀಡಿದ್ದರು. ಅಂದು ಪಕ್ಷದ ಅಧಿಕೃತ ಅಭ್ಯರ್ಥಿಯಾಗಿದ್ದ ನೀಲಂ ಸಂಜೀವರೆಡ್ಡಿ ಅವರು ಆತ್ಮಸಾಕ್ಷಿ ಅಲಿಯಾಸ್ ಅಡ್ಡಮತದಿಂದ ಸೋತರು. ಅಡ್ಡಮತ ಪರಿಕಲ್ಪನೆಯ ಜನಕರೇ ಕಾಂಗ್ರೆಸ್ ಎಂದು ಕುಮಾರಸ್ವಾಮಿ ಅವರು ಟೀಕಾಪ್ರಹಾರ ನಡೆಸಿದರು.

ರಾಜ್ಯಸಭೆ ಚುನಾವಣೆಯ ಮೂಲಕ ಜೆಡಿಎಸ್-ಬಿಜೆಪಿ ಮೈತ್ರಿ ಮತ್ತಷ್ಟು ಬಲವಾಗಿದೆ. ಪ್ರಜಾಪ್ರಭುತ್ವ ದ್ರೋಹಿಗಳು, ಸಂವಿಧಾನ ದ್ರೋಹಿಗಳು ಯಾರು ಎಂಬುದು ಜಗಜ್ಜಾಹೀರಾಗಿದೆ.

ಕಾಂಗ್ರೆಸ್‌ನಿಂದ ಬಿಜೆಪಿಗೆ ಹಾರಿ ಅಲ್ಲಿ ಅಧಿಕಾರ ಅನುಭವಿಸಿದವರು ಈಗ ಆರೇ ಬಿಜೆಪಿಗೆ ಟೋಪಿ ಹಾಕಿ ಅಡ್ಡ ಮತದಾನ ಮಾಡಿ ದ್ರೋಹ ಎಸಗಿದ್ದಾರೆ. ಅವರು ಏಳೆಂಟು ತಿಂಗಳಿಂದ ಏನೇನು ಮಾಡುತ್ತಿದ್ದರು ಎಂದು ಮಾಧ್ಯಮಗಳೇ ತೋರಿಸಿವೆ. ಇದರಿಂದ ಬಿಜೆಪಿಗೇನೂ ಶಾಕ್ ಆಗಿಲ್ಲ, ನನಗೂ ಆಗಿಲ್ಲ. ಈ ಚುನಾವಣೆ ಇರಲಿ, ಲೋಕಸಭೆ ಚುನಾವಣೆಯಲ್ಲಿ ಅಸಲಿ ಆಟವಿದೆ ಎಂದು ಕುಮಾರಸ್ವಾಮಿ ಅವರು ಪ್ರಶ್ನೆಯೊಂದಕ್ಕೆ ಉತ್ತರ ನೀಡಿದರು. ಜೆಡಿಎಸ್ ಪಕ್ಷದ 19 ಶಾಸಕರು ಒಟ್ಟಾಗಿದ್ದೇವೆ. ಎಲ್ಲರೂ ಬಂದು ಮೈತ್ರಿಕೂಟದ ಅಭ್ಯರ್ಥಿ ಡಿ.ಕುಪೇಂದ್ರ ರೆಡ್ಡಿ ಅವರಿಗೆ ಮತ ಹಾಕಿದ್ದಾರೆ. ನಮ್ಮ ಶಾಸಕರನ್ನು ಸೆಳೆಯುವ ಕಾಂಗ್ರೆಸ್ ತಂತ್ರ ಫಲಿಸಲಿಲ್ಲ ಎಂದು ಅವರು ಹೇಳಿದರು.

ಅಷ್ಟೇ ಅಲ್ಲದೆ, ಅಧಿಕಾರವನ್ನು ದುರುಪಯೋಗ ಮಾಡಿಕೊಂಡು ನಮ್ಮ ಅಭ್ಯರ್ಥಿಯನ್ನು ಹೆದರಿಸುವ, ಅವರ ವಿರುದ್ಧ ಎಫ್‌ಐಆರ್ ಹಾಕಿಸುವ ರಣಹೇಡಿ ಕೆಲಸವನ್ನೂ ಮಾಡಿದ್ದಾರೆ. ಜತೆಗೆ, ಈ ಸರಕಾರ ಬಂದಾಗಿನಿಂದ ಜೆಡಿಎಸ್ ಪಕ್ಷದ 12ಕ್ಕೂ ಹೆಚ್ಚು ಶಾಸಕರು ತಮ್ಮ ಕಡೆ ಬರಲು ಬಟ್ಟಿದ್ದಾರೆ ಎಂದು ಸುಳ್ಳು ಹೇಳಿಕೊಂಡು ಓಡಾಡುತ್ತಿದ್ದರು.

ನಮ್ಮ ಶಾಸಕರು ಕ್ಷೇತ್ರದ ಕೆಲಸಕ್ಕಾಗಿ ಪತ್ರ ತೆಗೆದುಕೊಂಡು ಹೋದರೆ, 'ನೋಡಿ ನೀವು ಈಗ ಹದಿಮೂರನೆಯವರು. ನಮ್ಮ ಪಕ್ಷಕ್ಕೆ ಬಂದರೆ ನಿಮ್ಮ ಕೆಲಸಗಳೆಲ್ಲಾ ಆಗುತ್ತವೆ. ಆಲೋಚನೆ ಮಾಡಿ' ಎಂದು ಕಳೆದ ಏಳು ತಿಂಗಳಿಂದ ಆಮಿಷ ಒಡ್ಡುತ್ತಲೇ ಇದ್ದರೆ ಎನ್ನುವುದು ಜಗಜ್ಜಾಹೀರಾಗಿದೆ ಎಂದು ಕುಮಾರಸ್ವಾಮಿ ಆರೋಪ ಮಾಡಿದರು. ಮೈತ್ರಿ ಅಭ್ಯರ್ಥಿ ಡಿ.ಕುಪೇಂದ್ರ ರೆಡ್ಡಿ ಅವರಿಗೆ ಮತ ಹಾಕಿದ ಎರಡೂ ಪಕ್ಷಗಳ ಶಾಸಕರಿಗೆ ಕೃತಜ್ಞತೆಗಳನ್ನು ಸಲ್ಲಿಸಿದ ಮಾಜಿ ಮುಖ್ಯಮಂತ್ರಿಗಳು; ಕಾಂಗ್ರೆಸ್ ಪಕ್ಷದ ಧಮ್ಕಿ ರಾಜಕಾರಣವನ್ನು ನಮ್ಮ ಶಾಸಕರು ಸಡ್ಡು ಹೊಡೆದು ನಿಂತಿದ್ದಾರೆ. ಅವರು ಒಡ್ಡಿದ್ದ ಆಮಿಷಗಳನ್ನು ಕಾಲ ಕಸದಂತೆ ತಿರಸ್ಕರಿಸಿದ್ದಾರೆ ಎಂದು ಹೇಳಿದರು.

ಕಂದಕೂರ ಕುಟುಂಬ ಕಳೆದ ನಲವತ್ತು ವರ್ಷಗಳಿಂದ ಪಕ್ಷಕ್ಕೆ ನಿಷ್ಠವಾಗಿದೆ. ನಾಗನಗೌಡ ಕಂದಕೂರ ಅವರು ದೇವೇಗೌಡರ ಒಡನಾಡಿ. ಅವರಿಬ್ಬರ ಸಂಬಂಧ ಎಂಥದ್ದು ಎನ್ನುವುದು ಎಲ್ಲರಿಗೂ ಗೊತ್ತಿದೆ. ಶರಣಗೌಡ ಕಂದಕೂರ ನನ್ನದು ತಂದೆ ಮಗನ ಬಾಂಧವ್ಯ. ಅವರ ಮನಸ್ಸು ನನಗೆ ಗೊತ್ತಿಲ್ಲವೇ ಎಂದರು.

ಜೆಡಿಎಸ್‌ನವರಿಗೆ ಆತ್ಮನೇ ಇಲ್ಲ, ಆತ್ಮಸಾಕ್ಷಿ ಮತ ಎಲ್ಲಿ ಬರುತ್ತೆ?: ಸಿಎಂ



ಬೆಂಗಳೂರು: ಜೆಡಿಎಸ್‌ನವರಿಗೆ ಆತ್ಮನೇ ಇಲ್ಲ, ಆತ್ಮಸಾಕ್ಷಿ ಮತ ಎಲ್ಲಿ ಬರುತ್ತೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದ್ದಾರೆ. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಜೆಡಿಎಸ್ ಅವರಿಗೆ ಇರೋದೇ 19 ಮತ. ಅವರು ಅಭ್ಯರ್ಥಿ ಹಾಕಬೇಕಿರಲಿಲ್ಲ. ನಾವು ಒಗ್ಗಟ್ಟಾಗಿದ್ದೇವೆ. ಅವರು ನಮ್ಮ ಶಾಸಕರಿಗೆ ಆಸೆ ಆಮಿಷ ತೋರಿಸಿದರು. ಜೆಡಿಎಸ್ ಅವರಿಗೆ ಆತ್ಮನೇ ಇಲ್ಲ ಇನ್ನು ಆತ್ಮಸಾಕ್ಷಿ ಮತ ಎಲ್ಲಿ ಬರುತ್ತೆ. ಜೆಡಿಎಸ್ ಸೆಕ್ಯುಲರ್ ಹೋಗಿದೆ ಎಂದು ಕೈ ಅಲ್ಲಾಡಿಸಿ ವ್ಯಂಗ್ಯವಾಡಿದರು.

ಆಸೆ, ಆಮಿಷಗಳನ್ನು ತೋರಿಸೋರು ಜೆಡಿಎಸ್‌ನವರು, ನಾವಲ್ಲ. ನಮ್ಮ ಸಂಪರ್ಕದಲ್ಲಿ ಎಲ್ಲರೂ ಇದ್ದಾರೆ. ಬೇರೆ ಪಕ್ಷದವರು ನಮಗೆ ಹಾಕಬಹುದು. ಬೇರೆ ಪಕ್ಷಗಳಿಂದಲೂ ನಮ್ಮ ಅಭಿವೃದ್ಧಿ ಮೆಚ್ಚಿ ನಮಗೆ ಮತಗಳು ಬರಬಹುದು ಎಂದರು.

ಮೈತ್ರಿಗೆ ಎರಡನೇ ಮುಖಬಂಗ!

ಬೆಂಗಳೂರು, ಫೆ.27–ಬಿಜೆಪಿ–ಜೆಡಿಎಸ್ ಮೈತ್ರಿಗೆ ಮತ್ತೊಂದು ಸೋಲಾಗಿದೆ. ಜೆಡಿಎಸ್ ಎನ್‌ಡಿಎ ಮೈತ್ರಿಕೂಟಕ್ಕೆ ಸೇರ್ಪಡೆಯಾದ ನಂತರ ನಡೆದ ಬೆಂಗಳೂರು ಶಿಕ್ಷಕರ ಕ್ಷೇತ್ರದಿಂದ ವಿಧಾನಪರಿಷತ್‌ಗೆ ನಡೆದ ಉಪಚುನಾವಣೆಯಲ್ಲಿ ರಂಗನಾಥ್ ಮೈತ್ರಿಕೂಟದ ಅಭ್ಯರ್ಥಿಯಾಗಿದ್ದರು. ಆದರೆ, ಈ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿ ಪಿ.ಪುಟ್ಟಣ್ಣ ಜಯಭೇರಿ ಬಾರಿಸಿದ್ದರು. ಈಗ ರಾಜ್ಯಸಭಾ ಚುನಾವಣೆಯಲ್ಲಿ ಎನ್‌ಡಿಎ ಮೈತ್ರಿಕೂಟದ ಮೈತ್ರಿಕೂಟದಿಂದ 5ನೇ ಅಭ್ಯರ್ಥಿಯಾಗಿ ಕುಪೇಂದ್ರರೆಡ್ಡಿ ಸ್ಪರ್ಧಿಸಿದ್ದರು. ಆದರೆ, ಕೇವಲ 36 ಮತಗಳನ್ನು ಗಳಿಸುವ ಮೂಲಕ ಹೀನಾಯ ಸೋಲು ಅನುಭವಿಸಿದ್ದಾರೆ. ಇದರೊಂದಿಗೆ ಎನ್‌ಡಿಎ ಮೈತ್ರಿಕೂಟ ಸತತ ಸೋಲಿನಿಂದ ಭಾರೀ ಹಿನ್ನಡೆ ಅನುಭವಿಸಿದಂತಾಗಿದೆ.

ಒಂದನೇ ಪುಟದಿಂದ

ಕಾಂಗ್ರೆಸ್ 3, ಬಿಜೆಪಿ ಒಬ್ಬರು ಆಯ್ಕೆ

ಚಲಾವಣೆ ಗೊಂಡವು, ಅದರಲ್ಲಿ ಕಾಂಗ್ರೆಸ್‌ನ ಅಜಯ್ ಮಾಕೆನ್ (47), ನಾಸೀರ್ ಹುಸೇನ್ (47) ಹಾಗೂ ಜಿ.ಸಿ.ಚಂದ್ರಶೇಖರ್ (45) ಮತ ಗಳನ್ನು ಪಡೆದು

ರಾಜ್ಯಸಭೆ ಪ್ರವೇಶಿಸಿದರೆ, ಬಿಜೆಪಿಯ ನಾರಾಯಣಸಾ ಬಾಂಡಗೆ (47) ಮತಗಳನ್ನು ಪಡೆದು ಮೊದಲ ಬಾರಿಗೆ ಸಂಸತ್ ಪ್ರವೇಶಿಸಿದರು. ವಿಧಾನಸಭೆಯಲ್ಲಿ ತಮಗೆ ಗೆಲುವಿನ ಗುರಿ ಮುಟ್ಟುವಷ್ಟು ಸಂಖ್ಯಾ ಬಲ ಇಲ್ಲ ಎಂದು ತಿಳಿದಿದ್ದರೂ ಬಿಜೆಪಿ ಜೊತೆ ಕೈಜೋಡಿಸಿ ಜೆಡಿಎಸ್‌ನಿಂದ ಕಣ ಕ್ಕಿಳಿದಿದ್ದ ಕುಪೇಂದ್ರರೆಡ್ಡಿ ಪರಾಭವಗೊಂಡಿದ್ದಾರೆ. ಅದೃಷ್ಟ ಪರೀಕ್ಷೆಗೆ ಇಳಿದಿದ್ದ ರೆಡ್ಡಿ ಅವರಿಗೆ 36 ಮತಗಳು ಮಾತ್ರ ಲಭ್ಯವಾಗಿವೆ. ರೆಡ್ಡಿ ಅವರಿಗೆ ರಾಜ್ಯಸಭಾ ಚುನಾವಣೆ ಯಲ್ಲಿ ಇದು ಸತತ ಮೂರನೇ ಸೋಲಾಗಿದೆ.

ಆಡಳಿತ ಪಕ್ಷದ ಕೆಲವು ಮತಗಳನ್ನು ಪಡೆದು ಐದನೇ ಅಭ್ಯರ್ಥಿಯನ್ನು ಗೆಲ್ಲಿಸುವ ಹುಮ್ಮಸ್ಸಿನಲ್ಲಿದ್ದ ಬಿಜೆಪಿ ಹಾಗೂ ಜೆಡಿಎಸ್ ನಾಯಕರಿಗೆ ಕಾಂಗ್ರೆಸ್ ತಕ್ಕ ಉತ್ತರ ನೀಡಿದೆ. ವಿಧಾನಸಭೆಯಲ್ಲಿ ಸಭಾಧ್ಯಕ್ಷರೂ ಸೇರಿದಂತೆ ಕಾಂಗ್ರೆಸ್ 134 ಸದಸ್ಯ ಬಲ ಹೊಂದಿದ್ದರೂ ಅವರಿಗೆ ಚುನಾವಣೆಯಲ್ಲಿ 139 ಮತಗಳು ಲಭ್ಯವಾಗಿವೆ. ಸದನದಲ್ಲಿ 66 ಸಂಖ್ಯಾಬಲ ಹೊಂದಿರುವ ಬಿಜೆಪಿ ಎನ್‌ಡಿಎ ಕೂಟದ ಎರಡನೇ ಅಭ್ಯರ್ಥಿಯ ಗೆಲುವು ಸಾಧ್ಯವಿಲ್ಲ ಎಂಬ ಮಾಹಿತಿ ತಿಳಿಯುತ್ತಿದ್ದಂತೆ, ಕೊನೆ ಗಳಿಗೆಯಲ್ಲಿ ತಮ್ಮ ಅಭ್ಯರ್ಥಿಗೆ ನಿಗದಿಪಡಿಸಿದ್ದ 45 ಮತಗಳ ಬದಲು 48 ಮತಗಳನ್ನು ನೀಡಿತು, ಉಳಿದ 16 ಮತಗಳು ಜೆಡಿಎಸ್ ಅಭ್ಯರ್ಥಿಗೆ ಲಭಿಸಿತು. ಬಿಜೆಪಿಯ ಹೆಚ್ಚುವರಿ 21 ಹಾಗೂ ತಮ್ಮ ಪಕ್ಷದ 19 ಮತಗಳು ಒಗ್ಗೂಡಿಸಿ, ಪಕ್ಷೇತರರು ಹಾಗೂ ಕಾಂಗ್ರೆಸ್‌ನ ಕೆಲವರಿಂದ ಅಡ್ಡ ಮತದಾನ ಮಾಡಿಸಿ ಜಯ ಗಳಿಸುವ ಇರಾದೆ ಕುಪೇಂದ್ರ ರೆಡ್ಡಿ ಅವರಿಗೆ ಕೈಗೂಡಲಿಲ್ಲ.

ಜೆಡಿಎಸ್‌ನ ಮೂರನೇ ಎರಡು ಭಾಗದಷ್ಟು ಶಾಸಕರನ್ನು ಸೆಳೆಯುತ್ತೇವೆ ಎಂದಿದ್ದ ಕಾಂಗ್ರೆಸ್‌ಗೆ ಆ ಪಕ್ಷದ ಒಂದೂ ಮತವನ್ನು ಪಡೆಯಲಾಗಲಿಲ್ಲ, ಆ ಪಕ್ಷದ ಶಾಸಕರೆಲ್ಲರೂ ಒಗ್ಗಟ್ಟನ್ನು ಪ್ರದರ್ಶಿಸಿದರು. ಇನ್ನು ಕಾಂಗ್ರೆಸ್ ತನ್ನ ಅಭ್ಯರ್ಥಿಗಳನ್ನು ಹಿಡಿದಿಟ್ಟುಕೊಂಡು ಪಕ್ಷೇತರ 4 ಹಾಗೂ ಬಿಜೆಪಿಯ ಒಂದು ಮತ ಗಳಿಸಿ ಪ್ರತಿಪಕ್ಷಗಳ ಲೆಕ್ಕಾಚಾರವನ್ನೇ ಬುಡಮೇಲು ಮಾಡಿತು. ಕೇಂದ್ರ ಬಿಜೆಪಿ ಬಲದಿಂದ ತಮ್ಮ ಸದಸ್ಯರ ಅಡ್ಡ ಮತದಾನ ಆಗಬಹುದೆಂಬ ಭೀತಿಯಿಂದ ಕಾಂಗ್ರೆಸ್ ಮುಖಂಡರು ಕಳೆದ ಒಂದು ವಾರದಿಂದಲೇ ತಮ್ಮವರನ್ನು ಹಿಡಿದಿಟ್ಟುಕೊಳ್ಳುವ ಹಾಗೂ ಪಕ್ಷೇತರರು ಮತ್ತು ಬಿಜೆಪಿ ಮತಗಳನ್ನು ಸೆಳೆಯುವ ಕಾರ್ಯತಂತ್ರ ರೂಪಿಸಿದ್ದರು. ಸ್ವತಃ ಮುಖ್ಯಮಂತ್ರಿ, ಉಪಮುಖ್ಯಮಂತ್ರಿ ಸೇರಿದಂತೆ ಕೆಲವು ಸಚಿವರು, ಬಿಜೆಪಿಯ ಹಾಗೂ ಜೆಡಿಎಸ್‌ನ ಕೆಲವು ಶಾಸಕರನ್ನು ಸೆಳೆಯಲು ತೆರೆಮರೆಯ ಪ್ರಯತ್ನ ಮಾಡಿದ್ದರು. ಬಿಜೆಪಿಯತ್ತ ಮುಖ ಮಾಡಿದ್ದ ಗಾಲಿ ಜನಾರ್ದನ ರೆಡ್ಡಿ ಅವರನ್ನು ಕಡೆ ಗಳಿಗೆಯಲ್ಲಿ ತಮ್ಮೆಡೆಗೆ ಸೆಳೆದುಕೊಂಡ ಕಾಂಗ್ರೆಸ್ ತಮ್ಮ ಅಭ್ಯರ್ಥಿಗಳ ಗೆಲುವಿಗೆ ನಿನ್ನೆಯೇ ಎಲ್ಲಾ ಲೆಕ್ಕಾಚಾರ, ಗುಣಾಕಾರ ಹಾಕಿತ್ತು. ತಮ್ಮ ಸದಸ್ಯರನ್ನು ಒಗ್ಗಟ್ಟಿನಿಂದ ಇಟ್ಟುಕೊಳ್ಳುವ ಉದ್ದೇಶದಿಂದ ಕಾಂಗ್ರೆಸ್ ನಾಯಕರು ನಿನ್ನೆಯೇ ಪಂಚತಾರಾ ಹೋಟೆಲ್ ಸೇರಿಕೊಂಡಿದ್ದರು. ಹೋಟೆಲ್‌ನಿಂದ ಇಂದು ನೇರವಾಗಿ ಮತಗಟ್ಟೆಗೆ ಧಾವಿಸಿದ ಕಾಂಗ್ರೆಸ್ ಶಾಸಕರು ತಮ್ಮ ಅಭ್ಯರ್ಥಿಗಳಿಗೆ ಮತ ಚಲಾಯಿಸಿದರು.

ಮೈಸೂರು ಕಾಂಗ್ರೆಸ್ ಕಚೇರಿಯಲ್ಲಿ ಮೀನುಗಾರರ ಸಮಾವೇಶ

ಮೀನುಗಾರರ ಏಳಿಗೆಗೆ ಕಾಂಗ್ರೆಸ್ ಸರ್ಕಾರದಿಂದ ಹಲವು ಯೋಜನೆ

● ಪ್ರದೇಶ ಮೀನುಗಾರರ ಘಟಕದ ಅಧ್ಯಕ್ಷ ಮಂಜುನಾಥ್ ವಿವರಣೆ
● ಕೇಂದ್ರ ಸರ್ಕಾರದಿಂದ ಒಂದೇ ಒಂದು ಯೋಜನೆಯೂ ತಲುಪಿಲ್ಲ



ಮೈಸೂರಿನ ಕಾಂಗ್ರೆಸ್ ಕಚೇರಿಯಲ್ಲಿ ಮಂಗಳವಾರ ಆಯೋಜಿಸಿದ್ದ ಜಿಲ್ಲಾ ಮೀನುಗಾರರ ಸಮಾವೇಶ ಹಾಗೂ ನೂತನ ಅಧ್ಯಕ್ಷರ ಪದಗ್ರಹಣ ಕಾರ್ಯಕ್ರಮದಲ್ಲಿ ನೂತನ ಪದಾಧಿಕಾರಿಗಳು ಅಧಿಕಾರ ಸ್ವೀಕರಿಸಿದರು.

ಮೈಸೂರು,ಫೆ.27(ಎಂಟಿವೈ)– ಬಡವರು, ಶೋಷಿತರು ಹಾಗೂ ಕಾಯಕ ಸಮುದಾಯಗಳ ಬಗ್ಗೆ ಕಾಳಜಿ ಹೊಂದಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮೀನುಗಾರರ ಏಳಿಗೆಗಾಗಿ ಹಲವು ಯೋಜನೆಗಳನ್ನು ಜಾರಿಗೊಳಿಸಿದ್ದಾರೆ ಎಂದು ಕರ್ನಾಟಕ ಪ್ರದೇಶ ಸಮಿತಿ ಮೀನುಗಾರರ ಘಟಕದ ಅಧ್ಯಕ್ಷ ಮಂಜುನಾಥ್ ಸುಣಗಾರ್ ತಿಳಿಸಿದ್ದಾರೆ.

ಮೈಸೂರಿನ ಕಾಂಗ್ರೆಸ್ ಕಚೇರಿಯಲ್ಲಿ ಜಿಲ್ಲಾ ಗ್ರಾಮಾಂತರ ಕಾಂಗ್ರೆಸ್ ಸಮಿತಿ, ಮೀನುಗಾರರ ಕಾಂಗ್ರೆಸ್ ಘಟಕದ ವತಿಯಿಂದ ಮಂಗಳವಾರ ಆಯೋಜಿಸಿದ್ದ ಜಿಲ್ಲಾ ಮೀನುಗಾರರ ಸಮಾವೇಶ ಹಾಗೂ ನೂತನ ಅಧ್ಯಕ್ಷರ ಪದಗ್ರಹಣ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಮೀನುಗಾರರ ಮೇಲೆ ಬಹಳ ಪ್ರೀತಿ ಇದೆ. ಹಾಗಾಗಿ ಈ ಬಾರಿಯ ಬಜೆಟ್‌ನಲ್ಲಿ ಹಲವು ಕೊಡುಗೆಗಳನ್ನು ನೀಡಿದ್ದಾರೆ. ಮುಖ್ಯಮಂತ್ರಿಯಾದ ನಂತರ ಅಂಬಿಗರ ಚೌಡಯ್ಯ, ಒಳನಾಡು ಮೀನುಗಾರರ ನಿಗಮ ಸ್ಥಾಪನೆ ಮಾಡಿ ಒಳನಾಡು ಅಭಿವೃದ್ಧಿಗೆ ಕಾರಣರಾಗಿದ್ದಾರೆ. ಮೀನುಗಾರರ ಆರ್ಥಿಕ ಸಂವರ್ಧನೆಗೆ ಕಾರ್ಯಕ್ರಮ ಜಾರಿಗೊಳಿಸಿದ್ದಾರೆ ಎಂದರು.

ಮೀನುಗಾರರ ಸಮುದಾಯ ಅತ್ಯಂತ ಶೋಷಿತ ಸಮುದಾಯ. ಕಾಯಕ ಸಮುದಾಯವೂ ಹೌದು. ನಿತ್ಯ ನೀರಿನ ಜೊತೆ ಒಡನಾಟ ಇರುವುದರಿಂದ ನಮ್ಮನ್ನು ಗಂಗೆಯ ಮಕ್ಕಳು ಎಂದು ಕರೆಯುತ್ತಾರೆ. ಶ್ರಮಜೀವಿಗಳಲ್ಲೇ ಅತ್ಯಂತ ಶ್ರಮಜೀವಿಗಳು ಮೀನುಗಾರರು ಎಂದು ಹೇಳಿದರು.

ಪ್ರಪಂಚದಲ್ಲಿ ನೀರಿನ ನಂತರ ಜಗತ್ತು ಉದಯಿಸಿತು. ಹಾಗಾಗಿ ಜಗತ್ತಿಗೆ ಅಂಬಿಗರು ಮೊದಲಿಗರು ಎನ್ನುವರು. ಅಂಬಿಗರು ಎಂದರೆ ನಂಬಿಗರು ಎಂದು ಜಗತ್ತು ಹೇಳುತ್ತದೆ. ಆದರೆ ಇಂದಿನ ಬದಲಾದ ಜಗತ್ತಿನಲ್ಲಿ ಮೀನುಗಾರಿಕೆ ಬಹಳ ಕಷ್ಟವಾಗಿದೆ. ಮೂಲ ಕಸುಬು ನಶಿಸಿಹೋಗುತ್ತಿದೆ. ಯಂತ್ರಗಳ ಮೂಲಕ ಮೀನು ಶಿಕಾರಿ ಮಾಡಲಾಗುತ್ತಿದೆ ಎಂದು ಬೇಸರಿಸಿದರು.

ಮಹಿಳಾ ಮೀನುಗಾರರಿಗೆ 50 ಸಾವಿರ ರೂ. ಬಡ್ಡಿ ರಹಿತ ಸಾಲವನ್ನು 3 ಲಕ್ಷಕ್ಕೆ ಏರಿಕೆ ಮಾಡಲಾಗಿದೆ. ಮೀನುಗಾರರ ಮಕ್ಕಳಿಗೆ ವಿದ್ಯಾರ್ಥಿ ವೇತನ, 10 ಸಾವಿರ ಮನೆ ನಿರ್ಮಾಣ ಘೋಷಿಸಿದ್ದಾರೆ. ಸರ್ಕಾರ ನೀಡಿರುವ ಸವಲತ್ತುಗಳನ್ನು ಪ್ರತಿಯೊಬ್ಬ ಮೀನುಗಾರರಿಗೆ ತಲುಪಿಸಬೇಕು. ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಕೋಮುವಾದವನ್ನು ಓಡಿಸುವ ಕೆಲಸ ನಮ್ಮ ಜನಾಂಗದಿಂದಲೇ ಶುರು ಆಗಬೇಕು. ಈ ಹತ್ತು ವರ್ಷಗಳಲ್ಲಿ ಕೇಂದ್ರದ ಮೋದಿ ಸರ್ಕಾರದ ಒಂದೇ ಒಂದು ಯೋಜನೆ ಅನುಷ್ಠಾನಕ್ಕೆ ಬಂದಿಲ್ಲ. ಬಿಜೆಪಿಯವರು ಮಂದಿರ ರಾಜಕಾರಣ ಮಾಡಲು ಮುಂದಾಗಿದ್ದಾರೆ. ಅದು ನಡೆಯುವುದಿಲ್ಲ ಎಂದು ಕಿಡಿಕಾರಿದರು.

ಮೈಸೂರು ಜಿಲ್ಲಾ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಡಾ.ಬಿ.ಜೆ.ವಿಜಯ್‌ಕುಮಾರ್ ಮಾತನಾಡಿ, ಮೀನು ಹಿಡಿಯಲು ಜಾತಿ ಇಲ್ಲ. ಎಲ್ಲ ಸಮುದಾಯದವರು ಮೀನುಗಾರಿಕೆ ಮಾಡುತ್ತಾರೆ. ಸಿದ್ದರಾಮಯ್ಯ ಸರ್ಕಾರ ತುಳಿತಕ್ಕೆ ಒಳಗಾದವರನ್ನು ಸಮಾಜದ ಮುಖ್ಯವಾಹಿನಿಗೆ ತರಲು 3 ಸಾವಿರ ಕೋಟಿ ರೂ.ಗಳನ್ನು ಘೋಷಣೆ ಮಾಡಿದ್ದಾರೆ. ಮೀನುಗಾರರಿಗೆ ಅಗತ್ಯ ಸೌಲಭ್ಯ ತಲುಪಬೇಕು. ವಿಶ್ವದಲ್ಲಿ ಭಾರತ ಮೀನುಗಾರಿಕೆ 3ನೇ ಸ್ಥಾನದಲ್ಲಿ ಇದೆ. ಈ ನಿಟ್ಟಿನಲ್ಲಿ ಮೀನುಗಾರರಿಗೆ ರಾಜ್ಯ ಸರ್ಕಾರ ನೆರವಾಗಿದೆ ಎಂದರು.

ಕಾರ್ಯಕ್ರಮದಲ್ಲಿ ಮೀನುಗಾರರ ಬೇಡಿಕೆಗಳನ್ನು ರಾಜ್ಯ ಅಧ್ಯಕ್ಷ ಮಂಜುನಾಥ್ ಎಸ್.ಸುಣಗಾರ್ ಅವರಿಗೆ ಹಸ್ತಾಂತರಿಸಿದರು. ಜಿಲ್ಲಾ ಮೀನುಗಾರರ ಘಟಕದ ಅಧ್ಯಕ್ಷರಾಗಿ ರಾಮನಹಳ್ಳಿ ಎಸ್.ಸಿದ್ದಯ್ಯ ಅಧಿಕಾರ ಸ್ವೀಕರಿಸಿದರು. ಸಭೆಯಲ್ಲಿ ಕೆಪಿಸಿಸಿ ಸದಸ್ಯರಾದ ಕೆ.ಮರಿಗೌಡ, ಕಾರ್ಯದರ್ಶಿ ಅಶೋಕಪುರಂ ಭಾಸ್ಕರ್, ಮುಖಂಡರಾದ ಶಿವಪ್ರಸಾದ್, ಎಡತಲೆ ಮಂಜುನಾಥ್, ಪ್ರೊ. ಶಿವಕುಮಾರ್, ಯೋಗೇಶ್ ಉಪ್ಪಾರ್, ಶಾಮ್ ಯೋಗೇಶ್, ಸಂತೋಷ್ ಮಳಿಯೂರ್, ಸುನಂದ್ ಕುಮಾರ್, ನಾಗನಹಳ್ಳಿ ಉಮಾಶಂಕರ್, ಜವರೇಗೌಡ, ಕಾರ್ಮಿಕ ಇಲಾಖೆಯ ನಿವೃತ್ತ ಅಧಿಕಾರಿ ನಾಗರಾಜ್, ಜಿಪಂ ಮಾಜಿ ಸದಸ್ಯ ತಲಕಾಡು ಮಂಜುನಾಥ್, ಅರುಣ್ ಕುಮಾರ್, ಶ್ರೀನಿವಾಸ್‌ನಾಯಕ, ಗುರುಸ್ವಾಮಿ, ಮಹದೇವು, ಉದಯಶಂಕರ್, ರಮೇಶ್, ಕಾಟೂರ್ ದೇವರಾಜ್, ರಾಮನಹಳ್ಳಿ ರಘು, ಜಿಂಕ ನಾಯಕ, ರವಿನಾಯ್ಕ, ಸಿದ್ದರಾಜ್ ಭಾಗವಹಿಸಿದ್ದರು.

ಉಸಿರಾಟ ಸಮಸ್ಯೆಯಿಂದ ಬಳಲುತ್ತಿರುವವರಿಗೆ ಎಕ್ಮೋ ಚಿಕಿತ್ಸೆ

ವೆಂಟಿಲೇಟರ್ ಬದಲು ಎಕ್ಮೋ ಮೂಲಕ ರೋಗಿಯ ಜೀವ ಉಳಿಸಿದ ಮೈಸೂರಿನ ಮಣಿಪಾಲ್ ಆಸ್ಪತ್ರೆ ವೈದ್ಯರು



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಮಂಗಳವಾರ ನಡೆದ ಸುದ್ದಿಗೋಷ್ಠಿಯಲ್ಲಿ ಮಣಿಪಾಲ್ ಆಸ್ಪತ್ರೆ ವೈದ್ಯರು ಎಕ್ಮೋ ಸಾಧನದ ಬಗ್ಗೆ ವಿವರಿಸಿದರು.

ಮೈಸೂರು, ಫೆ.27(ಜಿಎ)–ಉಸಿರಾಟದ ಸಮಸ್ಯೆಯಿಂದ ಬಳಲುತ್ತಿರುವವರಿಗೆ ವೆಂಟಿಲೇಟರ್ ಬಳಕೆಯೇ ಅನಿವಾರ್ಯವಲ್ಲ. ಅದನ್ನೂ ಮೀರಿದ ಎಕ್ಮೊ ಎಂಬ ಸಾಧನದಿಂದ ಉಸಿರಾಟ ತೊಂದರೆಯಿಂದ ಪಾರಾಗಿ ನೆಮ್ಮದಿ ಜೀವನ ನಡೆಸಬಹುದಾಗಿದೆ. ತಮ್ಮ ಆಸ್ಪತ್ರೆಯಲ್ಲಿ ಈ ಸಾಧನ ಬಳಸಿ 41 ವರ್ಷ ವಯಸ್ಸಿನ ಮಹಿಳಾ ರೋಗಿಯೊಬ್ಬರ ಜೀವ ಉಳಿಸಲಾಗಿದೆ ಎಂದು ಮಣಿಪಾಲ್ ಆಸ್ಪತ್ರೆಯ ಹಿರಿಯ ತಜ್ಞ ವೈದ್ಯರಾದ ಡಾ.ಉಪೇಂದ್ರ ಶೆಣೈ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರೋಗಿಯೊಬ್ಬರು ಎಚ್1ಎನ್1 ಕಾರಣದಿಂದಾಗಿ ತೀವ್ರ ಜ್ವರ, ಕೆಮ್ಮು ಹಾಗೂ ಉಸಿರಾಟದ ಸಮಸ್ಯೆಯಿಂದ ಬಳಲುತ್ತಿದ್ದರು. ಇವರು ಮತ್ತೊಂದು ಖಾಸಗಿ ಆಸ್ಪತ್ರೆಯಲ್ಲಿ ದಾಖಲಾದ ವೇಳೆ ವೆಂಟಿಲೇಟರ್ ಬಳಸಿ ಚಿಕಿತ್ಸೆ ನೀಡಲಾಗುತ್ತಿತ್ತು. ಆದರೆ ಶ್ವಾಸಕೋಶ ಚೇತರಿಸಿಕೊಳ್ಳದ ಕಾರಣ ಮತ್ತು ರಕ್ತಕ್ಕೆ ಆಮ್ಲಜನಕ ಪೂರೈಸಲು ಸಾಧ್ಯವಾಗದ ಸ್ಥಿತಿ ತಲುಪಿದ್ದ ಕಾರಣ ತಮ್ಮ ಮಣಿಪಾಲ್ ಆಸ್ಪತ್ರೆಗೆ ದಾಖಲಾಗುವಂತೆ ಶಿಫಾರಸು ಮಾಡಿದ್ದರು. ಇವರಿಗೆ ಇಲ್ಲಿ ಎಕ್ಮೋ ಎಂಬ ಸಾಧನದ ಮೂಲಕ ಚಿಕಿತ್ಸೆ ನೀಡಿದ್ದು, ಈಗ ಚೇತರಿಸಿಕೊಂಡಿದ್ದಾರೆ ಎಂದು ತಿಳಿಸಿದರು.

ಆಸ್ಪತ್ರೆ ವೈದ್ಯ ಡಾ.ಲಕ್ಷ್ಮಿ ನರಸಿಂಹನ್ ಮಾತನಾಡಿ, ಈ ನೂತನ ಸಾಧನವು ರೋಗಿಯ ದೇಹಕ್ಕೆ ಅಳವಡಿಸಿರುವ ಕೊಳವೆ ಮೂಲಕ ತಾನು ಆಮ್ಲಜನಕಯುಕ್ತ ರಕ್ತವನ್ನು ಸೇರಿಸುತ್ತದೆ. ಇದರಿಂದಾಗಿ ಶ್ವಾಸಕೋಶ ಸೂಕ್ತವಾಗಿ ಕೆಲಸ ಮಾಡದಿರುವ ರೋಗಿಗೆ ಆಮ್ಲಜನಕಯುಕ್ತ ರಕ್ತ ದೇಹಕ್ಕೆ ಸೇರ್ಪಡೆ ಆಗುತ್ತಿರುವ ಕಾರಣ ಚೇತರಿಕೆ ಸಾಧ್ಯವಾಗುತ್ತದೆ ಎಂದು ವಿವರಿಸಿದರು.

ನಂತರ, ಶ್ವಾಸಕೋಶ ತಜ್ಞ ಡಾ.ಮಹದೇವ್ ಮಾತನಾಡಿ, ಸಾಮಾನ್ಯವಾಗಿ ತಮ್ಮ ಆಸ್ಪತ್ರೆಯಲ್ಲಿಯೂ ಸಹಾ ಶ್ವಾಸಕೋಶದ ಸಮಸ್ಯೆಯಿಂದ ಬಳಲುತ್ತಿರುವವರಿಗೆ ವೆಂಟಿಲೇಟರ್ ಮೂಲಕ ಚಿಕಿತ್ಸೆ ನೀಡಲಾಗುತ್ತದೆ. ಆದರೆ ಶ್ವಾಸಕೋಶ ವೆಂಟಿಲೇಟರ್‌ನಿಂದ ಬರುವ ಆಮ್ಲಜನಕವನ್ನು ರಕ್ತಕ್ಕೆ ಸೇರ್ಪಡೆ ಮಾಡದಷ್ಟು ಅನಾರೋಗ್ಯಕ್ಕೀಡಾಗಿರುವ ವೇಳೆ ಎಕ್ಮೋ ಸಾಧನ ಬಳಸಿ ರೋಗಿಯ ರಕ್ತಕ್ಕೆ ಆಮ್ಲಜನಕ ಮಿಶ್ರಣ ಮಾಡಿ ಪ್ರಾಣ ಉಳಿಸಲಾಗುತ್ತದೆ. ಕ್ರಮೇಣ ರೋಗಿಯ ಶ್ವಾಸಕೋಶದ ಆರೋಗ್ಯ ಸುಧಾರಿಸಲಿದ್ದು, ಬಳಿಕ ಎಕ್ಮೋ ಸಾಧನ ಬಳಕೆ ನಿಲ್ಲಿಸಲಾಗುತ್ತದೆ ಎಂದು ವಿವರಿಸಿದರು.

ನಾಳೆಯಿಂದ ಔಷಧ ವಿಜ್ಞಾನ ವಿದ್ಯಾರ್ಥಿಗಳ ವೈಜ್ಞಾನಿಕ ಸಮ್ಮೇಳನ

25 ಸಂಪನ್ಮೂಲ ವ್ಯಕ್ತಿಗಳು, 750ಕ್ಕೂ ಹೆಚ್ಚು ಪ್ರತಿನಿಧಿಗಳು ಭಾಗಿ



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಮಂಗಳವಾರ ನಡೆದ ಸುದ್ದಿಗೋಷ್ಠಿಯಲ್ಲಿ ಬಿ.ಆರ್.ಪ್ರಶಾಂತ್ ಕುಮಾರ್ ಮಾತನಾಡಿದರು.

ಮೈಸೂರು, ಫೆ.27(ಜಿಎ)–ಮೈಸೂರಿನ ಜೆಎಸ್‌ಎಸ್ ಔಷಧ ವಿಜ್ಞಾನ ಮಹಾವಿದ್ಯಾಲಯದ ವತಿಯಿಂದ ಕಾಲೇಜಿನ ರಾಜೇಂದ್ರ ಸಭಾಂಗಣದಲ್ಲಿ ಫೆ.29ರಿಂದ ಮಾರ್ಚ್ 2ರವರೆಗೆ ಔಷಧ ವಿಜ್ಞಾನ ವಿದ್ಯಾರ್ಥಿಗಳ ವೈಜ್ಞಾನಿಕ ಸಮ್ಮೇಳನ (ಆವಿಷ್ಕಾರ್) ಆಯೋಜಿಸಲಾಗಿದೆ ಎಂದು ಸಮ್ಮೇಳನ ಅಧ್ಯಕ್ಷ ಅತಿಕ್‌ಉಲ್ಲಾ ಷರೀಫ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಫೆ.29ರಂದು ಬೆಳಿಗ್ಗೆ 11 ಗಂಟೆಗೆ ಕಾಲೇಜಿನ ಪ್ರಾಂಶುಪಾಲ ಟಿ.ಎಮ್. ಪ್ರಮೋದ್‌ಕುಮಾರ್ ಅಧ್ಯಕ್ಷತೆಯಲ್ಲಿ ಸಮ್ಮೇಳನದ ಉದ್ಘಾಟನೆ ನಡೆಯಲಿದೆ. ಜೆಎಸ್‌ಎಸ್ ವೈದ್ಯಕೀಯ ಕಾಲೇಜಿನ ಪ್ರಾಂಶುಪಾಲ ಡಾ.ಹೆಚ್.ಬಸವನಗೌಡಪ್ಪ, ಜೆಎಸ್‌ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಸಂಸ್ಥೆ ವಿಭಾಗದ ಡೀನ್ ಪ್ರಶಾಂತ್ ವಿಶ್ವನಾಥ್ ಭಾಗವಹಿಸುವರು ಎಂದು ತಿಳಿಸಿದರು.

ದೇಶದ ವಿವಿಧ ಭಾಗಗಳಿಂದ 25 ಸಂಪನ್ಮೂಲ ವ್ಯಕ್ತಿಗಳು, 750ಕ್ಕೂ ಹೆಚ್ಚು ಪ್ರತಿನಿಧಿಗಳು ಕಾರ್ಯಕ್ರಮದಲ್ಲಿ ಭಾಗವಹಿಸುವರು. ವೈಜ್ಞಾನಿಕ ಕಾರ್ಯಾಗಾರಗಳು, ವೃತ್ತಿ ಮಾತುಕತೆಗಳು, ವಿಜ್ಞಾನ ಚಲನಚಿತ್ರ ಮೌಖಿಕ ಮತ್ತು ಭಿತ್ತಿಚಿತ್ರಗಳ ಪ್ರಸ್ತುತಿ ನಡೆಯಲಿದೆ. ಯುವ ಔಷಧ ತಜ್ಞರು ಮತ್ತು ಸಂಪನ್ಮೂಲ ವ್ಯಕ್ತಿಗಳ ನಡುವೆ ಸಂವಹನ ವೇದಿಕೆಯನ್ನು ಕಾರ್ಯಕ್ರಮ ಒದಗಿಸಲಿದೆ ಎಂದರು. ಸುದ್ದಿಗೋಷ್ಠಿಯಲ್ಲಿ ಕಾಲೇಜಿನ ಸಹ ಪ್ರಾಧ್ಯಾಪಕ ಬಿ.ಆರ್. ಪ್ರಶಾಂತ್ ಕುಮಾರ್, ಸಮ್ಮೇಳನದ ಉಪಾಧ್ಯಕ್ಷ ದೀಕ್ಷಾ ಸಂಘಟನಾ ಕಾರ್ಯದರ್ಶಿ ಪಿ.ಆರ್. ಹೇಮಂತ್ ವಿಕ್ರಂ ಉಪಸ್ಥಿತರಿದ್ದರು.

ಕರ್ನಾಟಕ ಸರ್ಕಾರದ 15 ಲಕ್ಷ ಆರ್ಥಿಕ ನೆರವು ನಮಗೆ ಬೇಡ

ಆನೆ ದಾಳಿಯಲ್ಲಿ ಮೃತಪಟ್ಟ ಕೇರಳದ ಅಜೀಶ್ ಕುಟುಂಬ ನಿರಾಕರಣೆ




ವಯನಾಡು, ಫೆ.27– ಬೇಲೂರಿನ ಮಖ್ನಾ ಕಾಡಾನೆ ತುಳಿದು ಸಾವನ್ನಪ್ಪಿದ ಕೇರಳದ ಪದಮಲ ಮೂಲದ ಅಜೀಶ್ ಅವರ ಕುಟುಂಬವು ಕರ್ನಾಟಕ ಸರ್ಕಾರ ಘೋಷಿಸಿದ 15 ಲಕ್ಷ ರೂಪಾಯಿ ಪರಿಹಾರವನ್ನು ನಿರಾಕರಿಸಿದೆ.

ಕರ್ನಾಟಕ ವಿಧಾನಸಭೆಯಲ್ಲಿ ಪರಿಹಾರದ ಕುರಿತು ಬಿಜೆಪಿ ಗದ್ದಲ ಸೃಷ್ಟಿಸಿದ ನಂತರ ಕುಟುಂಬ ಈ ನಿರ್ಧಾರ ತೆಗೆದುಕೊಂಡಿದೆ. ಅಜೀಶ್ ಅವರ ಕುಟುಂಬವು ಬಿಜೆಪಿಯ ನಡವಳಿಕೆಯನ್ನು ಖಂಡಿಸಿದ್ದು, ಇದು ಅಮಾನವೀಯ ಎಂದು ಬಣ್ಣಿಸಿದೆ.

ಫೆಬ್ರವರಿ 10ರಂದು ಕಾಡಾನೆ ಅಜೀಶ್‌ರನ್ನು ತುಳಿದು ಕೊಂದಿತ್ತು. ಆನೆಗೆ ಕರ್ನಾಟಕ ಸರ್ಕಾರ ರೇಡಿಯೋ ಕಾಲರ್ ಅಳವಡಿಸಿದ್ದರಿಂದ ಕರ್ನಾಟಕ ಸರ್ಕಾರ ಅಜೀಶ್ ಕುಟುಂಬಕ್ಕೆ ಪರಿಹಾರ ಘೋಷಿಸಿತ್ತು. ಈ ವಿಷಯವಾಗಿ ಬಿಜೆಪಿ ವಿಧಾನಸಭೆಯಲ್ಲಿ ಕೋಲಾಹಲ ಸೃಷ್ಟಿಸಿತ್ತು. ರಾಜ್ಯದ ತೆರಿಗೆ ಹಣ ರಾಹುಲ್ ಗಾಂಧಿ ಕ್ಷೇತ್ರಕ್ಕೆ ಎಂದು ಬಿಜೆಪಿ ನಾಯಕರು ಲೇವಡಿ ಮಾಡಿದ್ದರು. ಇದರಿಂದಾಗಿ ಈ ವಿವಾದದ ಹಣವನ್ನು ಕುಟುಂಬ ನಿರಾಕರಿಸಿದೆ. ವಯನಾಡು ಸಂಸದ ರಾಹುಲ್ ಗಾಂಧಿ ಅವರು ಅಜೀಶ್ ಅವರ ಕುಟುಂಬವನ್ನು ಭೇಟಿ ಮಾಡಿ ಸಾಂತ್ವನ ಹೇಳಿದ್ದರು. ನಂತರ ಕರ್ನಾಟಕ ಮುಖ್ಯಮಂತ್ರಿಗಳೊಂದಿಗೆ ದೂರವಾಣಿ ಮೂಲಕ ಮಾತನಾಡಿ, ಆರ್ಥಿಕ ನೆರವು ನೀಡುವಂತೆ ಮನವಿ ಮಾಡಿದ ನಂತರ ಸಚಿವ ಈಶ್ವರ್ ಖಂಡ್ರೆ ಅವರು 15 ಲಕ್ಷ ರೂಪಾಯಿ ಆರ್ಥಿಕ ನೆರವು ಘೋಷಿಸಿದ್ದರು.

ಹಿರಿಯ ಸಂಸದ ಶಫಿಕುರ್ ರೆಹಮಾನ್ ಬರ್ಕ್ ನಿಧನ



ನವದೆಹಲಿ, ಫೆ.27– ಸಂಸತ್‌ನ ಅತೀ ಹಿರಿಯ ಸಂಸದ ಶಫಿಕುರ್ ರೆಹಮಾನ್ ಬರ್ಕ್ (94) ಇಂದು ನಿಧನರಾದರು. ಕೆಲವು ಸಮಯದಿಂದ ಬರ್ಕ್ ಅನಾರೋಗ್ಯಕ್ಕೀಡಾಗಿ ಚಿಕಿತ್ಸೆ ಪಡೆಯುತ್ತಿದ್ದರು. ಸಮಾಜವಾದಿ ಪಕ್ಷ ತನ್ನ ನಾಯಕನ ಸಾವಿಗೆ ಸಂತಾಪ ಸೂಚಿಸಿದೆ.

4 ಬಾರಿ ಸಂಸದರಾಗಿರುವ ಬರ್ಕ್, ಶಂಬಲ್ ಕ್ಷೇತ್ರದಿಂದ 2019ರಲ್ಲಿ ಸಂಸತ್‌ಗೆ ಆಯ್ಕೆಯಾಗಿದ್ದರು. ಮೊರದಾಬಾದ್‌ನಿಂದ 3 ಬಾರಿ ಹಾಗೂ ಶಂಭಲ್‌ನಿಂದ 2 ಬಾರಿ ಸಂಸತ್‌ಗೆ ಬರ್ಕ್ ಆಯ್ಕೆಯಾಗಿದ್ದರು.ಸಮಾಜವಾದಿ ಪಕ್ಷ ಹಿರಿಯ ನಾಯಕ, ಸಂಸದ ಶಫಿಕುರ್ ರೆಹಮಾನ್ ಬರ್ಕ್ ಸಹೇಬ್ ನಿಧನದಿಂದ ದುಃಖವಾಗಿದೆ. ಅವರ ಆತ್ಮಕ್ಕೆ ಶಾಂತಿ ಸಿಗಲಿ. ಈ ನೋವನ್ನು ಭರಿಸುವ ಶಕ್ತಿ ಕುಟುಂಬ ಸದಸ್ಯರಿಗೆ ಸಿಗಲಿ ಎಂದು ಎಸ್‌ಪಿ ಎಕ್ಸ್‌ನಲ್ಲಿ ಪೋಸ್ಟ್ ಮಾಡಿದೆ.

ಬೇಡಿಕೆ ಈಡೇರಿಕೆಗೆ ಆಗ್ರಹಿಸಿ ರೈತರಿಂದ ಮೈಸೂರು–ಬನ್ನೂರು ರಸ್ತೆ ಬಂದ್

ಟ್ರ್ಯಾಕ್ಟರ್ ಸೀಜ್ ಮಾಡಿದ ಪೋಲೀಸರೊಂದಿಗೆ ವಾಗ್ವಾದ, ಸಂಚಾರ ಅಸ್ತವ್ಯಸ್ತ, ಪ್ರಯಾಣಿಕರ ಪರದಾಟ



ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿ ರೈತರು ಮೈಸೂರು–ಬನ್ನೂರು ರಸ್ತೆ ಬಂದ್ ಮಾಡಿ ಮಂಗಳವಾರ ಪ್ರತಿಭಟನೆ ನಡೆಸಿದರು.

ಮೈಸೂರು, ಫೆ.27(ಜಿಎ)– ಕೇಂದ್ರ ಸರ್ಕಾರವು ಎಂ.ಎಸ್.ಸ್ವಾಮಿನಾಥನ್ ಆಯೋಗದ ಶಿಫಾರಸ್ಸಿನಂತೆ ಕನಿಷ್ಠ ಬೆಂಬಲ ಬೆಲೆ ನಿಗದಿ ಮಾಡಿ ಶಾಸನ ಬದ್ಧಗೊಳಿಸಬೇಕು ಹಾಗೂ ರಾಜ್ಯ ಸರ್ಕಾರವು ಕೃಷಿ ಸಾಲ ಮನ್ನಾ ಮಾಡಬೇಕು ಎಂಬ ಬೇಡಿಕೆ ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಮೈಸೂರು–ಬನ್ನೂರು ರಸ್ತೆ ಹೊಸ ಜಿಲ್ಲಾಧಿಕಾರಿಗಳ ಕಚೇರಿ ಮುಂಭಾಗ ಬಂದ್ ಮಾಡಿ ಸಾಮೂಹಿಕ ನಾಯಕತ್ವದಲ್ಲಿ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆಯಿಂದ ಮಂಗಳವಾರ ಪ್ರತಿಭಟನೆ ನಡೆಸಲಾಯಿತು.

ರಾಜ್ಯಾದ್ಯಂತ ಗ್ರಾಮೀಣ ಬಂದ್‌ಗೆ ಕರೆ ನೀಡಿದ್ದ ಸಾಮೂಹಿಕ ನಾಯಕತ್ವದ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ವತಿಯಿಂದ ರೈತರ ಪರಿಸ್ಥಿತಿ ಬಗ್ಗೆ ಜನರಲ್ಲಿ ಅರಿವು ಮೂಡಿಸಲು ವ್ಯವಹಾರಿಕ ಚಟುವಟಿಕೆಗಳನ್ನು ಸ್ಥಗಿತಗೊಳಿಸಿ ರೈತರೆಲ್ಲರೂ ನಗರದ ನಜರ್‌ಬಾದ್ ಪೊಲೀಸ್ ಠಾಣೆ ಮುಂಭಾಗದಿಂದ ಟ್ರ್ಯಾಕ್ಟರ್‌ಗಳ ಮೂಲಕ ಜಿಲ್ಲಾಧಿಕಾರಿ ಕಚೇರಿಗೆ ತೆರಳಿ ಪ್ರತಿಭಟನೆ ಮಾಡಲು ಮುಂದಾದರು. ಈ ವೇಳೆ ಪೊಲೀಸ್ ಇಲಾಖೆ ಅನುಮತಿ ಇಲ್ಲದ ಕಾರಣ ಪೊಲೀಸರು ಟ್ರ್ಯಾಕ್ಟರ್‌ಗಳನ್ನು ವಶಪಡಿಸಿಕೊಂಡರು. ಈ ಸಂದರ್ಭದಲ್ಲಿ ಪೊಲೀಸರು ಮತ್ತು ರೈತ ಮುಖಂಡರ ನಡುವೆ ಮಾತಿನ ಚಕಮಕಿ ನಡೆಯಿತು.

ಟ್ರ್ಯಾಕ್ಟರ್‌ಗಳಿಂದ ಸಂಚಾರಕ್ಕೆ ಸಮಸ್ಯೆ ಉಂಟಾಗುತ್ತದೆ ಎಂದು ತಿಳಿಸಿದ ಪೊಲೀಸರು ಎರಡು ಟ್ರ್ಯಾಕ್ಟರ್‌ಗಳನ್ನು ಮಾತ್ರ ಹಿಂದಿರುಗಿಸಲಾಯಿತು. ರೈತರು ಜಿಲ್ಲಾಧಿಕಾರಿಗಳ ಕಚೇರಿ ಆವರಣದಲ್ಲಿ ಪ್ರತಿಭಟನೆ ಮಾಡಿ ಮನವಿ ನೀಡಲು ತೆರಳಿದ್ದಾಗ ಅವರಿಗೆ ಪ್ರತಿಭಟನೆ ಮಾಡಲು ಸೂಕ್ತ ಸ್ಥಳ ನಿಯೋಜಿಸದ ಕಾರಣಕ್ಕೆ ಬೇಸರಗೊಂಡ ರೈತರು ಮೈಸೂರು–ಬನ್ನೂರು ಮುಖ್ಯ ರಸ್ತೆಯನ್ನು ಬಂದ್ ಮಾಡಿ ರಸ್ತೆಯಲ್ಲಿ ಕುಳಿತು ಪ್ರತಿಭಟನೆ ಮಾಡಿದರು. ಈ ವೇಳೆ ಕೆಲಕಾಲ ಟ್ರಾಫಿಕ್ ಜಾಮ್ ಆಗಿ ವಾಹನ ಸವಾರರು ಪರದಾಡುವ ಸ್ಥಿತಿ ನಿರ್ಮಾಣವಾಯಿತು.

ನಂತರ ಪ್ರತಿಭಟನಾ ಸ್ಥಳಕ್ಕೆ ಆಗಮಿಸಿದ ಎಡಿಸಿ ಅವರಿಗೆ ವಿವಿಧ ಬೇಡಿಕೆಗಳ ಹೊತ್ತು ದೆಹಲಿಯತ್ತ ಸಾಗುತ್ತಿರುವ ರೈತರ ಮೇಲೆ ಕೇಂದ್ರ ಸರ್ಕಾರ ನಡೆಸುತ್ತಿರುವ ದೌರ್ಜನ್ಯ ನಿಲ್ಲಬೇಕು. ಅವರ ನ್ಯಾಯಯುತ ಬೇಡಿಕೆ ಈಡೇರಬೇಕು. ಕೃಷಿ ಕಾಯ್ದೆ ಹಿಂಪಡೆಯುವಂತೆ ರೈತರು ನಡೆಸಿದ ಹೋರಾಟದ ವೇಳೆ ಕೇಂದ್ರ ನೀಡಿದ್ದ ವಾಗ್ದಾನಗಳನ್ನು ಮರೆತಿದ್ದು, ರೈತರನ್ನು ವಂಚಿಸುವ ನಡೆಯನ್ನು ಕೈಬಿಡಬೇಕು. ರಾಜ್ಯ ಸರ್ಕಾರವೂ ಬೆಂಬಲ ಬೆಲೆ, ಸಾಲ ಮನ್ನಾ ವಿಚಾರದಲ್ಲಿ ರೈತಪರವಾಗಿ ಕ್ರಮವಹಿಸಬೇಕು ಎಂದು ಆಗ್ರಹಿಸಿದರು.

ಈ ಬಾರಿ ಅಬುದಾಬಿಯಲ್ಲಿ ನಡೆಯಲಿರುವ ವಿಶ್ವ ವ್ಯಾಪಾರ ಸಂಸ್ಥೆಯ ಶೃಂಗಸಭೆಯಲ್ಲಿ ಭಾರತವು ಅದರೊಂದಿಗಿನ ಒಪ್ಪಂದದಿಂದ ಹೊರಬರಬೇಕು. ಮುಂದುವರಿದ ದೇಶಗಳು ತಮ್ಮಲ್ಲಿನ ಕೃಷಿ ಉತ್ಪನ್ನವನ್ನು ಇಲ್ಲಿ ತಂದು ಮಾರುವ, ನಮ್ಮ ರೈತರನ್ನು ಸಂಕಷ್ಟಕ್ಕೆ ದೂಡುವ ಯೋಜನೆಗಳು ನಮಗೆ ಬೇಡ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಹಿಂದಿನ ಸರ್ಕಾರದ ಭೂ ಸುಧಾರಣಾ ಕಾಯ್ದೆಯನ್ನು ಹಿಂಪಡೆಯಬೇಕು. ರೈತರ ಪಂಪ್‌ಸೆಟ್‌ಗಳಿಗೆ ಸರ್ಕಾರವೇ ಉಚಿತವಾಗಿ ವಿದ್ಯುತ್ ಸಂಪರ್ಕ ನೀಡಬೇಕು. ಜಿಲ್ಲೆಯಲ್ಲಿ ಸಾಗುವಳಿ ಮಾಡುತ್ತಿರುವವರಿಗೆ ಸಾಗುವಳಿ ಪತ್ರ ವಿತರಿಸಬೇಕು. ಜಿಲ್ಲೆಯ ಕೆರೆಗಳ ಒತ್ತುವರಿ ತೆರವುಗೊಳಿಸಲು ಕ್ರಮ ವಹಿಸಬೇಕು. ಭೂಮಿಯ ಫಲವತ್ತತೆ ಉಳಿಸುವ ಕುರಿತ ಯೋಜನೆಗಳನ್ನು ಸರ್ಕಾರ ಜಾರಿಗೊಳಿಸಬೇಕು ಎಂದು ಒತ್ತಾಯಿಸಿದರು.

ರಾಜ್ಯದ 223 ತಾಲೂಕುಗಳು ಬರದಿಂದ ತತ್ತರಿಸಿವೆ. ಹೀಗಾಗಿ ರೈತರ ಸಾಲದ ಮೇಲಿನ ಬಡ್ಡಿಯನ್ನು ಸಂಪೂರ್ಣವಾಗಿ ಮನ್ನಾ ಮಾಡುವ ಕಾರ್ಯವನ್ನು ರಾಜ್ಯ ಸರ್ಕಾರ ಮಾಡಬೇಕು. ಬರದಿಂದ ಕಂಗೆಟ್ಟಿರುವ ರೈತ ಸಮುದಾಯಕ್ಕೆ ಈ ರೀತಿಯ ಯೋಜನೆ ವರದಾನವಾಗಲಿದೆ. ಕೇಂದ್ರ ಸರ್ಕಾರವು ಎಂ.ಎಸ್.ಸ್ವಾಮಿನಾಥನ್ ಆಯೋಗದ ಶಿಫಾರಸ್ಸಿನಂತೆ ಕನಿಷ್ಠ ಬೆಂಬಲ ಬೆಲೆ ನಿಗದಿ ಮಾಡಿ ಶಾಸನ ಬದ್ಧಗೊಳಿಸಬೇಕು ಎಂದು ಆಗ್ರಹಿಸಿ ಮನವಿ ಸಲ್ಲಿಸಿ ನಂತರ ರಸ್ತೆ ತಡೆ ಹಿಂಪಡೆದರು.

ಪ್ರತಿಭಟನೆಯಲ್ಲಿ ಪದಾಧಿಕಾರಿಗಳಾದ ಚುಕ್ಕಿ ನಂಜುಂಡಸ್ವಾಮಿ, ಮಂಜುಕಿರಣ್, ವಿದ್ಯಾಸಾಗರ್ ರಾಮೇಗೌಡ, ಸತೀಶ್ ರಾವ್, ಇಮ್ಮಾವು ರಘು, ಶ್ವೇತಾ ಸೇರಿದಂತೆ ನೂರಾರು ರೈತರು ಪಾಲ್ಗೊಂಡಿದ್ದರು.

ಮೈಸೂರು-ಕೊಡಗು ಟಿಕೆಟ್ ನನಗೇ ಸಿಗುತ್ತೆ; ಮತ್ತೆ ಗೆದ್ದೇ ಗೆಲ್ತೇನೆ'

ಸಂಸದ ಪ್ರತಾಪ್ ಸಿಂಹ ಅತೀವ ವಿಶ್ವಾಸ



ಮೈಸೂರು, ಫೆ.27- ಮೈಸೂರು-ಕೊಡಗು ಲೋಕಸಭಾ ಕ್ಷೇತ್ರದ ಬಿಜೆಪಿ ಟಿಕೆಟ್ ಈ ಬಾರಿಯೂ ನನಗೇ ಸಿಗಲಿದೆ ಎಂದು ಸಂಸದ ಪ್ರತಾಪ್ ಸಿಂಹ ಅಚಲ ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಮೈಸೂರಿನ ಬಿಜೆಪಿ ಕಚೇರಿಯಲ್ಲಿ ಮಂಗಳವಾರ ಮಾಧ್ಯಮಗಳಿಗೆ ಪ್ರತಿಕ್ರಿಯಿಸಿ, ಮೈಸೂರು-ಕೊಡಗು ಕ್ಷೇತ್ರದ ಟಿಕೆಟ್ ಹಂಚಿಕೆ ಕುರಿತು ಊಹಾಪೋಹ ಹರಡಲಾಗುತ್ತಿದೆ. ಆದರೆ ಈ ಬಾರಿಯೂ ನನಗೇ ಟಿಕೆಟ್ ಸಿಗಲಿದ್ದು, ಮೂರನೇ ಬಾರಿ ಗೆಲುವು ಸಾಧಿಸುತ್ತೇನೆ ಎಂದರು.

ನಾನು ಮೊದಲ ಬಾರಿ ಬಂದಾಗ ನನ್ನ ಜೊತೆ ಯಾರೂ ಇರಲಿಲ್ಲ. ಪತ್ರಕರ್ತನಾಗಿ ಬಂದ ನನ್ನನ್ನು ಮೈಸೂರು ಹಾಗೂ ಕೊಡಗಿನ ಜನರು ಎರಡು ಬಾರಿ ಆಶೀರ್ವದಿಸಿ, ಗೆಲ್ಲಿಸಿದ್ದಾರೆ. ಈಗ ಅಪಾರ ಸಂಖ್ಯೆಯ ನಾಯಕರು, ಕಾರ್ಯಕರ್ತರ ಶಕ್ತಿ ಇದೆ. ಕಳೆದ ಹತ್ತು ವರ್ಷಗಳ ಅವಧಿಯಲ್ಲಿ ಮಾಡಿರುವ ಅಭಿವೃದ್ಧಿ ಕಾರ್ಯಗಳನ್ನು ತಿಳಿದಿರುವ ಜನ ಚುನಾವಣೆಯಲ್ಲಿ ನನ್ನ ಕೈ ಹಿಡಿಯಲಿದ್ದಾರೆ. ಪ್ರಧಾನಿ ನರೇಂದ್ರ ಮೋದಿಯವರು ನನ್ನ ಅಭಿವೃದ್ಧಿ ಕಾರ್ಯಗಳನ್ನು ಮೆಚ್ಚಿದ್ದಾರೆ. ವರಿಷ್ಠರ ಆಶೀರ್ವಾದವಿದೆ ಎಂದು ವಿಶ್ವಾಸದಿಂದ ನುಡಿದರು.

ಮೈತ್ರಿ ಟಿಕೆಟ್ ಹಂಚಿಕೆ ಬಗ್ಗೆ ಪ್ರತಿಕ್ರಿಯಿಸಿ, ಬಿಜೆಪಿ-ಜೆಡಿಎಸ್ ನಡುವೆ ಟಿಕೆಟ್ ಹಂಚಿಕೆ ಮಾತುಕತೆ ಯಾವಾಗ ಅಂತ್ಯಗೊಳ್ಳಲಿದೆ ಎನ್ನುವುದು ಗೊತ್ತಿಲ್ಲ. ಈ ಬಗ್ಗೆ ಪಕ್ಷದ ಹಿರಿಯ ನಾಯಕರು ತೀರ್ಮಾನ ಕೈಗೊಳ್ಳಲಿದ್ದಾರೆ ಎಂದು ಹೇಳಿದರು.

ಸೀವೇಜ್ ಫಾರಂನಲ್ಲಿ ಬಿದ್ದ ಬೆಂಕಿ ಶಮನ



ಮೈಸೂರು, ಫೆ.27(ಎಸ್‌ಬಿಡಿ)- ಮೈಸೂರಿನ ವಿದ್ಯಾರಣ್ಯಪುರಂ ಸೀವೇಜ್ ಫಾರಂನಲ್ಲಿ ವ್ಯಾಪಿಸುತ್ತಿದ್ದ ಬೆಂಕಿಯನ್ನು ನಗರಪಾಲಿಕೆ ನೌಕರರೇ ನಂದಿಸಿದ್ದಾರೆ.

ಸೀವೇಜ್ ಫಾರಂ ಆವರಣದ ಕುರುಚಲು ಹುಲ್ಲು, ಗಿಡಗಂಟಿಗೆ ಮೂರ್‍ನಾಲ್ಕು ದಿನಗಳ ಹಿಂದೆ ಆಕಸ್ಮಿಕ ಬೆಂಕಿ ತಗುಲಿ, ಗಾಳಿಯಿಂದಾಗಿ ನಿಧಾನವಾಗಿ ತ್ಯಾಜ್ಯದ ರಾಶಿಗೆ ವ್ಯಾಪಿಸುತ್ತಿತ್ತು. ಆ ಸ್ಥಳಕ್ಕೆ ಅಗ್ನಿಶಾಮಕ ವಾಹನ ತೆರಳಲು ಸಾಧ್ಯವಾಗದ ಕಾರಣ ಪಾಲಿಕೆ ನೌಕರರೇ ಟ್ಯಾಂಕರ್‌ಗಳ ಮೂಲಕ ಬೆಂಕಿ ನಂದಿಸುವ ಕಾರ್ಯ ಆರಂಭಿಸಿದ್ದರು. ನಿರಂತರ ಪ್ರಯತ್ನದಿಂದಾಗಿ ಮಂಗಳವಾರ ಬೆಂಕಿಯನ್ನು ನಂದಿಸುವಲ್ಲಿ ಯಶಸ್ವಿಯಾಗಿದ್ದಾರೆ. ಬೇಸಿಗೆ ಬಂತೆಂದರೆ ಇಲ್ಲಿ ಸಣ್ಣ ಪ್ರಮಾಣದ ಬೆಂಕಿ ಅವಘಡಗಳು ಘಟಿಸುತ್ತಲೇ ಇರುತ್ತವೆ. ತ್ಯಾಜ್ಯದ ರಾಶಿಗೆ ಬೆಂಕಿ ಜ್ವಾಲೆ ವ್ಯಾಪಿಸಿದರೆ ಅಕ್ಕಪಕ್ಕದ ಬಡಾವಣೆಗಳಿಗೆ ದಟ್ಟಹೊಗೆ ಆವರಿಸುವುದು ಮಾತ್ರವಲ್ಲದೆ, ಉಸಿರಾಟಕ್ಕೂ ಸಮಸ್ಯೆಯಾಗಬಹುದು. ಈ ನಿಟ್ಟಿನಲ್ಲಿ ನಗರ ಪಾಲಿಕೆ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಸಾರ್ವಜನಿಕರು ಆಗ್ರಹಿಸಿದ್ದಾರೆ.

ಸೋಮಶೇಖರ್ ವಿರುದ್ಧ ಸ್ಪೀಕರ್‌ಗೆ ದೂರು

ಬಿಜೆಪಿ ಕಾರ್ಯಕರ್ತರ ಆಕ್ರೋಶ

ಬೆಂಗಳೂರು: ರಾಜ್ಯಸಭಾ ಚುನಾವಣೆಗೆ ಮತದಾನದ ವೇಳೆ ಮಾಜಿ ಸಚಿವ ಎಸ್.ಟಿ ಸೋಮಶೇಖರ್ ಅವರು ಅಡ್ಡಮತದಾನದ ಮೊರೆ ಹೋಗಿದ್ದಾರೆ.

ಕಾಂಗ್ರೆಸ್ ಅಭ್ಯರ್ಥಿ ಜಿ.ಸಿ.ಚಂದ್ರಶೇಖರ್ ಪರ ಎಸ್‌ಟಿಎಸ್ ಮತ ಚಲಾಯಿಸಿದ್ದಾರೆ. ಹೀಗಾಗಿ ಎಸ್‌ಟಿಎಸ್ ವಿರುದ್ಧ ಕ್ರಮ ಕೈಗೊಳ್ಳಲು ಬಿಜೆಪಿ ನಾಯಕರು ಮುಂದಾಗಿದ್ದಾರೆ. ಈ ಸಂಬಂಧ ಬಿಜೆಪಿ ಮುಖ್ಯ ಸಚೇತಕ ದೊಡ್ಡನಗೌಡ ಪಾಟೀಲ್ ಸುದ್ದಿ ಸಂಸ್ಥೆಗೆ ಪ್ರತಿಕ್ರಿಯಿಸಿ, ಸೋಮಶೇಖರ್ ವಿರುದ್ಧ ಸ್ಪೀಕರ್‌ಗೆ ದೂರು ಕೊಡ್ತೀವಿ. ಶಿಸ್ತು ಕ್ರಮ ತೆಗೆದುಕೊಳ್ಳುತ್ತೇವೆ. ಜೊತೆಗೆ ಶಾಸಕ ಸ್ಥಾನದಿಂದ ಅನರ್ಹಗೊಳಿಸುವಂತೆಯೂ ದೂರಿನಲ್ಲಿ ತಿಳಿಸುವುದಾಗಿ ಹೇಳಿದರು.


ಎಲ್ಲರಿಗೂ ವ್ಹಿಪ್ ಜಾರಿ ಮಾಡಿದ್ದೆವು. ಸೋಮಶೇಖರ್ ವಿರುದ್ಧ ಸ್ಪೀಕರ್ ಗೆ ದೂರು ಕೊಡಲು ನಿರ್ಧಾರ ಮಾಡಿದ್ದೇವೆ. ಅವರಿಗೆ ಖುದ್ದು ಭೇಟಿ ವ್ಹಿಪ್ ಕೊಟ್ ಬಂದಿದ್ದೆ, ವಾಟ್ಸಪ್‌ನಲ್ಲೂ ಕಳಿಸಿದ್ದೆ. ಅವರ ವಿರುದ್ಧ ಶಿಸ್ತು ಕ್ರಮಕ್ಕೆ ನಿರ್ಧಾರ ಆಗಿದೆ. ಶಿವರಾಂ ಹೆಬ್ಬಾರ್‌ಗೂ ವ್ಹಿಪ್ ಕೊಡಲಾಗಿತ್ತು. ಆದರೆ ಅವರೂ ಮತ ಹಾಕಲು ಬಂದಿಲ್ಲ ಎಂದರು.

ಟೈರ್‌ಗೆ ಬೆಂಕಿ ಹಚ್ಚಿ ಪ್ರತಿಭಟನೆ: ಶಾಸಕ ಎಸ್‌ಟಿ ಸೋಮಶೇಖರ್ ಕಾಂಗ್ರೆಸ್‌ಗೆ ಅಡ್ಡಮತದಾನ ಮಾಡಿದ ಹಿನ್ನೆಲೆ ಆಕ್ರೋಶಗೊಂಡ ಬಿಜೆಪಿ ಕಾರ್ಯಕರ್ತರು ಯಶವಂತಪುರದಲ್ಲಿರುವ ಸೋಮಶೇಖರ್ ಕಚೇರಿ ಮುಂದೆ ಪ್ರತಿಭಟನೆ ನಡೆಸಿದ್ದಾರೆ.

ಭಾವಚಿತ್ರಕ್ಕೆ ಮಸಿ ಬಳಿದು ಕಾರ್ಯಕರ್ತರು ಆಕ್ರೋಶ ವ್ಯಕ್ತಪಡಿಸಿದ್ದಾರೆ. ಅಲ್ಲದೇ ನಡುರಸ್ತೆಯಲ್ಲೇ ಟೈರ್‌ಗೆ ಬೆಂಕಿ ಹಚ್ಚಿ ಪ್ರತಿಭಟನೆ ನಡೆಸಿದ್ದು, ಜೆಡಿಎಸ್ ಕಾರ್ಯಕರ್ತರೂ ಪ್ರತಿಭಟನೆಯಲ್ಲಿ ಭಾಗಿಯಾಗಿದ್ದಾರೆ. ಕೆಂಗೇರಿ ಹೊಯ್ಸಳ ಸರ್ಕಲ್‌ನಲ್ಲಿ ಟೈರ್‌ಗೆ ಬೆಂಕಿ ಹಚ್ಚಿ ಪ್ರತಿಭಟನೆ ನಡೆಸಲಾಗಿದೆ. ಬಿಜೆಪಿ ಕಾರ್ಯಕರ್ತರ ಪ್ರತಿಭಟನೆಯಲ್ಲಿ ಜೆಡಿಎಸ್ ಮುಖಂಡ ಮತ್ತು ಯಶವಂತಪುರ ಕ್ಷೇತ್ರದಲ್ಲಿ ಸೋತ ಅಭ್ಯರ್ಥಿ ಜವರಾಯೀಗೌಡ ಭಾಗಿಯಾಗಿದ್ದರು.

ಸೋಮಶೇಖರ್ ಮತ್ತು ಶಿವರಾಂ ಹೆಬ್ಬಾರ್ ವಿರುದ್ಧ ಬಿಜೆಪಿ ನಾಯಕರು ಬುಧವಾರ ಸ್ಪೀಕರ್‌ಗೆ ದೂರು ನೀಡಲಿದ್ದಾರೆ. ಇಬ್ಬರ ಶಾಸಕತ್ವ ಅನರ್ಹತೆ ಮಾಡುವಂತೆ ಬಿಜೆಪಿ ಸ್ಪೀಕರ್‌ಗೆ ದೂರು ಕೊಡಲಿದೆ.

ಉಮೇಶ್ ರೆಡ್ಡಿಗೆ ಪೆರೋಲ್ ನೀಡಲು ಹೈಕೋರ್ಟ್ ನಕಾರ



ಬೆಂಗಳೂರು, ಫೆ.27- ಸರಣಿ ಅತ್ಯಾಚಾರ ಮತ್ತು ಕೊಲೆ ಪ್ರಕರಣದಲ್ಲಿ ಜೀವಾವಧಿ ಶಿಕ್ಷೆಗೆ ಗುರಿಯಾಗಿರುವ ಉಮೇಶ್ ರೆಡ್ಡಿಗೆ ಪೆರೋಲ್ ನೀಡಲು ಹೈಕೋರ್ಟ್ ನಿರಾಕರಿಸಿದೆ. ಬೆಂಗಳೂರಿನ ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಲ್ಲಿರುವ ಉಮೇಶ್ ರೆಡ್ಡಿ, ಅನಾರೋಗ್ಯಕ್ಕೆ ತುತ್ತಾಗಿರುವ ತಾಯಿಯೊಂದಿಗೆ ಇರಲು 30 ದಿನಗಳ ಕಾಲ ಪೆರೋಲ್ ನೀಡುವಂತೆ ಕೋರಿ ಅರ್ಜಿ ಸಲ್ಲಿಸಿದ್ದ.

ಈ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಂ ನಾಗಪ್ರಸನ್ನ ಅವರಿದ್ದ ನ್ಯಾಯ ಪೀಠ ಪೆರೋಲ್ ನೀಡಲು ನಿರಾಕರಿಸಿದೆ.

ಆಸ್ಫಾಕ್ ವಿರುದ್ಧದ ರಾಜಸ್ಥಾನ ಸರ್ಕಾರದ ಪ್ರಕರಣದಲ್ಲಿ ಸುಪ್ರೀಂಕೋರ್ಟ್ ನೀಡಿರುವ ತೀರ್ಪನ್ನು ಉಲ್ಲೇಖಿಸಿರುವ ನ್ಯಾಯಪೀಠ, ಪ್ರಸ್ತುತ ಪ್ರಕರಣದಲ್ಲಿ ಅರ್ಜಿದಾರರಿಗೆ ಪೆರೋಲ್ ನೀಡಬೇಕಾದಲ್ಲಿ ಸಾರ್ವಜನಿಕ ಹಿತಾಸಕ್ತಿ ಗಮನದಲ್ಲಿಟ್ಟುಕೊಳ್ಳಬೇಕು. ಆದ್ದರಿಂದ ಅರ್ಜಿದಾರರಿಗೆ ಪೆರೋಲ್ ನೀಡಿದಲ್ಲಿ ಮತ್ತೆ ಅಪರಾಧ ಪ್ರವೃತ್ತಿಯನ್ನು ಹೊಂದಿರಬಹುದು ಅಥವಾ ಕಾನೂನು ಸುವ್ಯವಸ್ಥೆಗೆ ಅಪಾಯವನ್ನುಂಟು ಮಾಡಬಹುದು ಎಂದು ಅಭಿಪ್ರಾಯಪಟ್ಟಿದೆ. ಅಲ್ಲದೇ, ಜೈಲು ಅಧಿಕಾರಿಗಳ ದಾಖಲೆಗಳನ್ನು ಪರಿಶೀಲಿಸಿರುವ ಸುಪ್ರೀಂಕೋರ್ಟ್ ಅರ್ಜಿದಾರರು ಜೈಲಿನಿಂದ ಹೊರ ಬಂದಲ್ಲಿ ಅವರ ಜೀವಕ್ಕೆ ಅಪಾಯವಿದೆ ಎಂದು ತಿಳಿಸಿದೆ.

ಮನೆ ದುರಸ್ತಿಯಲ್ಲಿದ್ದು ಅದನ್ನು ಸರಿಪಡಿಸುವುದಕ್ಕಾಗಿ ಪೆರೋಲ್ ನೀಡಬೇಕು ಎಂದು ಅರ್ಜಿದಾರು ಮತ್ತೊಂದು ಮನವಿಯನ್ನು ತಿರಸ್ಕರಿಸಿದ ನ್ಯಾಯಪೀಠ, ಅರ್ಜಿದಾರರಿಗೆ ಇಬ್ಬರು ಸಹೋದರರಿದ್ದು, ತಾಯಿಯನ್ನು ನೋಡಿಕೊಳ್ಳುತ್ತಾರೆ. ಮನೆ ದುರಸ್ತಿಯನ್ನೂ ಮಾಡುತ್ತಾರೆ. ಅರ್ಜಿದಾರ ನೀಡಿರುವ ಎರಡೂ ಕಾರಣಗಳೂ ಸಮರ್ಥವಾಗಿಲ್ಲ ಎಂದು ತಿಳಿಸಿ ಅರ್ಜಿಯನ್ನು ವಜಾಗೊಳಿಸಿ, ಆದೇಶಿಸಿದೆ.

1998ರ ಫೆ. 28 ರಂದು ಬೆಂಗಳೂರು ನಗರದಲ್ಲಿ ನಡೆದಿದ್ದ ಮಹಿಳೆ ಅತ್ಯಾಚಾರ ಮತ್ತು ಕೊಲೆ ಪ್ರಕರಣದಲ್ಲಿ ಉಮೇಶ್ ರೆಡ್ಡಿಗೆ ಮರಣ ದಂಡನೆ ಶಿಕ್ಷೆ ವಿಧಿಸಲಾಗಿತ್ತು. ನ್ಯಾಯಾಲಯಕ್ಕೆ ಪೆರೋಲ್ ಸೇರಿದಂತೆ ಯಾವುದೇ ರೀತಿಯ ಅರ್ಜಿ ಸಲ್ಲಿಸಬೇಕು ಎಂದಾದರೆ 30 ವರ್ಷ ಕಾಲ ಶಿಕ್ಷೆ ಅನುಭವಿಸಬೇಕು ಎಂದು ಸುಪ್ರೀಂಕೋರ್ಟ್ ತಿಳಿಸಿತ್ತು.

ಚಿನ್ನಮ್ಮ ನಿಧನ



ನಂಜನಗೂಡು, ಫೆ.27- ಪಟ್ಟಣದ ಶ್ರೀರಾಂಪುರ ಬಡಾವಣೆಯ ದಿವಂಗತ ಟಿ.ಮಂಚಯ್ಯ ಅವರ ಪತ್ನಿ ಚಿನ್ನಮ್ಮ(98) ಮಂಗಳವಾರ ನಿಧನರಾದರು. ಇವರು ಮೂವರು ಪುತ್ರರು, ಮೂವರು ಪುತ್ರಿಯರು ಸೇರಿದಂತೆ ಅಪಾರ ಬಂಧು-ಬಳಗವನ್ನು ಅಗಲಿದ್ದಾರೆ. ಶ್ರೀರಾಂಪುರದ ರುದ್ರಭೂಮಿಯಲ್ಲಿ ಬುಧವಾರ ಅಂತ್ಯಕ್ರಿಯೆ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಭಾರತದಲ್ಲಿ ಭಿಕ್ಷಾಟನೆ ನಿರ್ಮೂಲನೆ ಉದ್ದೇಶಿತ ಕೇಂದ್ರದ 'ಸ್ಮೈಲ್' ಯೋಜನೆಗೆ ಮೈಸೂರು ಸಜ್ಜು

●ದೇಶದ 75 ನಗರಗಳಲ್ಲಿ ಈ ಯೋಜನೆ ಜಾರಿ ●ಭಿಕ್ಷಾಟನೆ ನಿವಾರಿಸಿ ಪುನರ್ವಸತಿ ಕಲ್ಪಿಸುವ ಗುರಿ



ಮೈಸೂರು, ಫೆ.27(ಎಸ್‌ಬಿಡಿ)- ಭಾರತದಲ್ಲಿ ಭಿಕ್ಷಾಟನೆ ನಿರ್ಮೂಲನೆ ಮಾಡುವ ಉದ್ದೇಶದಿಂದ ಕೇಂದ್ರ ಸರ್ಕಾರ ರೂಪಿಸಿರುವ ನೂತನ ಯೋಜನೆಗೆ ಆಯ್ಕೆಯಾಗಿರುವ ರಾಜ್ಯದ ಏಕೈಕ ನಗರ ಮೈಸೂರಿನಲ್ಲಿ ಯೋಜನೆ ಅನುಷ್ಠಾನಕ್ಕೆ ಪ್ರಕ್ರಿಯೆ ಆರಂಭಿಸಲಾಗಿದೆ.

ಭಿಕ್ಷಾಟನೆ ಮಾಡುವವರನ್ನು ಗುರುತಿಸಿ ಅವರನ್ನು ಸಮಾಜದ ಮುಖ್ಯವಾಹಿನಿಗೆ ತರುವ ನಿಟ್ಟಿನಲ್ಲಿ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಸಚಿವಾಲಯದ ನೇತೃತ್ವದಲ್ಲಿ 'ಸಪೋರ್ಟ್ ಫಾರ್ ಮಾರ್ಜನಲೈಸ್ಡ್ ಇಂಡಿವಿಜುವಲ್ ಫಾರ್ ಲೈವ್ಲಿಹುಡ್ ಆಂಡ್ ಎಂಟರ್‌ಪ್ರೈಸಸ್ (SMILE-ಸ್ಮೈಲ್)' ಯೋಜನೆಯನ್ನು ಮೈಸೂರು ಸೇರಿದಂತೆ ದೇಶದ 75 ನಗರಗಳಲ್ಲಿ ಅನುಷ್ಠಾನಗೊಳಿಸಲು ನಿರ್ಧರಿಸಲಾಗಿದೆ.

ಮೈಸೂರಿನಲ್ಲಿ ಯೋಜನೆ ಅನುಷ್ಠಾನಗೊಳಿಸಲು ಬೆಂಗಳೂರಿನ ಕ್ಯಾಡ್ ಎಂಎಸ್ ಟ್ರಸ್ಟ್ ಕ್ರಿಯಾಯೋಜನೆ ವರದಿ ಸಲ್ಲಿಸಿದ್ದು, ಭಿಕ್ಷಾಟನೆ ಮಾಡುವವರ ಗಣತಿದಾರರಿಗೆ ತರಬೇತಿ ನೀಡಿದ ನಂತರ ಸಮೀಕ್ಷೆ ನಡೆಸಿ, ನಗರದಲ್ಲಿ ಭಿಕ್ಷಾಟನೆ ಮಾಡುವವರ ಮಾಹಿತಿ ಸಂಗ್ರಹಿಸಲಾಗುತ್ತದೆ. ಈ ಯೋಜನೆಗೆ ಕೇಂದ್ರ ಸರ್ಕಾರದಿಂದ ಮೈಸೂರು ಮಹಾನಗರ ಪಾಲಿಕೆಗೆ 31 ಲಕ್ಷ ರೂ. ಅನುದಾನ ನೀಡಲಾಗಿದೆ ಎಂದು ತಿಳಿದುಬಂದಿದೆ.

ಮೊದಲು ಸಮೀಕ್ಷೆ: ದೇವಸ್ಥಾನ, ಧಾರ್ಮಿಕ ಕೇಂದ್ರಗಳು, ಪ್ರವಾಸಿ ತಾಣಗಳು, ಬಸ್ ನಿಲ್ದಾಣಗಳು, ರೈಲು ನಿಲ್ದಾಣ, ಮಾರುಕಟ್ಟೆಗಳು, ಆಸ್ಪತ್ರೆಗಳು, ಪ್ರಮುಖ ರಸ್ತೆಗಳು, ಸಿಗ್ನಲ್ ಮತ್ತು ವೃತ್ತಗಳು ಸೇರಿದಂತೆ ಭಿಕ್ಷಾಟನೆ ನಡೆಯುವ ಸ್ಥಳಗಳಲ್ಲಿ ನಗರಪಾಲಿಕೆ ನಿಯೋಜಿಸುವ ಗಣತಿದಾರರು ಬೆಳಗ್ಗೆ 8ರಿಂದ 10, ಮಧ್ಯಾಹ್ನ 12ರಿಂದ 2 ಹಾಗೂ ಸಂಜೆ 5ರಿಂದ ರಾತ್ರಿ 8ರವರೆಗೆ ಮೂರು ಶೆಡ್ಯೂಲ್‌ನಲ್ಲಿ ಕಾರ್ಯ ನಿರ್ವಹಿಸುತ್ತಾರೆ. ಭಿಕ್ಷಾಟನೆ ಮಾಡುವವರ ಮಾಹಿತಿ ಸಂಗ್ರಹಿಸಿ, ಭಿಕ್ಷಾಟನೆ ಕಾನೂನಿನಡಿ ಅಪರಾಧವಾಗಿದ್ದು, ಶಿಕ್ಷೆಗೆ ಗುರಿಯಾಗಬೇಕಾಗುತ್ತದೆ ಎಂಬುದನ್ನು ಮನವರಿಕೆ ಮಾಡಿಕೊಡಲಾಗುತ್ತದೆ.

ಸೂಕ್ತ ಪುನರ್ವಸತಿ: ಸಮೀಕ್ಷೆಯಲ್ಲಿ ಗುರುತಿಸಿದ ಭಿಕ್ಷಾಟನೆ ಮಾಡುವ ಮಹಿಳೆಯರು, ಮಕ್ಕಳು ಹಾಗೂ ಪುರುಷರ ವಿವರವನ್ನು ಸಂಬಂಧಪಟ್ಟ ಅಧಿಕಾರಿಗಳ ಗಮನಕ್ಕೆ ತಂದ ನಂತರ ಅವರಿಗೆ ಪುನರ್ವಸತಿ ಕಲ್ಪಿಸಲಾಗುತ್ತದೆ. ಇದಕ್ಕಾಗಿ ಕ್ಯಾಡ್ ಎಂಎಸ್ ಎನ್‌ಜಿಓ ಸಹಕಾರದೊಂದಿಗೆ ಹೆಬ್ಬಾಳು ಬಡಾವಣೆಯ ಬಸವನಗುಡಿ ಬಳಿ ಪುನರ್ವಸತಿ ಕೇಂದ್ರವನ್ನು ತೆರೆಯಲಾಗಿದೆ ಎಂದು ತಿಳಿದುಬಂದಿದೆ.

ಕೌಶಲ್ಯ ತರಬೇತಿ: ಭಿಕ್ಷಾಟನೆ ಮಾಡುವವರಿಗೆ ಪುನರ್ವಸತಿ ಕಲ್ಪಿಸುವುದು ಹೊಸದೇನಲ್ಲ. ಆದರೆ ಕೇವಲ ಈ ಕ್ರಮದಿಂದ ಭಿಕ್ಷಾಟನೆ ನಿರ್ಮೂಲನೆ ಅಸಾಧ್ಯ ಕೆಲವು ದಿನಗಳ ನಂತರ ಪುನರ್ವಸತಿ ಕೇಂದ್ರಗಳಿಂದ ಮತ್ತೆ ಸಿಗ್ನಲ್‌ಗಳು ಸೇರಿದಂತೆ ಜನದಟ್ಟಣೆ ಸ್ಥಳಗಳಲ್ಲಿ ಭಿಕ್ಷಾಟನೆ ಮಾಡುವುದು ಸಹಜವಾಗಿದೆ. ಹಾಗಾಗಿ ಸ್ಮೈಲ್ ಯೋಜನೆಯಡಿ ತಾತ್ಕಾಲಿಕ ಪುನರ್ವಸತಿ ಜೊತೆಗೆ ಅವರಿಗೆ ಕೌಶಲ್ಯಾಭಿವೃದ್ಧಿ ತರಬೇತಿ ನೀಡುವ ಮೂಲಕ ಹೊಸಜೀವನಕ್ಕೆ ಸಜ್ಜುಗೊಳಿಸುವ ಕಾರ್ಯಕ್ರಮ ರೂಪಿಸಲಾಗಿದೆ. ಊಟ-ವಸತಿಯೊಂದಿಗೆ ಒಂದು ವರ್ಷದವರೆಗೆ ಆಶ್ರಯ ಕಲ್ಪಿಸಲು ಅವಕಾಶವಿದ್ದು, ಈ ಅವಧಿಯಲ್ಲಿ ಅವರಿಗೆ ನಾನಾ ಕೌಶಲ ತರಬೇತಿ ನೀಡುವ ಮೂಲಕ ಸ್ವಯಂ ಉದ್ಯೋಗಕ್ಕೆ ನೆರವು ಒದಗಿಸುವ ಮೂಲಕ ಅವರನ್ನು ಸಮಾಜದ ಮುಖ್ಯವಾಹಿನಿಗೆ ತರುವ ಉದ್ದೇಶ ಈ ಯೋಜನೆಯದ್ದಾಗಿದೆ.

ಕೈ ಜೋಡಿಸಲು ಮನವಿ: ಮೈಸೂರನ್ನು 'ಭಿಕ್ಷಾಟನೆ ಮುಕ್ತ ನಗರ'ವನ್ನಾಗಿಸಲು ಸ್ಮೈಲ್ ಯೋಜನೆಗೆ ಎಲ್ಲರೂ ಕೈ ಜೋಡಿಸುವುದು ಮುಖ್ಯವಾಗಿದೆ. ಗಣತಿದಾರರು ಭಿಕ್ಷಾಟನೆ ಮಾಡುವವರ ಸಮೀಕ್ಷೆ ನಡೆಸುವ ಸಂದರ್ಭದಲ್ಲಿ ಸರ್ಕಾರಿ ಇಲಾಖೆಗಳು ಸೇರಿದಂತೆ ನಾಗರಿಕ ಸಂಘಟನೆಗಳು, ಸಂಸ್ಥೆಗಳು, ಎನ್‌ಜಿಓಗಳು ಹಾಗೂ ಆಸಕ್ತ ಸಾರ್ವಜನಿಕರು ಭಿಕ್ಷಾಟನೆ ಮಾಡುವವರ ಬಗ್ಗೆ ಮಾಹಿತಿ ನೀಡುವ ಮೂಲಕ ಸ್ಮೈಲ್ ಯೋಜನೆಯ ಪರಿಣಾಮಕಾರಿ ಅನುಷ್ಠಾನಕ್ಕೆ ಸಹಕರಿಸಬೇಕೆಂದು ನಗರಪಾಲಿಕೆ ಅಧಿಕಾರಿಗಳು ಮನವಿ ಮಾಡಿದ್ದಾರೆ.

ಇಂದು ತರಬೇತಿ; ಮಾ.3ಕ್ಕೆ ಸಮೀಕ್ಷೆಗೆ ಚಾಲನೆ

ಮೈಸೂರು: ಸ್ಮೈಲ್ ಯೋಜನೆ ತರಬೇತಿ ಕಾರ್ಯಕ್ರಮವನ್ನು ನಗರ ಪಾಲಿಕೆಯ ಶ್ರೀ ಜಯಚಾಮರಾಜೇಂದ್ರ ಒಡೆಯರ್ ಸಭಾಂಗಣದಲ್ಲಿ ಬುಧವಾರ ಬೆಳಗ್ಗೆ 10ಕ್ಕೆ ಆಯೋಜಿಸಲಾಗಿದೆ.

ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಯಾದ ಹಿರಿಯ ಸಿವಿಲ್ ನ್ಯಾಯಾಧೀಶ ಬಿ.ಜಿ.ದಿನೇಶ್, ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ, ನಗರ ಪೊಲೀಸ್ ಆಯುಕ್ತ ಬಿ.ರಮೇಶ್, ನಗರಪಾಲಿಕೆ ಆಯುಕ್ತ ಅಶಾದ್ ಉರ್ ರಹಮಾನ್ ಶರೀಫ್, ಹೆಚ್ಚುವರಿ ಆಯುಕ್ತೆ ಕುಸುಮ ಕುಮಾರಿ, ಸ್ಮೈಲ್ ಯೋಜನಾಧಿಕಾರಿ ಬಿ.ಶುಭಾ, ಜಿಲ್ಲಾ ಸಮಾಜ ಕಲ್ಯಾಣ ಜಂಟಿ ನಿರ್ದೇಶಕ ರಂಗೇಗೌಡ, ಬೆಂಗಳೂರಿನ ಕ್ಯಾಡ್ ಎಂಎಸ್ ಟ್ರಸ್ಟ್ ಅಧ್ಯಕ್ಷ ಡಾ.ಕೆ.ಸಿ.ಶ್ರೀಧರ್ ಮತ್ತಿತರರು ಭಾಗವಹಿಸಲಿದ್ದಾರೆ.

ಕರ್ನಾಟಕ ಭಿಕ್ಷಾಟನೆ ನಿಷೇಧ ಕಾಯ್ದೆ-1975, ಭಾರತ ಭಿಕ್ಷಾಟನೆ ನಿಯಂತ್ರಣ ಕಾಯ್ದೆ 1960, ಸಮೀಕ್ಷೆಯಲ್ಲಿ ಭಾಗವಹಿಸುವ ವೇಳೆ ಎದುರಾಗುವ ಸಮಸ್ಯೆಗಳು ಮತ್ತು ಸವಾಲುಗಳು. ಸಮೀಕ್ಷಾ ನಮೂನೆಯಲ್ಲಿ ಭರ್ತಿ ಮಾಡಬೇಕಾದ ವಿಷಯ ಮತ್ತು ಇತ್ಯಾದಿ ವಿಷಯಗಳ ಕುರಿತು ಪರಿಣತರು ಮಾಹಿತಿ ನೀಡಲಿದ್ದಾರೆ. ಈ ಕಾರ್ಯಾಗಾರದಲ್ಲಿ ಮೈಸೂರು ವಿಶ್ವವಿದ್ಯಾನಿಲಯ ಸಮಾಜ ಕಾರ್ಯ ವಿಭಾಗದ ವಿದ್ಯಾರ್ಥಿಗಳು, ಪಾಲಿಕೆ ಸಿಬ್ಬಂದಿ ಭಾಗವಹಿಸಲಿದ್ದಾರೆ. ಮಾ.3ರಂದು ಬೆಳಗ್ಗೆ 8ಕ್ಕೆ ನಗರ ಪಾಲಿಕೆ ಮುಖ್ಯ ಕಚೇರಿ ಬಳಿ ಸ್ಮೈಲ್ ಸಮೀಕ್ಷೆಗೆ ಜಿಲ್ಲಾಧಿಕಾರಿ ಹಾಗೂ ಪಾಲಿಕೆ ಆಯುಕ್ತರು ಚಾಲನೆ ನೀಡಲಿದ್ದಾರೆ. ಅಂದಿನಿಂದ ನಿಯೋಜಿತ ತಂಡಗಳು ಮೈಸೂರು ನಗರಾದ್ಯಂತ ಭಿಕ್ಷಾಟನೆ ಮಾಡುವವರ ಸಮೀಕ್ಷೆ ಆರಂಭಿಸಲಿದ್ದಾರೆ.

ವಿಧಾನಸೌಧದಲ್ಲಿ ಪಾಕ್ ಪರ ಘೋಷಣೆ ಆರೋಪ

ಪೊಲೀಸರಿಂದ ಸುಮೊಟೊ ಪ್ರಕರಣ ದಾಖಲು



ಬೆಂಗಳೂರು, ಫೆ.27- ರಾಜ್ಯಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿ ನಾಸೀರ್ ಹುಸೇನ್ ವಿಜಯೋತ್ಸವದ ವೇಳೆ ಅವರ ಬೆಂಬಲಿಗರು ಪಾಕಿಸ್ತಾನ ಪರ ಘೋಷಣೆ ಕೂಗಿದ ಆರೋಪ ಕೇಳಿಬಂದಿದ್ದು, ವಿಧಾನಸೌಧ ಭದ್ರತಾ ವಿಭಾಗದ ಎಸಿಪಿ ಶಿವಕುಮಾರ್ ವಿಧಾನಸೌಧ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ.

ರಾಜ್ಯಸಭಾ ಚುನಾವಣೆಯಲ್ಲಿ ಗೆಲುವು ದಾಖಲಿಸಿದ ಡಾ.ನಾಸೀರ್ ಹುಸೇನ್ ಅವರ ಬೆಂಬಲಿಗರು ವಿಜಯೋತ್ಸವ ಆಚರಿಸುವ ಸಂದರ್ಭದಲ್ಲಿ ಸಂಜೆ 6ರಿಂದ 630ರ ಸುಮಾರಿಗೆ ಯಾರೋ ಒಬ್ಬ ವ್ಯಕ್ತಿ ವಿಧಾನಸೌಧದ ಪೂರ್ವ ದ್ವಾರದ ಬಳಿ ಪಾಕಿಸ್ತಾನ ಜಿಂದಾಬಾದ್ ಎಂದು ಘೋಷಣೆ ಕೂಗಿದ ಎಂಬ ಸುದ್ದಿ ವಿದ್ಯುನ್ಮಾನ ಮಾಧ್ಯಮಗಳಲ್ಲಿ ಪ್ರಸಾರವಾಗುತ್ತಿದೆ. ಈ ಸಂಬಂಧ ಲಭ್ಯವಿರುವ ಫುಟೇಜ್‌ಗಳನ್ನು ಸಂಗ್ರಹಿಸಿ ಆರೋಪಿಗಳನ್ನು ಪತ್ತೆ ಮಾಡಿ ಸೂಕ್ತ ಕಾನೂನು ಕ್ರಮ ಕೈಗೊಳ್ಳಬೇಕೆಂದು ಕೋರುತ್ತೇನೆ ಎಂದು ಅವರು ದೂರಿನಲ್ಲಿ ಉಲ್ಲೇಖಿಸಿದ್ದಾರೆ.

ವಿದ್ಯುನ್ಮಾನ ಮಾಧ್ಯಮಗಳಲ್ಲಿ ಭಿತ್ತರವಾಗುತ್ತಿರುವ ವಿಡಿಯೋ ಫುಟೇಜ್‌ನಲ್ಲಿ ಆಡಿಯೋ ಅಸ್ಪಷ್ಟವಾಗಿದೆ. ಪಾಕಿಸ್ತಾನ್ ಜಿಂದಾಬಾದ್ ಘೋಷಣೆಯೋ ಅಥವಾ ನಾಸಿರ್ ಸರ್ ಜಿಂದಾಬಾದ್ ಘೋಷಣೆಯೋ ಸ್ಪಷ್ಟವಾಗಿಲ್ಲ. ಸದ್ಯ ಸುಮೊಟೊ ಪ್ರಕರಣ ದಾಖಲಿಸಿಕೊಂಡಿರುವ ಪೊಲೀಸರು ಆಡಿಯೋ ಸಂಗ್ರಹಿಸಿ ಎಫ್‌ಎಸ್‌ಎಲ್‌ಗೆ ಕಳುಹಿಸಲು ನಿರ್ಧರಿಸಿದ್ದಾರೆ. ಮತ್ತೊಂದೆಡೆ ಘೋಷಣೆ ಕೂಗಿದ ವ್ಯಕ್ತಿಗಾಗಿ ಹುಡುಕಾಟ ನಡೆಸಲಾಗುತ್ತಿದೆ.

ಬಿಜೆಪಿ ನಿಯೋಗದಿಂದ ದೂರು: ಇದೇ ವಿಚಾರಕ್ಕೆ ಸಂಬಂಧಿಸಿದಂತೆ ನಾಸೀರ್ ಹುಸೇನ್ ಹಾಗೂ ಬೆಂಬಲಿಗರ ವಿರುದ್ಧ ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ್ ನೇತೃತ್ವದಲ್ಲಿ ಬಿಜೆಪಿ ನಿಯೋಗ ವಿಧಾನಸೌಧ ಪೊಲೀಸ್ ಠಾಣೆಗೆ ದೂರು ನೀಡಿದೆ.

ಬಳಿಕ ಮಾತನಾಡಿದ ಆರ್.ಅಶೋಕ್, ವಿಧಾನಸೌಧದ ಮೇಲೆ ಇವರು ಪಾಕಿಸ್ತಾನ ಬಾವುಟ ಹಾರಿಸುವ ಸನ್ನಿವೇಶ ಸೃಷ್ಟಿಯಾಗುತ್ತಿದೆ. ಶಕ್ತಿಸೌಧದ ಒಳಗೆ ಈ ರೀತಿಯವರು ಎಷ್ಟು ಜನ ಅಡಗಿದ್ದಾರೋ. ಮುಂಬೈ ತಾಜ್ ಹೋಟೆಲ್‌ನಲ್ಲಿ ಆದಂತಹ ಭಯ ನನಗೆ ಆಗುತ್ತಿದೆ. ಪೊಲೀಸರು ಕೈ ಕಟ್ಟಿ ನಿಂತುಕೊಂಡಿದ್ದಾರೆ. ಪಿಎಫ್‌ಐ ಸೇರಿದಂತೆ ದೇಶದ್ರೋಹಿಗಳ ವಿರುದ್ಧದ 1,200 ಪ್ರಕರಣಗಳನ್ನು ಈ ಸರ್ಕಾರ ವಾಪಸ್ ತೆಗೆದುಕೊಂಡಿದೆ. ಪೊಲೀಸರು ಪ್ರಶ್ನೆ ಮಾಡಿದರೆ ವರ್ಗಾವಣೆ ಮಾಡುತ್ತಾರೆ ಅಂತಾ ಭಯಗೊಂಡಿದ್ದಾರೆ.

ಏಳೂವರೆ ಕೋಟಿ ಜನರ ಪವಿತ್ರ ಕ್ಷೇತ್ರದಲ್ಲಿ ದೇಶ ವಿರೋಧಿ ಘೋಷಣೆ ಕೂಗಿದ್ದಾರೆ. ಕಾಂಗ್ರೆಸ್‌ನವರು ಮಜಾ ಮಾಡ್ತಿದ್ದಾರೆ. ಇಂಥ ನಾಲಾಯಕ್ ಸರ್ಕಾರ ಯಾವುದೂ ಇಲ್ಲ. ಸಂವಿಧಾನ ಜಾಥಾ ಮಾಡ್ಕೊಂಡು ಓಡಾಡಿದರು. ಪಾಕಿಸ್ತಾನ ಜಿಂದಾಬಾದ್ ಎಂಬವರ ಕೈಗೆ ಸಂವಿಧಾನ ಕೊಡಬೇಕಾ? ಈ ಹಿಂದೆ ಸಂಸದ ಡಿ.ಕೆ.ಸುರೇಶ್ ದೇಶ ಒಡೆಯುವ ಹೇಳಿಕೆ ಕೊಟ್ಟಿದ್ದರು. ಇವತ್ತಿನ ದೇಶ ವಿರೋಧಿ ಹೇಳಿಕೆಗೆ ಅದು ಸಿಂಕ್ ಆಗ್ತಿದೆ ಎಂದು ಹೇಳಿದರು.

ಕೆಪಿಸಿಸಿ ಕಚೇರಿ ಮುತ್ತಿಗೆ ಯತ್ನ: ಘಟನೆ ಸಂಬಂಧ ಕ್ವೀನ್ಸ್ ರಸ್ತೆಯಲ್ಲಿರುವ ಕೆಪಿಸಿಸಿ ಕಚೇರಿಗೆ ಮುತ್ತಿಗೆ ಹಾಕಲು ಬಿಜೆಪಿ ಯುವ ಮೋರ್ಚಾ ಕಾರ್ಯಕರ್ತರು ಮುಂದಾದರು. ಬಳಿಕ ಪಕ್ಷದ ಕಚೇರಿಯೆದುರು ಧರಣಿ ನಡೆಸಿದರು. ಕಾಂಗ್ರೆಸ್ ಕಚೇರಿ ಮುತ್ತಿಗೆ ಯತ್ನಕ್ಕೆ ಅವಕಾಶ ನೀಡದ ಪೊಲೀಸರು ಪ್ರತಿಭಟನಾನಿರತರನ್ನು ವಶಕ್ಕೆ ಪಡೆದು ಸ್ಥಳದಲ್ಲಿ ಪರಿಸ್ಥಿತಿ ನಿಯಂತ್ರಿಸಿದರು. ನಾಳೆ ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿ ಪ್ರತಿಭಟನೆ ಮತ್ತು ಕಾಂಗ್ರೆಸ್ ಕಚೇರಿಗಳಿಗೆ ಮುತ್ತಿಗೆ ಹಾಕಲು ಬಿಜೆಪಿ ನಾಯಕರು ಕರೆ ಕೊಟ್ಟಿದ್ದಾರೆ.

ಪ್ರಹ್ಲಾದ್ ಜೋಶಿ ಹೇಳಿಕೆ: ರಾಜ್ಯಸಭಾ ಚುನಾವಣೆಯಲ್ಲಿ ಜಯಗಳಿಸಿದ ನಾಸೀರ್ ಹುಸೇನ್ ಅವರ ವಿಜಯೋತ್ಸವದ ವೇಳೆ ಬೆಂಬಲಿಗರು ವಿಧಾನಸೌಧದೊಳಗೆ ಪಾಕಿಸ್ತಾನ ಪರ ಘೋಷಣೆ ಕೂಗಿದ್ದು ಅತ್ಯಂತ ಖಂಡನೀಯ. ಘೋಷಣೆ ಕೂಗಿದವರನ್ನು ಸರ್ಕಾರ ಬಂಧಿಸಬೇಕು ಎಂದು ಕೇಂದ್ರ ಸಚಿವ ಪ್ರಹ್ಲಾದ್ ಜೋಶಿ ಆಗ್ರಹಿಸಿದರು.

ಬೊಮ್ಮಾಯಿ ಹೇಳಿಕೆ: ನಾಸೀರ್ ಹುಸೇನ್ ಅವರ ಬೆಂಬಲಿಗರು ಪಾಕ್ ಪರ ಘೋಷಣೆ ಕೂಗಿದ್ದಾರೆ. ಈ ವಿಷಯ ಅತ್ಯಂತ ಗಂಭೀರವಾಗಿದ್ದರೂ ಸರ್ಕಾರ ಯಾವುದೇ ಕ್ರಮ ಕೈಗೊಂಡಿಲ್ಲ. ಕೂಡಲೇ ತಪ್ಪಿತಸ್ಥರನ್ನು ಬಂಧಿಸಿ ಕಠಿಣ ಕ್ರಮ ಕೈಗೊಳ್ಳಬೇಕು ಎಂದು ಸಾಮಾಜಿಕ ಜಾಲತಾಣ ಎಕ್ಸ್ ಮೂಲಕ ಆಗ್ರಹಿಸಿದ್ದಾರೆ.

ಹಿಮಾಚಲದಲ್ಲಿ ಅಲ್ಪ ಮತಕ್ಕೆ ಕುಸಿದ ಕಾಂಗ್ರೆಸ್ ಸರ್ಕಾರ

ಶಿಮ್ಲಾ, ಫೆ.27- ಹಿಮಾಚಲ ಪ್ರದೇಶದ ಒಂದು ರಾಜ್ಯಸಭೆ ಸ್ಥಾನಕ್ಕೆ ಇಂದು ಭಾರಿ ಹೈಡ್ರಾಮಾ ನಡೆದಿದ್ದು ಬಿಜೆಪಿ ಜಯಗಳಿಸಿದೆ. 9 ಶಾಸಕರು ಕಾಂಗ್ರೆಸ್ಸಿಗೆ ಕೈಕೊಟ್ಟ ಕಾರಣ ಅಲ್ಲಿ ಬಿಜೆಪಿ ಗೆದ್ದಿದೆ. ಕಾಂಗ್ರೆಸ್ಸಿನ ಅಭಿಷೇಕ್ ಮನು ಸಿಂಘ್ವಿ ಸೋಲನನುಭವಿಸಿದ್ದಾರೆ.

ರಾಜ್ಯಸಭಾ ಚುನಾವಣೆಯ ಸೋಲಿನಿಂದಾಗಿ ಸುಖವಿಂದರ್ ಸಿಂಗ್ ಸುಖು ನೇತೃತ್ವದ ಕಾಂಗ್ರೆಸ್ ಸರ್ಕಾರ ಅಲ್ಪಮತಕ್ಕೆ ಕುಸಿದಿದ್ದು, ಪತನದ ಅಂಚಿನಲ್ಲಿದೆ.

ಹಿಮಾಚಲ ಪ್ರದೇಶದಲ್ಲಿ ಕಾಂಗ್ರೆಸ್ ಸರ್ಕಾರ ಬಹುಮತ ಕಳೆದುಕೊಂಡಿದೆ, ವಿಶ್ವಾಸಮತ ಯಾಚಿಸುವಂತೆ ಸಿಎಂ ಸುಖುಗೆ ಮಾಜಿ ಮುಖ್ಯಮಂತ್ರಿ ಜೈರಾಮ್ ಠಾಕೂರ್ ಆಗ್ರಹಿಸಿದ್ದಾರೆ. 2022ರ ವಿಧಾನಸಭಾ ಚುನಾವಣೆಯಲ್ಲಿ, 68 ಸ್ಥಾನಗಳಲ್ಲಿ ಕಾಂಗ್ರೆಸ್ 40 ಸ್ಥಾನಗಳನ್ನು ಗೆದ್ದರೆ ಬಿಜೆಪಿ 25 ಸ್ಥಾನ ಗೆದ್ದುಕೊಂಡಿತ್ತು.

ರಾಜ್ಯಸಭಾ ಚುನಾವಣೆಯಲ್ಲಿ ಕಾಂಗ್ರೆಸ್‌ನ ಅಭಿಷೇಕ್ ಮನು ಸಿಂಘ್ವಿ ವಿರುದ್ಧ ಬಿಜೆಪಿ ಹರ್ಷ ಮಹಾಜನ್ ಅವರನ್ನು ಕಣಕ್ಕಿಳಿಸಿತ್ತು. ಹಲವು ಕಾಂಗ್ರೆಸ್ ಶಾಸಕರು ಸಿಂಘ್ವಿ ಅವರನ್ನು ಕಣಕ್ಕೆ ಇಳಿಸಿದ್ದಕ್ಕೆ ಅಸಮಾಧಾನಗೊಂಡಿದ್ದರು.

ಮೈಸೂರಲ್ಲಿ ನಿಲ್ಲದ ಅಂಟಿಸುವ ಅಂಟು ರೋಗ!

●ಬಸ್ ಪ್ರಯಾಣಿಕರ ತಂಗುದಾಣ, ವಿದ್ಯುತ್ ಕಂಬ ಸೇರಿದಂತೆ ಕಂಡಕಂಡಲ್ಲಿ ರಾಚುತ್ತವೆ ಅನಧಿಕೃತ ಕರಪತ್ರ ●ನಗರದ ಅಂದಕ್ಕೂ ಕುತ್ತು ●ಸಂಬಂಧಿಸಿದ ಅಧಿಕಾರಿಗಳ ನಿರ್ಲಕ್ಷ್ಯದ ಫಲವಿದು



ಮೈಸೂರಿನ ಕಾಂತರಾಜ ಅರಸ್ ರಸ್ತೆಯಲ್ಲಿ ಅಗ್ನಿಶಾಮಕ ಠಾಣೆಯ ಎದುರಿನ ಬಸ್ ಪ್ರಯಾಣಿಕರ ತಂಗುದಾಣದ ಗೋಡೆಯಲ್ಲಿ ಪೋಸ್ಟರ್‌ಗಳನ್ನು ಬೇಕಾಬಿಟ್ಟಿಯಾಗಿ ಅಂಟಿಸಿರುವುದು. ಉಳಿದ ಚಿತ್ರಗಳಲ್ಲಿ ವಿವಿಧ ಸ್ಥಳಗಳಲ್ಲಿ ಪೋಸ್ಟರ್ ಅಂಟಿಸಿರುವುದನ್ನು ಕಾಣಬಹುದು.

ಮೈಸೂರು,ಫೆ.27(ಪಿಎಂ)- ಮೈಸೂರು ನಗರದಲ್ಲಿ ಅನಧಿಕೃತ ಜಾಹೀರಾತು ಹಾವಳಿ ತಪ್ಪುತ್ತಿಲ್ಲ. ಬಸ್ ತಂಗುದಾಣ ಮತ್ತು ವಿದ್ಯುತ್ ಕಂಬಗಳು, ರಸ್ತೆಬದಿ, ಕಾಂಪೌಂಡ್, ಗೋಡೆ, ಮರಗಳು, ಸ್ಮಾರಕಗಳು ಹೀಗೆ ಬೇಕಾಬಿಟ್ಟಿಯಾಗಿ, ಕಣ್ಣಿಗೆ ರಾಚುವಂತೆ ವಿವಿಧ ವಿಷಯದ ಪ್ರಕಟಣೆ ಒಳಗೊಂಡಿರುವ ಪೋಸ್ಟರ್‌ಗಳನ್ನು ಅಂಟಿಸಲಾಗುತ್ತಿದೆ. ಈ ಅಂಟು ರೋಗ ನಗರದೆಲ್ಲೆಡೆ ಹರಡುವಂತಾಗಿ ಮೈಸೂರಿನ ಅಂದ ಚಂದಕ್ಕೂ ಕುಂದುಂಟಾಗಿದೆ.

ಇಷ್ಟು ಮಾತ್ರವಲ್ಲದೆ, ವಿವಿಧ ಕಟ್ಟಡಗಳ ಕಾಂಪೌಂಡ್ ಸೇರಿದಂತೆ ಎಲ್ಲೆಲ್ಲಿ ಸಾಧ್ಯವೋ ಅಲ್ಲೆಲ್ಲಾ ಪೋಸ್ಟರ್‌ಗಳನ್ನು ಅಂಟಿಸಿ ನಗರದ ಅಂದಗೆಡಿಸಲಾಗುತ್ತಿದೆ. ಹೀಗಿದ್ದರೂ ಮೈಸೂರು ಮಹಾನಗರ ಪಾಲಿಕೆ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳುವ ಮೂಲಕ ನಗರದ ಸೌಂದರ್ಯ ಕಾಪಾಡಲು ದಿಟ್ಟ ಕ್ರಮಕ್ಕೆ ಮುಂದಾಗುತ್ತಿಲ್ಲ ಎಂಬ ಆರೋಪ ಪ್ರಜ್ಞಾವಂತ ನಾಗರಿಕರಿಂದ ಕೇಳಿಬರುತ್ತಿದೆ.

ಪೊಲೀಸ್ ಚೌಕಿಗಳಿಗೂ ಈ ಪೋಸ್ಟರ್ ಪೀಡೆ ಕಾಟ ತಪ್ಪಿಲ್ಲ. ಟ್ರಿಣ್ ಟ್ರಿಣ್ ಸೈಕಲ್ ನಿಲ್ದಾಣಗಳಿಗೂ ಪೋಸ್ಟರ್ ಬೇನೆ ಕಾಡುತ್ತಿದೆ. ಕಾರ್ಯಕ್ರಮ, ಸಮಾರಂಭ, ಪರೀಕ್ಷೆ ತರಬೇತಿ, ಕೊಠಡಿ ಬಾಡಿಗೆ ಸೇರಿದಂತೆ ಬಗೆಬಗೆಯ ಜಾಹೀರಾತುಗಳ ಭಿತ್ತಿಪತ್ರ ಹಾಗೂ ಕರಪತ್ರಗಳನ್ನು ಎಲ್ಲೆಲ್ಲೂ ಅಂಟಿಸುವ ಅಂಟು ರೋಗ ಹರಡುತ್ತಿದೆ.

ಬೋಗಾದಿ ರಸ್ತೆ ಮತ್ತು ಕಾಂತರಾಜ ಅರಸ್ ರಸ್ತೆಯ ಜಂಕ್ಷನ್‌ನಲ್ಲಿರುವ (ಡಾ.ಎಂ.ಬಿ.ಪದ್ಮ ವೃತ್ತ) ಪೊಲೀಸ್ ಚೌಕಿಗೆ ಜಾಹೀರಾತು ಪೋಸ್ಟರ್ ಅಂಟಿಸಿ ಅದರ ಅಂದಕ್ಕೆ ಕುಂದುಂಟು ಮಾಡಲಾಗಿದೆ. ಇಲ್ಲೇ ಇರುವ ಸಿಗ್ನಲ್ ಕಂಬಕ್ಕೂ ಜಾಹೀರಾತು ಬ್ಯಾನರ್ ಕಟ್ಟಲಾಗಿದೆ.

ಇದೇ ಕಾಂತರಾಜ ಅರಸ್ ರಸ್ತೆಯಲ್ಲಿ ಅಗ್ನಿಶಾಮಕ ಠಾಣೆಯ ಸಮೀಪದಲ್ಲಿರುವ ಎರಡೂ ಬಸ್ ಪ್ರಯಾಣಿಕರ ತಂಗುದಾಣಗಳ (ಎದುರು-ಬದುರು ಇರುವುವು) ಗೋಡೆಗಳು ಕರಪತ್ರ-ಭಿತ್ತಿಪತ್ರಗಳ ಬಾಧೆಯಿಂದ ಬಳಲುವಂತಾಗಿದೆ. ಪೋಸ್ಟರ್ ಅಂಟಿಸುವ ಚಾಳಿಕ್ಕೆ ಇಲ್ಲೇ ಇರುವ ಟ್ರಿಣ್ ಟ್ರಿಣ್ ಸೈಕಲ್ ನಿಲ್ದಾಣವೂ ಅಂದಗೆಟ್ಟಿದೆ. ಇಲ್ಲಿನ ಫಲಕಗಳು ಬಗೆಬಗೆಯ ಪೋಸ್ಟರ್‌ಗಳನ್ನು ಪ್ರಕಟಿಸುವ ಫಲಕಗಳಾಗಿ ಪರಿಣಮಿಸಿವೆ.

ಇನ್ನು ಅಗ್ನಿಶಾಮಕ ಠಾಣೆ ಎದುರಿನ ರಸ್ತೆಯ ಸೇತುವೆ ಗೋಡೆಯಲ್ಲಿಯೂ ಪೋಸ್ಟರ್ ರಾರಾಜಿಸುತ್ತಿವೆ. ಜೊತೆಗೆ ರೈಲು ಹಳಿ ಇರುವ ಈ ಸೇತುವೆಯ ಸೂಕ್ತ ನಿರ್ವಹಣೆ ಮಾಡದ ಹಿನ್ನೆಲೆಯಲ್ಲಿ ಗಿಡಗಂಟಿಗಳು ಸೇತುವೆಯ ಗೋಡೆಯಲ್ಲಿ ಬೆಳೆಯುವಂತಾಗಿದೆ. ಇದರಿಂದ ಸೇತುವೆ ದುರ್ಬಲಗೊಳ್ಳುವ ಅಪಾಯವೂ ಇದೆ. ಇದರ ಬಗ್ಗೆಯೇ ವಿಶೇಷವಾಗಿ 'ಮೈಸೂರು ಮಿತ್ರ' ಈಗಾಗಲೇ ವಿಶೇಷ ವರದಿ ಪ್ರಕಟಿಸಿ ಗಮನ ಸೆಳೆದರೂ ಸಂಬಂಧಿಸಿದವರು ಮಾತ್ರ ಎಚ್ಚೆತ್ತುಕೊಂಡಿಲ್ಲ. ಇಲ್ಲಿನ ಏಕಲವ್ಯ ವೃತ್ತದಲ್ಲಿರುವ ಪೊಲೀಸ್ ಚೌಕಿಗೂ ಪೋಸ್ಟರ್ ಕಾಟ ತಪ್ಪಿಲ್ಲ.

ರಾಮಸ್ವಾಮಿ ವೃತ್ತದ ಟ್ರಿಣ್ ಟ್ರಿಣ್ ಸೈಕಲ್ ನಿಲ್ದಾಣ, ಜೆಎಲ್‌ಬಿ ರಸ್ತೆಯ ಬಸ್ ತಂಗುದಾಣಕ್ಕೂ (ಯುವರಾಜ ಕಾಲೇಜು ಕಾಂಪೌಂಡ್‌ಗೆ ಹೊಂದಿಕೊಂಡಿರುವ) ತರಾವರಿ ಪೋಸ್ಟರ್‌ಗಳು ಲಗ್ಗೆ ಇಟ್ಟಿವೆ. ಈ ಕರಪತ್ರ-ಭಿತ್ತಿಪತ್ರ ವ್ಯಾಧಿ ಕೇವಲ ಈಗ ಪ್ರಸ್ತಾಪಿಸಿದ ಜಾಗಗಳಿಗೆ ಮಾತ್ರ ಸೀಮಿತವಾಗಿಲ್ಲ. ಮೈಸೂರಿನ ನೂರಾರು ಬಸ್ ತಂಗುದಾಣ ಸೇರಿದಂತೆ ಎಲ್ಲೆಲ್ಲೂ ಅವುಗಳ ಅಟ್ಟಹಾಸ ಮೆರೆಯುವಂತಾಗಿದೆ. ಕೆಆರ್ ವೃತ್ತ ಸೇರಿದಂತೆ ಮೈಸೂರು ಹೃದಯಭಾಗದ ಕೆಲವು ಪ್ರಮುಖ ವೃತ್ತ ಹಾಗೂ ಸ್ಥಳಗಳಲ್ಲಿ ವಿದ್ಯುತ್ ಕಂಬ, ತಡೆಗೋಡೆ ಮೊದಲಾದ ಕಡೆಗಳಲ್ಲಿ ಪೋಸ್ಟರ್ ಹಾವಳಿ ನಿಯಂತ್ರಣದಲ್ಲಿ ಇದ್ದರೂ ಅಲ್ಲಲ್ಲಿ ಒಂದಿಷ್ಟು ಈ ಅಂಟು ರೋಗ ಕಾಣಿಸಿಕೊಳ್ಳುತ್ತದೆ.

ನಿರ್ವಹಣೆ ಇಲ್ಲದೇ ಸೊರಗುತ್ತಿವೆ ಮೈಸೂರು ಬಸ್ ಪ್ರಯಾಣಿಕರ ತಂಗುದಾಣಗಳು



ಮೈಸೂರು,ಫೆ.27(ಪಿಎಂ)- ಸೂಕ್ತ ನಿರ್ವಹಣೆ ಇಲ್ಲದೇ ಮೈಸೂರು ನಗರದ ಬಹುತೇಕ ಬಸ್ ಪ್ರಯಾಣಿಕರ ತಂಗುದಾಣಗಳು ಸೊರಗುತ್ತಿವೆ. ಹುಡುಕಿದರೂ ಅಲ್ಲೊಂದು ಇನ್ನೊಂದಾದರೂ ಸುಸ್ಥಿತಿಯಲ್ಲಿರುವ ಬಸ್ ಪ್ರಯಾಣಿಕರ ತಂಗುದಾಣ ಕಾಣುವುದು ಬಹುತೇಕ ಅನುಮಾನವೇ. ತುಕ್ಕು ಹಿಡಿದಿರುವ ಕಬ್ಬಿಣದ ಆಸನಗಳು, ಕಿತ್ತು ಬೀಳುವಂತಿರುವ ವಿದ್ಯುತ್ ಬಲ್ಬ್‌ಗಳು, ಅಲ್ಲಲ್ಲಿ ಕಿತ್ತು ಬಂದಿರುವ ಟೈಲ್ಸ್‌ಗಳು, ತಲೆ ಮೇಲೆ ಬೀಳುವಂತಿರುವ ಕಬ್ಬಿಣದ ಶೀಟಿನ ಮೇಲ್ಛಾವಣಿ ಇವುಗಳ ದುಸ್ಥಿತಿಯ ಕರಾಳತೆಯನ್ನು ಅನಾವರಣ ಮಾಡುತ್ತವೆ. ಹೀಗಾಗಿ ಅವುಗಳನ್ನೊಮ್ಮೆ ನೋಡಿದರೆ ಅವುಗಳು ಎಷ್ಟು ಸುರಕ್ಷಿತ ಎಂಬ ಅನುಮಾನ ಮೂಡುತ್ತದೆ.

ಸರಸ್ವತಿಪುರಂನ ಅಗ್ನಿಶಾಮಕ ಠಾಣೆಯ ಕಾಂಪೌಂಡ್‌ಗೆ ಹೊಂದಿಕೊಂಡಿರುವ ಬಸ್ ಪ್ರಯಾಣಿಕರ ತಂಗುದಾಣ ನೋಡಿದರೆ ಅದರ ದುಸ್ಥಿತಿ ಕಣ್ಣಿಗೆ ರಾಚುತ್ತದೆ. ಇದರ ಎದುರಿನ ತಂಗುದಾಣ ನೂತನವಾಗಿ ನಿರ್ಮಾಣಗೊಂಡಿರುವ ಹಿನ್ನೆಲೆಯಲ್ಲಿ ಸುಸ್ಥಿತಿಯಲ್ಲಿ ಇದೆಯಾದರೂ ಸ್ವಚ್ಛತೆ ಮಾತ್ರ ಇಲ್ಲಿಲ್ಲ. ಕಸ-ಕಡ್ಡಿ ಹಾಗೂ ಧೂಳಿನಿಂದ ಕೂಡಿದ್ದು, ಪ್ರಯಾಣಿಕರು ಆಸೀನರಾಗಲು ಯೋಗ್ಯವಿರುವಂತೆ ನಿರ್ವಹಣೆ ಮಾಡುತ್ತಿಲ್ಲ.

ಇನ್ನು ಜೆಎಲ್‌ಬಿ ರಸ್ತೆಯಲ್ಲಿರುವ ಬಸ್ ಪ್ರಯಾಣಿಕರ ತಂಗುದಾಣದ (ಯುವರಾಜ ಕಾಲೇಜು ಕಾಂಪೌಂಡ್‌ಗೆ ಹೊಂದುಕೊಂಡಿರುವ) ನೋಡಿದರೆ ಕುಸಿದ ಬೀಳುವಂತೆ ಕಾಣುತ್ತದೆ. ಅಕ್ಕಪಕ್ಕದಲ್ಲೇ ಎರಡು ಪ್ರತ್ಯೇಕ ತಂಗುದಾಣ ಸ್ಥಾಪಿಸಿದ್ದು, ತುಕ್ಕು ಹಿಡಿದಿರುವ ಕಬ್ಬಿಣದ ಆಸನಗಳು, ಕಿತ್ತು ಬಂದಿರುವ ವಿದ್ಯುತ್ ವೈಯರ್‌ಗಳು ಈ ಎರಡರ ಅವ್ಯವಸ್ಥೆಯನ್ನು ಅನಾವರಣಗೊಳಿಸುತ್ತವೆ. ಈ ತಂಗುದಾಣದಲ್ಲಿದ್ದ ಲೋಹದ ಡಸ್ಟ್‌ಬಿನ್‌ಗಳು ನಾಪತ್ತೆಯಾಗಿದ್ದರೆ ಇದರ ಎದುರು ರಸ್ತೆಬದಿಯಲ್ಲಿ ಪ್ಲಾಸ್ಟಿಕ್ ಬಾಟಲಿ ಸೇರಿದಂತೆ ನಾನಾ ರೀತಿಯ ತ್ಯಾಜ್ಯಗಳು ಎಲ್ಲೆಂದರಲ್ಲಿ ಬಿದ್ದು ಗಾಳಿಗೆ ಹಾರಾಡಿ-ತೂರಾಡುವಂತಾಗಿದೆ.

ಹಿಂದುಳಿದಿರುವ ಸವಿತಾ ಸಮಾಜವನ್ನು ಮುಖ್ಯವಾಹಿನಿಗೆ ತರಲು

ಹೋಬಳಿಗಳಲ್ಲೂ ಸವಿತಾ ಮಹರ್ಷಿ ಜಯಂತಿ ಆಚರಿಸಿ

ಸವಿತಾ ಸಮಾಜ ಹೋಬಳಿ ಶಾಖೆ ಸಂಘಗಳ ಒಕ್ಕೂಟದ ಅಧ್ಯಕ್ಷ ಸಿದ್ದೇಶ್


ಸವಿತಾ ಮಹರ್ಷಿ ಭಾವಚಿತ್ರಕ್ಕೆ ಮುಖಂಡರು ಪೂಜೆ ಸಲ್ಲಿಸಿ, ಗೌರವ ಸಲ್ಲಿಸಿದರು.

ತಿ.ನರಸೀಪುರ, ಫೆ.27– ರಾಜಕೀಯ, ಆರ್ಥಿಕ ಹಾಗೂ ಸಾಮಾಜಿಕವಾಗಿ ಹಿಂದುಳಿದಿರುವ ಸವಿತಾ ಸಮಾಜವನ್ನು ಮುಖ್ಯವಾಹಿನಿಗೆ ತರಲು ಮತ್ತು ಸಮಾಜ ಸಂಘಟಿಸಲು ಸವಿತಾ ಮಹರ್ಷಿ ಜಯಂತಿಯನ್ನು ಹೋಬಳಿ ಮಟ್ಟದಲ್ಲಿ ಹಮ್ಮಿಕೊಂಡು ಜಾಗೃತಿ ಮೂಡಿಸಬೇಕು ಎಂದು ಸವಿತಾ ಸಮಾಜ ಹೋಬಳಿ ಶಾಖೆ ಸಂಘಗಳ ಒಕ್ಕೂಟದ ಅಧ್ಯಕ್ಷ ಸಿದ್ದೇಶ್ ತಿಳಿಸಿದರು.

ರಾಷ್ಟ್ರೀಯ ಹಬ್ಬಗಳ ಆಚರಣಾ ಸಮಿತಿ ಹಾಗೂ ತಾಲೂಕು ಸವಿತಾ ಸಮಾಜದ ಸಂಯುಕ್ತಾಶ್ರಯದಲ್ಲಿ ಪಟ್ಟಣದ ತಾಲೂಕು ಕಚೇರಿ ಸಭಾಂಗಣದಲ್ಲಿ ಆಯೋಜಿಸಿದ್ದ ಸವಿತಾ ಮಹರ್ಷಿ ಜಯಂತಿಯಲ್ಲಿ ಸವಿತಾ ಮಹರ್ಷಿ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಮಾತನಾಡಿದ ಅವರು, ಸವಿತಾ ಸಮಾಜ ತಾಲೂಕಿನಲ್ಲಿ ಕಡಿಮೆ ಜನ ಸಂಖ್ಯೆ ಹೊಂದಿರುವ ಸಮಾಜವಾಗಿದೆ. ಆರ್ಥಿಕ, ಸಾಮಾಜಿಕ, ಶೈಕ್ಷಣಿಕ ಹಾಗೂ ರಾಜಕೀಯವಾಗಿ ಹಿಂದುಳಿದಿದೆ. ಹೀಗಾಗಿ ಹೋಬಳಿ ಮಟ್ಟದಲ್ಲಿ ಸವಿತಾ ಮಹರ್ಷಿಗಳ ಜಯಂತಿ ಆಚರಿಸಲು ಕ್ರಮ ಕೈಗೊಳ್ಳುವ ಮೂಲಕ ಗ್ರಾಮ ಮಟ್ಟದಲ್ಲಿ ಸಮಾಜ ಸಂಘಟನೆಯಾಗಲು ಸಹಕಾರ ನೀಡಬೇಕು. ನಾವು ಆರ್ಥಿಕವಾಗಿ ಹಿಂದುಳಿದಿದ್ದು, ರಾಜಕೀಯ ಶಕ್ತಿ ಹೊಂದಿಲ್ಲದ ಕಾರಣ ಎಲ್ಲಾ ಗ್ರಾಪಂಗಳಲ್ಲಿ ಸರ್ಕಾರದಿಂದ ನಾಮ ನಿರ್ದೇಶನ ಸದಸ್ಯರನ್ನು ಆಯ್ಕೆ ಮಾಡಿ ಕೊಡಬೇಕೆಂದು ಮನವಿ ಮಾಡಿದರು.

ಸವಿತಾ ಸಮಾಜದ ತಾಲೂಕು ಅಧ್ಯಕ್ಷ ನಾಗೇಂದ್ರ ಮಾತನಾಡಿ, ಸವಿತಾ ಮಹರ್ಷಿ ಸಮಾಜದ ಶ್ರೇಷ್ಠತೆಗೆ ಶ್ರಮಿಸಿದ ಮಹಾನ್ ಯುಗಪುರುಷರಾಗಿದ್ದಾರೆ. ಅವರು ಸಮಾಜಮುಖಿಯಾಗಿ ಬೆಳೆದು ದಾರಿದೀಪವಾಗಿದ್ದಾರೆ. ಇಂತಹ ಮಹಾತ್ಮರ ಜಯಂತಿಗಳನ್ನು ಆಚರಿಸುವ ಮೂಲಕ ಸರ್ಕಾರ ಅವರ ಆದರ್ಶಗಳ ಹಾದಿಯಲ್ಲಿ ನಡೆಯಲು ನಮಗೆ ಬೆಳಕು ತೋರಿದೆ. ಸವಿತಾ ಸಮಾಜದ ಬಂಧುಗಳು ಮಹರ್ಷಿಗಳ ಆದರ್ಶಗಳನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಂಡು ಮುನ್ನಡೆಯಬೇಕು ಎಂದರು.

ಕಾರ್ಯಕ್ರಮದಲ್ಲಿ ಉಪ ತಹಸೀಲ್ದಾರ್ ಮಂಜುಳಾ, ಟೌನ್ ಅಧ್ಯಕ್ಷ ರುದ್ರ, ತಾಲೂಕು ಉಪಾಧ್ಯಕ್ಷ ರಾಮಲಿಂಗ, ಗೌರವಾಧ್ಯಕ್ಷ ಕೃಷ್ಣಪ್ಪ, ತಲಕಾಡು ಹೋಬಳಿ ಅಧ್ಯಕ್ಷ ಕೃಷ್ಣ, ಚಿಕ್ಕಣ್ಣ, ಗ್ರಾಮ ಸದಸ್ಯ ದೇವರಾಜು, ಫರ್ನಿಚರ್ ಅಣ್ಣಪ್ಪ, ಯಜಮಾನ ಸ್ವಾಮಿ, ರಘು, ಖಜಾಂಚಿ ನಾಗರಾಜು, ಸವಿತಾ ನಾದಬ್ರಹ್ಮ ಕಲಾ ಸಂಘದ ಅಧ್ಯಕ್ಷ ಎಚ್.ವಿ.ಲೋಕೇಶ್, ಸ್ವಾಮಿ, ಗಣೇಶ್, ಅಪ್ಪಣ್ಣ, ದೇವರಾಜು, ಸಿದ್ದರಾಜು ಮತ್ತು ಸಂಘದ ಸದಸ್ಯರಿದ್ದರು.

ಕಂದೇಗಾಲದಲ್ಲಿ ವಿಜೃಂಭಣೆಯ ಕೊಂಡೋತ್ಸವ




ಸರಗೂರು, ಫೆ.27– ತಾಲೂಕಿನ ಕಂದೇಗಾಲ ಗ್ರಾಮದಲ್ಲಿ ಶ್ರೀ ಮಹದೇಶ್ವರ ಸ್ವಾಮಿ ಜಾತ್ರಾ ಮಹೋತ್ಸವದ ಪ್ರಯುಕ್ತ ನಡೆದ ಕೊಂಡೋತ್ಸವ ಸಾವಿರಾರು ಭಕ್ತರ ಸಮ್ಮುಖದಲ್ಲಿ ವಿಜೃಂಭಣೆಯಿಂದ ನೆರವೇರಿತು.

ಕೊಂಡೋತ್ಸವ ಅಂಗವಾಗಿ ಬೆಳಗ್ಗೆಯಿಂದಲೇ ದೇವಾಲಯದಲ್ಲಿ ದೇವರಿಗೆ ವಿಶೇಷ ಪೂಜೆ ಸಲ್ಲಿಸಲಾಯಿತು. ಬಳಿಕ ನದಿ ಬಳಿ ತೆರಳಿ ಗಂಗಾ ಪೂಜೆ ನೆರವೇರಿಸಿ ಮಹದೇಶ್ವರರ ಉತ್ಸವ ಮೂರ್ತಿಯನ್ನು ಸತ್ತಿಗೆ, ಸುರಪಾನಿಗಳೊಂದಿಗೆ ಮೆರವಣಿಗೆ ಮಾಡಲಾಯಿತು. ದೇವಾಲಯಕ್ಕೆ ಆಗಮಿಸಿದ ಉತ್ಸವಮೂರ್ತಿಯನ್ನು ದೇವಸ್ಥಾನದ ಸುತ್ತ ಪ್ರದಕ್ಷಿಣೆ ಹಾಕಿಸಲಾಯಿತು. ನಂತರ ಕೊಂಡೋತ್ಸವಕ್ಕೆ ವಿಶೇಷ ಪೂಜೆ ಸಲ್ಲಿಸಿ ಚಾಲನೆ ನೀಡಲಾಯಿತು. ಈ ವೇಳೆ ನೂರಾರು ಭಕ್ತರು ಕೆಂಡದ ಮೇಲೆ ನಡೆದು ಹರಕೆ ತೀರಿಸಿದರು. ಭಕ್ತರಿಗೆ ಅನ್ನಸಂತರ್ಪಣೆ ಆಯೋಜಿಸಲಾಗಿತ್ತು.

ಈ ವೇಳೆ ಹಂಚೀಪುರ ಮಠಾಧ್ಯಕ್ಷ ಚನ್ನಬಸವ ಸ್ವಾಮೀಜಿ, ದಡದಹಳ್ಳಿ ಮಠದ ಷಡಕ್ಷರಿ ಸ್ವಾಮೀಜಿ, ಪಡುವಲು ವಿರಕ್ತಮಠದ ಮಹದೇವಸ್ವಾಮೀಜಿ, ಪುರ ಮಠದ ನಾಗೇಂದ್ರ ಸ್ವಾಮೀಜಿ, ಜಿಪಂ ಮಾಜಿ ಸದಸ್ಯ ಕೆಚಿಕ್ಕವೀರ ನಾಯಕ ಪಟೇಲ್ ರಾಜಪ್ಪ ಸೋಮಣ್ಣ ರವೀಶ್, ಕೆ.ವಿ.ರುದ್ರಯ್ಯ, ಮಾದಪ್ಪ ರವಿ ಅರಸ್, ಕಾಳಸ್ವಾಮಿ, ಮಹೇಶ್ ಸೇರಿದಂತೆ ಇನ್ನಿತರರಿದ್ದರು.

ಕೋಟೆಯಲ್ಲಿ ಕಿರಿಯರಿಂದ ಹಿರಿಯ ವಿದ್ಯಾರ್ಥಿಗಳಿಗೆ ಬೀಳ್ಕೊಡುಗೆ


ಕಾರ್ಯಕ್ರಮದಲ್ಲಿ ವಿದ್ಯಾರ್ಥಿನಿಯನ್ನು ಸನ್ಮಾನಿಸಲಾಯಿತು.

ಹೆಚ್.ಡಿ.ಕೋಟೆ, ಫೆ.27– ನಮ್ಮ ಸಮಸ್ಯೆಗಳನ್ನು ನಾವೇ ಬಗೆಹರಿಸಿಕೊಳ್ಳಬೇಕು ಎಂದು ಸಾಲಿಗ್ರಾಮ ಪದವಿ ಪೂರ್ವ ಕಾಲೇಜಿನ ಉಪನ್ಯಾಸಕ ನಾಗರಾಜು ತಿಳಿಸಿದರು.

ಪಟ್ಟಣದ ಆದಿಚುಂಚನಗಿರಿ ಸಮುದಾಯ ಭವನದಲ್ಲಿ ಶ್ರೀಆದಿಚುಂಚನಗಿರಿ ವಿದ್ಯಾಸಂಸ್ಥೆಯ ಸ್ವತಂತ್ರ ಪದವಿ ಪೂರ್ವ ಕಾಲೇಜಿನ ಕಿರಿಯ ವಿದ್ಯಾರ್ಥಿಗಳಿಂದ ಹಿರಿಯ ವಿದ್ಯಾರ್ಥಿಗಳಿಗೆ ಬೀಳ್ಕೊಡುಗೆ ಸಮಾರಂಭದಲ್ಲಿ ಅವರು ಮಾತನಾಡಿದರು.

ದೊಡ್ಡವರಿಗೆ ಹಣದ ಸಮಸ್ಯೆ ಇರುತ್ತದೆ. ಮಕ್ಕಳಿಗೆ ಓದಿನ ಬಗ್ಗೆ ಸಮಸ್ಯೆಗಳಿರುತ್ತವೆ. ರೈತರಿಗೆ ಬೇಸಾಯದ ಕುರಿತು ಸಮಸ್ಯೆಗಳಿರುತ್ತವೆ. ಇಂತಹ ಸಮಸ್ಯೆಗಳಿಗೆ ನಾವೇ ಪರಿಹಾರ ಕಂಡುಕೊಂಡಾಗ ಮಾತ್ರ ನಾವು ಉನ್ನತ ಮಟ್ಟಕ್ಕೆ ಬೆಳೆಯಲು ಸಾಧ್ಯ ಎಂದರು.

ಈ ಜಗತ್ತು ನಮ್ಮ ವೈಫಲ್ಯ ಗುರುತಿಸುತ್ತದೆ ಹೊರತು, ನಮ್ಮ ಬೆಳವಣಿಗೆಯನ್ನಲ್ಲ. ನಾವು ಸಾಧಿಸಿದಾಗ ಇಡೀ ಜಗತ್ತು ಆಶ್ಚರ್ಯದಿಂದ ನೋಡುತ್ತದೆ ಎಂದರು.

ಚಿಕ್ಕ ಚಿಕ್ಕ ಕನಸುಗಳು ಚಿಕ್ಕ ವ್ಯಕ್ತಿಯನ್ನಾಗಿ ರೂಪಿಸುತ್ತವೆ. ದೊಡ್ಡ ದೊಡ್ಡ ಕನಸುಗಳು ದೊಡ್ಡ ವ್ಯಕ್ತಿಯನ್ನಾಗಿ ರೂಪಿಸುತ್ತದೆ. ಆದ್ದರಿಂದ ನೀವು ದೊಡ್ಡ ಕನಸುಗಳನ್ನು ಕಾಣಿ ಎಂದು ವಿದ್ಯಾರ್ಥಿಗಳಿಗೆ ಕರೆ ನೀಡಿದರು.

2002ರಲ್ಲಿ ಕಾಲೇಜು ಆರಂಭವಾದಾಗ 22 ವಿದ್ಯಾರ್ಥಿಗಳು ಸೇರ್ಪಡೆಗೊಂಡಿದ್ದರು. ಪ್ರಸ್ತುತ 550 ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದು, ಇದುವರೆಗೂ 8500ಕ್ಕೂ ಹೆಚ್ಚು ವಿದ್ಯಾರ್ಥಿಗಳು ಪದವಿ ಪಡೆದಿದ್ದಾರೆ ಎಂದರು.

ಇದೇ ವೇಳೆ 2022–23ನೇ ಸಾಲಿನಲ್ಲಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿನಿ ಪೂರ್ಣಿಮಾ ಎಂ.ಎನ್. ಅವರನ್ನು ಸನ್ಮಾನಿಸಲಾಯಿತು. ಪ್ರಾಂಶುಪಾಲ ಡಾ.ಜೆ.ಎನ್.ವೆಂಕಟೇಶ್ ಮಾತನಾಡಿದರು. ಕಾರ್ಯಕ್ರಮದಲ್ಲಿ ಸಂಸ್ಥೆಯ ಗೌರವ ಆಡಳಿತಾಧಿಕಾರಿ ಪ್ರೊ.ಕೆ.ಪಿ.ಬಸವೇಗೌಡ, ಮಹಾರಾಜ ಕಾಲೇಜಿನ ನಿವೃತ್ತ ಪ್ರಾಧ್ಯಾಪಕ ಚಂದ್ರೇಗೌಡ, ಪ್ರಾಂಶುಪಾಲರಾದ ಡಾ.ಜೆ.ಎನ್. ವೆಂಕಟೇಶ್, ಭೈರಪ್ಪ, ಭೈರೇಗೌಡ, ಮುಖ್ಯೋಪಾಧ್ಯಾಯಿನಿ ನಂದಿನಿ ಇದ್ದರು.

ಹರತಲೆಯಲ್ಲಿ ಕೆರೆಗಳ ಒತ್ತುವರಿ ತೆರವು



ತಹಸೀಲ್ದಾರ್ ಶಿವಕುಮಾರ್ ಕಾಸ್ನೂರ್ ನೇತೃತ್ವದಲ್ಲಿ ಕೆರೆ ಒತ್ತುವರಿ ತೆರವುಗೊಳಿಸಲಾಯಿತು.

ನಂಜನಗೂಡು, ಫೆ.27– ತಾಲೂಕಿನ ಹರತಲೆ ಗ್ರಾಮದಲ್ಲಿ ತಹಸೀಲ್ದಾರ್ ಶಿವಕುಮಾರ್ ಕಾಸ್ನೂರ್ ನೇತೃತ್ವದಲ್ಲಿ ಕಾರ್ಯಾಚರಣೆ ನಡೆಸಿ ಕೆರೆಗಳ ಒತ್ತುವರಿ ತೆರವುಗೊಳಿಸಲಾಯಿತು.

ಪಳ್ಳಿಕೆರೆ ಎಂದೇ ಖ್ಯಾತಿ ಪಡೆದಿರುವ ಸರ್ವೆ ನಂ.344ರಲ್ಲಿರುವ 21.38 ಎಕರೆ ವಿಸ್ತೀರ್ಣದ ಕೆರೆಯಲ್ಲಿ 17 ಎಕರೆ ಪ್ರದೇಶವನ್ನು ಕಳೆದ 30 ವರ್ಷಗಳಿಂದ ಅಕ್ಕಪಕ್ಕದ ಜಮೀನಿನವರು ಹಾಗೂ ಗ್ರಾಮಸ್ಥರು ಒತ್ತುವರಿ ಮಾಡಿಕೊಂಡಿದ್ದರು. ಪರಿಣಾಮ ಬರೀ ಅರ್ಧ ಎಕರೆ ಪ್ರದೇಶದಲ್ಲಿ ನೀರು ನಿಲ್ಲುವಂತಾಗಿ, ಉಳಿದ ಪ್ರದೇಶದಲ್ಲಿ ಜೊಂಡು ಬೆಳೆದುಕೊಂಡಿತ್ತು. ಇದರಿಂದ ಜನಜಾನುವಾರುಗಳಿಗೆ ಕುಡಿಯುವ ನೀರಿಗೆ ತೊಂದರೆ ಎದುರಾಗಿತ್ತು. ಅಲ್ಲದೇ ಗ್ರಾಮದ ಮುಂಭಾಗದಲ್ಲಿರುವ ಸರ್ವೆ ನಂ.211 ರಲ್ಲಿರುವ 51 ಎಕರೆಯ ಬೃಹತ್ ಕೆರೆಯಲ್ಲಿ 6 ಎಕರೆ, ಕ್ಯಾತನಹಳ್ಳಿ ಕೆರೆಯಲ್ಲೂ ಒತ್ತುವರಿಯಾಗಿತ್ತು. ಈ ಮೂರು ಕೆರೆಗಳ ಒತ್ತುವರಿ ತೆರವುಗೊಳಿಸಿ ಗಡಿ ಗುರುತಿಸಿ ಬಂಡು ನಿರ್ಮಾಣ ಮಾಡಬೇಕು. ಆ ಮೂಲಕ ಕೆರೆ ತುಂಬಿಸಿ ಜನ ಜಾನುವಾರುಗಳಿಗೆ ಅನುಕೂಲ ಕಲ್ಪಿಸಿಕೊಡಬೇಕು ಎಂದು ಹರತಲೆ ಗ್ರಾಮದ ರೈತ ಹೋರಾಟಗಾರ ಕೆಂಪಣ್ಣ ಕಳೆದ ಮೂರು ವರ್ಷಗಳಿಂದ ಏಕಾಂಗಿ ಹೋರಾಟ ನಡೆಸಿದ್ದರು. ಅಲ್ಲದೇ ಜಿಲ್ಲಾಧಿಕಾರಿಗಳು, ಜನಪ್ರತಿನಿಧಿಗಳಿಗೆ ಮನವಿ ಸಲ್ಲಿಸಿ ಹೋರಾಟ ಮುಂದುವರೆಸಿದ್ದರು. ಅವರ 30 ವರ್ಷಗಳ ಹೋರಾಟದ ಫಲವಾಗಿ ಫೆ.23ರಂದು ಕಾರ್ಯಾಚರಣೆ ಆರಂಭಿಸಿದ ತಹಸೀಲ್ದಾರ್ ಶಿವಕುಮಾರ್ ಕಾಸ್ನೂರು ಅವರು ಜೆಸಿಬಿ ಮೂಲಕ ಕೆರೆ ಅತಿಕ್ರಮಣವನ್ನು ತೆರವುಗೊಳಿಸಿದರು.

ತಹಸೀಲ್ದಾರ್ ಶಿವಕುಮಾರ್ ಕಾಸ್ನೂರು 'ಮೈಸೂರು ಮಿತ್ರ'ನೊಂದಿಗೆ ಮಾತನಾಡಿ, ಸರ್ವೆ ನಂ 211ರಲ್ಲಿ 6 ಎಕರೆ, ಸರ್ವೆ ನಂ. 344ರಲ್ಲಿನ ಪಳ್ಳಿಕೆರೆಯ 17 ಎಕರೆ ಹಾಗೂ ಕ್ಯಾತನಹಳ್ಳಿ ಕೆರೆ ಒತ್ತುವರಿ ತೆರವುಗೊಳಿಸಲಾಗಿದೆ. ಕಳೆದ ಕೆಲ ದಿನಗಳ ಹಿಂದೆ ಒತ್ತುವರಿದಾರರಿಗೆ ನೋಟೀಸ್ ಜಾರಿಗೊಳಿಸಿ ಅತಿಕ್ರಮಣ ತೆರವುಗೊಳಿಸುವಂತೆ ಸೂಚಿಸಲಾಗಿತ್ತು. ಇದೀಗ ತಾಲೂಕು ಆಡಳಿತದಿಂದಲೇ ಜೆಸಿಬಿ ಮೂಲಕ ಒತ್ತುವರಿ ತೆರವುಗೊಳಿಸಿ ಹದ್ದುಬಸ್ತು ಗುರ್ತಿಸಲಾಗಿದೆ. ಜೊತೆಗೆ ಒತ್ತುವರಿದಾರರಿಗೆ ಕೆರೆ ಜಾಗ ಮತ್ತೆ ಅತಿಕ್ರಮಿಸದಂತೆ ಸೂಚನೆ ನೀಡಲಾಗಿದೆ ಎಂದರು. ಈ ವೇಳೆ ಕಸಬಾ ಹೋಬಳಿ ಆರ್‌ಐ ಹರೀಶ್, ಎಇಇ ಸುಹಾಸ್, ತಾಲೂಕು ಭೂಮಾಪಕ ಕೆಂಪಣ್ಣ, ಮಂಟೇಲಿಂಗು ಹಾಗೂ ಪೊಲೀಸ್ ಸಿಬ್ಬಂದಿ ಉಪಸ್ಥಿತರಿದ್ದರು.

ನಾಳೆ ದೇವಸ್ಥಾನ ಪುನರ್ ಪ್ರತಿಷ್ಠಾಪನಾ ಮಹೋತ್ಸವ



ಭೇರ್ಯ, ಫೆ.27– ಸಾಲಿಗ್ರಾಮ ತಾಲೂಕಿನ ಮಿರ್ಲೆ ಗ್ರಾಮದ ಶ್ರೀಚಾವಡಿ ವಿನಾಯಕ ಹಾಗೂ ಶ್ರೀಮಹಾಗಣಪತಿ ಮತ್ತು ಶ್ರೀನವಗ್ರಹ ದೇವಸ್ಥಾನ ಪುನರ್ ಪ್ರತಿಷ್ಠಾಪನಾ ಮಹೋತ್ಸವ ಫೆ.29ರಂದು ನಡೆಯಲಿದೆ.

ಫೆ.28ರಂದು ಸಂಜೆ 6 ಗಂಟೆಗೆ ಗೋಧೂಳಿ ಲಗ್ನದಲ್ಲಿ ಶ್ರೀಮಹಾ ಗಣಪತಿ ಪೂಜೆ, ಪುಣ್ಯಾಹ ದೇವನಂದಿ ಕಳಸ ಸ್ಥಾಪನೆ, ಹೋಮಗಳು, ಮಹಾ ಮಂಗಳಾರತಿ ನಂತರ ಪ್ರಸಾದ ವಿನಿಯೋಗ ನಡೆಯಲಿದೆ. ಫೆ.29 ಬೆಳಗ್ಗೆ 9.15ಕ್ಕೆ ಕಳಶಾರ್ಪಣೆ, ಪೂರ್ಣಾಹುತಿ ಮತ್ತು ಮಧ್ಯಾಹ್ನ 12 ಗಂಟೆಗೆ ಮಹಾಮಂಗಳಾರತಿ ಬಳಿಕ ಪ್ರಸಾದ ವಿನಿಯೋಗ ನಡೆಲಿದೆ ಎಂದು ಅರ್ಚಕ ಕುಮಾರಸ್ವಾಮಿ ತಿಳಿಸಿದ್ದಾರೆ. ಇದೇ ವೇಳೆ ದೇವಾಲಯ ನವೀಕರಣ ಮಾಡಿಕೊಟ್ಟ ಉದ್ಯಮಿಗಳಾದ ಅಶ್ವಿನಿ ಪ್ರಸಾದ್ ಹಾಗೂ ಟಿ.ತುಳಸೀಪ್ರಸಾದ್ ಅವರನ್ನು ಸನ್ಮಾನಿಸಲಾಗುವುದು. ಅಲ್ಲದೇ ದೇವಾಲಯದ ಕಾರ್ಯಕ್ರಮಗಳು ವೇದಬ್ರಹ್ಮ ಶ್ರೀನರಸಿಂಹ ಜೋಯಿಸ್ ಹಾಗೂ ವೇದಬಹ್ಮ ಶ್ರೀನರಹರಿ ಜೋಯಿಸ್ ಅವರ ನೇತೃತ್ವದಲ್ಲಿ ನಡೆಯಲಿದೆ. ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಬೇಕೆಂದು ಪ್ರಕಟಣೆ ತಿಳಿಸಿದೆ.


ಅದ್ಧೂರಿ ಸಿಡಿಲು ಮಲ್ಲಿಕಾರ್ಜುನಸ್ವಾಮಿ ತೆಪ್ಪೋತ್ಸವ



ಬೆಟ್ಟದಪುರ, ಫೆ.27– ಗ್ರಾಮದಲ್ಲಿ ಭ್ರಮರಾಂಬ ಸಮೇತ ಸಿಡಿಲು ಮಲ್ಲಿಕಾರ್ಜುನ ಸ್ವಾಮಿಯವರ ತೆಪ್ಪೋತ್ಸವ ಸೋಮವಾರ ರಾತ್ರಿ ಅದ್ಧೂರಿಯಾಗಿ ನೆರವೇರಿತು.

ಇದಕ್ಕೂ ಮುನ್ನಾ ಬೆಳ್ಳಿ ಬಸಪ್ಪ ಹಾಗೂ ಸಿಡಿಲು ಮಲ್ಲಿಕಾರ್ಜುನಸ್ವಾಮಿ ಉತ್ಸವ ಮೂರ್ತಿಯನ್ನು ಗ್ರಾಮದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ಮಾಡಲಾಯಿತು. ಬಳಿಕ ತಾವರೆಕೆರೆಯಲ್ಲಿ ತೆಪ್ಪೋತ್ಸವ ನಡೆಸಲಾಯಿತು. ಈ ವೇಳೆ ಅರ್ಚಕ ಸತೀಶ್ ಕಶ್ಯಪ್, ಗ್ರಾಪಂ ಅಧ್ಯಕ್ಷ ಬಿ.ಎಸ್.ಗಿರೀಶ್, ಉಪ ತಹಸೀಲ್ದಾರ್ ಶಶಿಧರ್, ಕಂದಾಯ ನಿರೀಕ್ಷಕ ಅಜ್ಮಲ್ ಶರೀಫ್, ಗ್ರಾಮ ಲೆಕ್ಕಾಧಿಕಾರಿ ಗುರು ನಾಯಕ್, ಅಯ್ಯಪ್ಪ, ಚೈತ್ರ, ಪಲ್ಲವಿ ಸೇರಿದಂತೆ ಗ್ರಾಮದ ಎಲ್ಲಾ ಸಮಾಜದ ಮುಖಂಡರು ಹಾಜರಿದ್ದರು.

ಬೇಡಿಕೆ ಈಡೇರಿಕೆಗೆ ತಹಸೀಲ್ದಾರ್‌ಗೆ ರೈತರ ಒತ್ತಾಯ


ಹುಣಸೂರಿನಲ್ಲಿ ನಡೆದ ಸಭೆಯಲ್ಲಿ ತಹಸೀಲ್ದಾರ್ ಮಂಜುನಾಥ್ ಹಾಗೂ ರೈತ ಮುಖಂಡರು.

ಹುಣಸೂರು, ಫೆ.27– ಪ್ರತಿ ಎಕರೆಗೆ 20 ಸಾವಿರ ರೂ. ಬರ ಪರಿಹಾರ ನೀಡಬೇಕು. ನಿಗದಿತ ಸಮಯಕ್ಕೆ ಪಂಪ್‌ಸೆಟ್‌ಗಳಿಗೆ ವಿದ್ಯುತ್ ಪೂರೈಕೆ ಮಾಡಬೇಕು. ವಿದ್ಯುತ್ ಅಕ್ರಮ–ಸಕ್ರಮ ಯೋಜನೆ ಮತ್ತೆ ಜಾರಿಗೊಳಿಸಬೇಕು. ರಸಗೊಬ್ಬರ ಅಂಗಡಿಗಳಲ್ಲಿ ಗೊಬ್ಬರದ ಬೆಲೆ ಪ್ರದರ್ಶಿಸಬೇಕು. ಕಂದಾಯ ಇಲಾಖೆಯಲ್ಲಿ ರೈತರನ್ನು ಅಲೆದಾಡಿಸುವ ಪ್ರವೃತ್ತಿಗೆ ಕಡಿವಾಣ ಹಾಕಬೇಕೆಂದು ವಿವಿಧ ರೈತ ಸಂಘಟನೆಗಳ ಮುಖಂಡರು ತಹಸೀಲ್ದಾರ್ ಜೆ.ಮಂಜುನಾಥ್ ಅವರನ್ನು ಒತ್ತಾಯಿಸಿದರು.

ನಗರದ ತಾಲೂಕು ಕಚೇರಿಯಲ್ಲಿ ತಹಸೀಲ್ದಾರ್ ಜೆ.ಮಂಜುನಾಥ್ ಅಧ್ಯಕ್ಷತೆಯಲ್ಲಿ ನಡೆದ ರೈತ ಮುಖಂಡರ ಸಭೆಯಲ್ಲಿ ಮಾತನಾಡಿದ ರೈತ ಸಂಘ ಹಾಗೂ ಹಸಿರುಸೇನೆ ತಾಲೂಕು ಅಧ್ಯಕ್ಷ ಮೋದೂರು ಮಹೇಶ್ ರೈತರಿಗೆ ಬರ ಪರಿಹಾರ ಹಣ ಬಂದಿಲ್ಲ. ರಾಗಿ ಬೆಳೆಗೂ ಪರಿಹಾರ ಘೋಷಿಸಬೇಕು. ಕನಿಷ್ಠ ಎಕರೆಗೆ 20 ಸಾವಿರ ಬರ ಪರಿಹಾರ ನೀಡಬೇಕು. ಹರವೆಯ ಭತ್ತದ ಬೆಳೆ ನಷ್ಟ ಪರಿಹಾರಕ್ಕೆ ಕ್ರಮ ವಹಿಸಬೇಕು ಎಂದು ಆಗ್ರಹಿಸಿದರು.

ರೈತ ಸಂಘದ ಕಲ್ಲಹಳ್ಳಿ ಘಟಕದ ಅಧ್ಯಕ್ಷ ವಿಷಕಂಠಪ್ಪ ಮಾತನಾಡಿ, ಚೆಸ್ಕಾಂ ಹಗಲು ವೇಳೆಯೇ ವಿದ್ಯುತ್ ಪೂರೈಸಬೇಕು. ತಾಲೂಕು ಕಚೇರಿಗೆ ರೈತರ ಅಲೆದಾಟ ತಪ್ಪಿಸಬೇಕೆಂದರೆ, ಶ್ಯಾನುಭೋಗನಹಳ್ಳಿ ರೈತ ಘಟಕದ ಅಧ್ಯಕ್ಷ ಈಶ್ವರ್ ಕೃಷಿ ಇಲಾಖೆ ನೀಡುವ ಪೈಪ್‌ಗಳಿಗೆ 7 ವರ್ಷ ಗ್ಯಾರಂಟಿ ನೀಡಿದ್ದರೂ, ಇವು 3 ವರ್ಷವೂ ಬಾಳಿಕೆ ಬರುತ್ತಿಲ್ಲ. ಹೀಗಾಗಿ 3ವರ್ಷಕ್ಕೆ ಮಾತ್ರ ಗ್ಯಾರಂಟಿ ನಿಗದಿಪಡಿಸಬೇಕು. ಸಕಾಲದಲ್ಲಿ ರೈತರಿಗೆ ಪೈಪ್ ವಿತರಿಸಲು ಕ್ರಮ ಕೈಗೊಳ್ಳಬೇಕು ಎಂದರು.

ತಾಲೂಕು ರೈತ ಸಂಘದ ಅಧ್ಯಕ್ಷ ಚಿಕ್ಕಣ್ಣ ಮಾತನಾಡಿ, ವಿದ್ಯುತ್ ಅಕ್ರಮ–ಸಕ್ರಮ ಯೋಜನೆ ಸ್ಥಗಿತಗೊಂಡಿದ್ದು, ವಿದ್ಯುತ್ ಸಂಪರ್ಕ ಪಡೆದಿರುವ ಪಂಪ್‌ಸೆಟ್ ಸಂಪರ್ಕವನ್ನು ಚೆಸ್ಕಾಂನವರು ಕಡಿತಗೊಳಿಸಿರುವುದು ಸರಿಯಲ್ಲ. ರಾಗಿ ಖರೀದಿ ಕೇಂದ್ರದಲ್ಲಿ ನಡೆಯುವ ಅವ್ಯವಹಾರ ತಡೆಗಟ್ಟಬೇಕು ಎಂದರು.

ಅಖಂಡ ಕರ್ನಾಟಕ ರೈತ ಸಂಘದ ಜಿಲ್ಲಾಧ್ಯಕ್ಷ ಜಯರಾಂ ಮಾತನಾಡಿ, ಅರಣ್ಯ ಇಲಾಖೆ ರೈತರಿಗೆ ಕಿರುಕುಳ ನೀಡುತ್ತಿದೆ. ಚೆಸ್ಕಾಂನಿಂದ ಗುಣಮಟ್ಟದ ವಿದ್ಯುತ್ ಪೂರೈಕೆಯಾಗುತ್ತಿಲ್ಲ. ಪಂಪ್‌ಸೆಟ್‌ಗಳ ವಿದ್ಯುತ್ ಕಡಿತಗೊಳಿಸಬಾರದು. ಅಧಿಕಾರಿಗಳು ರೈತರನ್ನು ಅಲೆದಾಡಿಸುವುದನ್ನು ತಪ್ಪಿಸಬೇಕು ಎಂದರು.

ರೈತ ಸಂಘದ ಧರ್ಮಾಪುರ ಘಟಕದ ಅಧ್ಯಕ್ಷ ಆರ್.ಮೂರ್ತಿ ಮಾತನಾಡಿ, ಮರದೂರು ಏತ ನೀರಾವರಿ ಯೋಜನೆಗೆ ಧರ್ಮಾಪುರ, ಮುಳ್ಳಿಕೆರೆ ಸೇರಿಸಬೇಕು. ಅಲ್ಲದೇ ಶುದ್ಧಕುಡಿಯುವ ನೀರಿನ ಘಟಕ ದುರಸ್ತಿಗೊಳಿಸಬೇಕು ಎಂದರು. ಇದೇ ವೇಳೆ ಮಹಿಳಾ ಘಟಕದ ಅಧ್ಯಕ್ಷ ನಿಂಗಮ್ಮ, ಮುಖಂಡರಾದ ಸ್ವಾಮಿಗೌಡ, ವೆಂಕಟೇಶ್ ಮತ್ತಿತರರು ಮಾತನಾಡಿದರು.

ಕೃಷಿ ಇಲಾಖೆ ಸಹಾಯಕ ನಿರ್ದೇಶಕ ಅನಿಲ್ ಕುಮಾರ್ ಮಾತನಾಡಿ, ಕೃಷಿ ಇಲಾಖೆ ರೈತಪರವಾಗಿದ್ದು, ಶೇ.70ರಷ್ಟು ಗೊಬ್ಬರವನ್ನು ಸಹಕಾರ ಸಂಘದ ಮೂಲಕ ಮಾರಾಟ ಮಾಡಲು ಅವಕಾಶ ನೀಡಲಾಗುವುದು. ಅಲ್ಲದೇ ಸಕಾಲದಲ್ಲಿ ಪೈಪ್ ವಿತರಣೆಗೆ ಕ್ರಮ ವಹಿಸಲಾಗುವುದು ಎಂದರು.

ಪಶು ಸಂಗೋಪನಾ ಸಹಾಯಕ ನಿರ್ದೇಶಕ ಡಾ.ಚನ್ನಬಸಪ್ಪ ಮಾತನಾಡಿ, ಯಾವುದೇ ಜಾನುವಾರು ಸಾವನ್ನಪ್ಪಿದ್ದರೇ ವಿಮೆ ಮಾಡಿಸದವರಿಗೂ 10 ಸಾವಿರ ಹಾಗೂ ಆಡು, ಕುರಿಗಳಿಗೆ 5 ಸಾವಿರ ರೂ. ಪರಿಹಾರ ವಿತರಿಸಲಾಗುತ್ತಿದೆ ಎಂದರು.

ರೈತರು ಸೋಲಾರ್ ಪಂಪ್‌ಸೆಟ್ ಅಳವಡಿಸಿಕೊಳ್ಳಲು ಸರ್ಕಾರ 1.5 ಲಕ್ಷ ರೂ. ಸಹಾಯಧನ ನೀಡುತ್ತಿದ್ದು, ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಬಹುದು, ಅಲ್ಲದೇ ಶೇ.50 ರಷ್ಟು ಸಬ್ಸಿಡಿ ದರದಲ್ಲಿ ವಿವಿಧ ತರಕಾರಿ ಬಿತ್ತನೆ ಬೀಜ ವಿತರಿಸಲಾಗುವುದು ಎಂದು ಹಿರಿಯ ತೋಟಗಾರಿಕೆ ಸಹಾಯಕ ನಿರ್ದೇಶಕಿ ನೇತ್ರಾವತಿ ತಿಳಿಸಿದರು. ಇದೇ ವೇಳೆ ವಿವಿಧ ರೈತ ಸಂಘಟನೆಗಳ ಮುಖಂಡರು ಹಾಜರಿದ್ದರು.

> ತಾಲೂಕಿನಲ್ಲಿ ನಡೆದ ಬೆಳೆ ಸಮೀಕ್ಷೆಯಲ್ಲಿ ಹತ್ತಿ, ಮುಸುಕಿನಜೋಳ ಬೆಳೆದ 4511 ಮಂದಿ ರೈತರನ್ನು ಗುರ್ತಿಸಲಾಗಿದ್ದು, ತಲಾ 2 ಸಾವಿರ ರೂ.ಗಳು ರೈತರ ಖಾತೆಗೆ ಜಮೆಯಾಗಿದೆ. ರಾಗಿ ಬೆಳೆಗೂ ಪರಿಹಾರ ಘೋಷಿಸುವ ಸಂಬಂಧ ಸರ್ಕಾರಕ್ಕೆ ತಿಳಿಸಲಾಗುವುದು. ಪರಿಹಾರ ಬಾರದಿದ್ದವರು ತಮ್ಮನ್ನು ಸಂಪರ್ಕಿಸಿ ಎಂದ ಅವರು ರಾಗಿ ಖರೀದಿ ಕೇಂದ್ರದಲ್ಲಿ ತೊಂದರೆಯಾಗದಂತೆ ನಾನೇ ಮುತುವರ್ಜಿ ವಹಿಸುವೆ. ಎಲ್ಲಾ ರಸಗೊಬ್ಬರದ ಅಂಗಡಿಗಳಲ್ಲಿ ಕಡ್ಡಾಯವಾಗಿ ದರಪಟ್ಟಿ ಹಾಕಬೇಕು. ಇಲ್ಲದಿದ್ದರೇ ಈ ಸಂಬಂಧ ಕ್ರಮ ಕೈಗೊಳ್ಳಲಾಗುವುದು. ಅಲ್ಲದೇ ಕೆರೆ ಒತ್ತುವರಿ ಸೇರಿದಂತೆ ರೈತರ ಸಮಸ್ಯೆಗೆ ಸ್ಪಂದಿಸಲಾಗುವುದು.
>
> – ಮಂಜುನಾಥ್, ತಹಸೀಲ್ದಾರ್

ಮೈಸೂರು ಚಿತ್ರಮಂದಿರಗಳಲ್ಲಿ



ಚಿತ್ರಮಂದಿರ / ಚಿತ್ರ	ಪ್ರದರ್ಶನಗಳು
ಪದ್ಮ ಚಿತ್ರಮಂದಿರ	(ದೂ: 2521923)
ಮತ್ಸ್ಯಗಂಧ (ಕ)2 ಪ್ರದರ್ಶನಗಳು, ಪ್ರೇತ (ಕ) 2 ಪ್ರದರ್ಶನಗಳು	
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಕಾಟೇರ (ಕ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಕ್ರಾಕ್ (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಮತ್ಸ್ಯಗಂಧ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಒಂದು ಸರಳ ಪ್ರೇಮಕಥೆ (ಕ)	4 ಪ್ರದರ್ಶನಗಳು
ರಾಜಕಮಲ್	
ಆರ್ಟಿಕಲ್ 370 (ಹಿಂ)	4 ಪ್ರದರ್ಶನಗಳು
ಸಂಗಂ	
ಉಪಾಧ್ಯಕ್ಷ (ಕ)	4 ಪ್ರದರ್ಶನಗಳು
ಲಿಡೋ	
ಧೈರ್ಯಂ ಸರ್ವತ್ರ ಸಾಧನಂ	4 ಪ್ರದರ್ಶನಗಳು
ತಿಬ್ಬಾದೇವಿ	
ಲಾಲ್ ಸಲಾಮ್ (ತ)	4 ಪ್ರದರ್ಶನಗಳು
ಪ್ರಭಾ	
ಕ್ರಾಕ್(ಹಿಂ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ಶಾಖಾಹಾರಿ (ಕ): ಬೆ.10.15ಕ್ಕೆ, ಕೆಟಿಎಂ (ಕ): ಮ.1.10ಕ್ಕೆ, ತೇರಿ ಬತೂನ್ ಮೇ ಐಸಾ ಉಲ್ಜಾ ಜಿಯಾ (ಹಿಂ): ಸಂ.4.15ಕ್ಕೆ, ಅಬ್ಬಬ್ಬ (ಕ): ರಾ.7.05ಕ್ಕೆ, ಭ್ರಮಯುಗಂ (ಮ): ರಾ.10ಕ್ಕೆ.
ಸ್ಕ್ರೀನ್ 2	ತುಂಡು (ಮ): ಬೆ.10.50ಕ್ಕೆ, ಬಾಬ್ ಮಾರ್ಲೆ: ಒನ್ ಲವ್ (ಇಂ): ಮ.1.40ಕ್ಕೆ, ರಾ.10.10ಕ್ಕೆ, ಕುಚ್ ಖಟ್ಟಾ ಹೋ ಜಾಯ್ (ಹಿಂ): ಸಂ.4.20ಕ್ಕೆ, ಪ್ರೇಮಲು (ಮ): ರಾ.7ಕ್ಕೆ.
ಸ್ಕ್ರೀನ್ 3	ಮಂಡ್ಯ ಹೈದ (ಕ): ಬೆ.10.15ಕ್ಕೆ, ಸೈರನ್ (ತ): ಮ.1.15ಕ್ಕೆ, ಮೇಡಮ್ ವೆಬ್ (ಇಂ): ಸಂ.4.35ಕ್ಕೆ, ರಾ.10ಕ್ಕೆ, ಭ್ರಮಯುಗಂ (ಮ): ರಾ.7.10ಕ್ಕೆ.
ಸ್ಕ್ರೀನ್ 4	ಸಾರಾಂಶ (ಕ): ರಾ.10.20ಕ್ಕೆ, ಉಪಾಧ್ಯಕ್ಷ (ಕ): ಮ.1.05ಕ್ಕೆ, ಫೈಟರ್ (ಹಿಂ): ಸಂ.4.10ಕ್ಕೆ, ಒಂದು ಸರಳ ಪ್ರೇಮಕಥೆ (ಕ): ರಾ.7.20ಕ್ಕೆ, ಊರು ಪೇರು ಭೈರವಕೋಣ (ತೆ): ರಾ.10.15ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

ಸ್ಕ್ರೀನ್ 1	ಉಪಾಧ್ಯಕ್ಷ (ಕ): ಬೆ.10.05ಕ್ಕೆ, ಮೇಡಮ್ ವೆಬ್ (ಇಂ): ಮ.1.20ಕ್ಕೆ, ರಾ.7.05ಕ್ಕೆ, ರಾ.9.40ಕ್ಕೆ, ಊರು ಪೇರು ಭೈರವಕೋಣ (ತೆ): ಮ.3.55ಕ್ಕೆ
ಸ್ಕ್ರೀನ್ 2	ಮೇಡಮ್ ವೆಬ್ (ಇಂ): ಬೆ.9.55ಕ್ಕೆ, ಸೈರನ್ 108 (ತ): ಸಂ.4ಕ್ಕೆ, ರಾ.10.30ಕ್ಕೆ, ಉಪಾಧ್ಯಕ್ಷ (ಕ): ರಾ.7.15ಕ್ಕೆ.
ಸ್ಕ್ರೀನ್ 3	ಸೈರನ್ 108 (ತ): ಮ.12.15ಕ್ಕೆ, ಬಾಬ್ ಮಾರ್ಲೆ: ಒನ್ ಲವ್ (ಇಂ): ಸಂ.4.10ಕ್ಕೆ, ಪ್ರೇಮಲು (ಮ): ಸಂ.6.45ಕ್ಕೆ, ತೇರಿ ಬತೂನ್ ಮೇ ಐಸಾ ಉಲ್ಜಾ ಜಿಯಾ (ಹಿಂ): ರಾ.10ಕ್ಕೆ.
ಸ್ಕ್ರೀನ್ 4	ಒಂದು ಸರಳ ಪ್ರೇಮಕಥೆ (ಕ): ಬೆ.10.05ಕ್ಕೆ, ಸಂ.4.20ಕ್ಕೆ, ಅಬ್ಬಬ್ಬ (ಕ): ಮ.1.15ಕ್ಕೆ, ತುಂಡು (ಮ): ರಾ.7.30ಕ್ಕೆ, ಭ್ರಮಯುಗಂ (ಮ): ರಾ.10.20ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	ಪಾರ್ಕಿಂಗ್ (ಕ): ಬೆ.10.35ಕ್ಕೆ, ಸಪ್ತ ಸಾಗರದಾಚೆ ಎಲ್ಲೋ 2 (ಕ): ಮ.1.10ಕ್ಕೆ, ಬ್ಯಾಡ್ ಮ್ಯಾನರ್ಸ್ (ಕ): ಸಂ.4ಕ್ಕೆ, ಅರ್ಧಂಬರ್ಧ ಪ್ರೇಮಕಥೆ (ಕ): ಸಂ.6.35ಕ್ಕೆ, ಅನ್ನಪೂರ್ಣಿ (ತ): ರಾ.9.15ಕ್ಕೆ
ಸ್ಕ್ರೀನ್ 2	ಅನಿಮಲ್ (ಹಿಂ): ಬೆ.10ಕ್ಕೆ, ಸಂ.6ಕ್ಕೆ, ರಾ.9.45ಕ್ಕೆ, ಸ್ಯಾಮ್ ಬಹದ್ದೂರ್ (ಹಿಂ): ಮ.1.45ಕ್ಕೆ.
ಸ್ಕ್ರೀನ್ 3	ಸ್ಯಾಮ್ ಬಹದ್ದೂರ್ (ಹಿಂ): ಬೆ.10.10ಕ್ಕೆ, ಸಂ.4.50ಕ್ಕೆ, ಅನಿಮಲ್ (ಹಿಂ): ಮ.1.05ಕ್ಕೆ, ರಾ.7.45ಕ್ಕೆ
ಸ್ಕ್ರೀನ್ 4	ಸಪ್ತ ಸಾಗರದಾಚೆ ಎಲ್ಲೋ 2 (ಕ): ಬೆ.10.45ಕ್ಕೆ, ಅನಿಮಲ್ (ಹಿಂ): ಮ.2.40ಕ್ಕೆ, ನೆಪೋಲಿಯನ್ (ಇಂ): ಸಂ.6.25ಕ್ಕೆ, ಸ್ಯಾಮ್ ಬಹದ್ದೂರ್ (ಹಿಂ): ರಾ.9.30ಕ್ಕೆ.

ಪಿವಿಆರ್ ಸಿನಿಮಾಸ್
ಮೊ.ನಂ: 8951357139
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಆರ್ಟಿಕಲ್ 370 (ಹಿಂ): ಬೆ.9.10ಕ್ಕೆ, ಮ.12.30ಕ್ಕೆ, ಮ.3.40ಕ್ಕೆ, ರಾ.7.10ಕ್ಕೆ, ರಾ.10.30ಕ್ಕೆ, ಕ್ರಕ್ ಜೀತೇಗಾ ತೋ ಜಿಯೇಗಾ (ಹಿಂ): ಬೆ.9ಕ್ಕೆ, ಮ.12.20ಕ್ಕೆ, ಮ.3.50ಕ್ಕೆ, ರಾ.7ಕ್ಕೆ, ರಾ.10.20ಕ್ಕೆ, ಡೆಮೋನ್ ಸ್ಲೇಯರ್ (ಇಂ): ಬೆ.11.35ಕ್ಕೆ, ಮ.2ಕ್ಕೆ, ಸಂ.4.25ಕ್ಕೆ, ಸಂ.6.50ಕ್ಕೆ, ಫೈಟರ್ (2ಡಿ)(ಹಿಂ): ಬೆ.10.15ಕ್ಕೆ, ಆಲ್ ಇಂಡಿಯಾ ರ್‍ಯಾಂಕ್ (ಹಿಂ): ಮ.1ಕ್ಕೆ, ಮಂಜುಮ್ಮೆಲ್ ಬಾಯ್ಸ್ (ಮ): ಸಂ.6.25ಕ್ಕೆ, ತೇರಿ ಬತೂನ್ ಮೇ ಐಸಾ ಉಲ್ಜಾ ಜಿಯಾ (ಹಿಂ): ಬೆ.11.35ಕ್ಕೆ, ಸಂ.6.35ಕ್ಕೆ, ಉಪಾಧ್ಯಕ್ಷ (ಕ): ರಾ.7.05ಕ್ಕೆ, ಪ್ರೇಮಲು (ಮ): ಮ.3.20ಕ್ಕೆ, ರಾ.9.15ಕ್ಕೆ, ಮತ್ಸ್ಯಗಂಧ (ಕ): ರಾ.9.30ಕ್ಕೆ, ಒಂದು ಸರಳ ಪ್ರೇಮ ಕಥೆ (ಕ): ಮ.12.05ಕ್ಕೆ, ಭ್ರಮಯುಗಂ (ಮ): ರಾ.9.45ಕ್ಕೆ, ವಾರನಂ ಆಯಿರಂ (ತ): ಮ.3.15ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಬಸವಣ್ಣ ಸಾಂಸ್ಕೃತಿಕ ನಾಯಕ ಮಾತ್ರವಲ್ಲ ವಿಶ್ವನಾಯಕ

ಬಸವಯೋಗಿ ಪ್ರಭು ಸ್ವಾಮೀಜಿ ಅಭಿಪ್ರಾಯ



ತಿ.ನರಸೀಪುರ, ಫೆ.27– ಬಸವಣ್ಣನವರು ಸಾಂಸ್ಕೃತಿಕ ನಾಯಕರು ಮಾತ್ರವಲ್ಲ. ಅವರು ಅನುಭವ ಮಂಟಪದ ಮೂಲಕ ವಿಶ್ವ ನಾಯಕರಾಗಿದ್ದಾರೆ ಎಂದು ಬಸವಯೋಗಿ ಪ್ರಭು ಸ್ವಾಮೀಜಿ ಅಭಿಪ್ರಾಯಪಟ್ಟರು.

ಪಟ್ಟಣದ ವಿದ್ಯೋದಯ ಕಾಲೇಜು ವೃತ್ತದಲ್ಲಿ ಜಾಗತಿಕ ಲಿಂಗಾಯತ ಮಹಾಸಭಾ ಮಂಗಳವಾರ ಸಂಜೆ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ವಿಶ್ವಗುರು ಬಸವಣ್ಣನವರನ್ನು ಸಾಂಸ್ಕೃತಿಕ ನಾಯಕ ಎಂದು ಸರ್ಕಾರ ಘೋಷಿಸಿರುವ ಹಿನ್ನೆಲೆಯಲ್ಲಿ ಸರ್ಕಾರ, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಅಭಿನಂದನೆ ಸಲ್ಲಿಸಿ ಅವರು ಮಾತನಾಡಿದರು.

12ನೇ ಶತಮಾನದಲ್ಲಿ ಅನುಭವ ಮಂಟಪದ ಮೂಲಕ ಎಲ್ಲಾ ವರ್ಗದವರನ್ನು ಸಮಾನವಾಗಿ ಕಾಣುವ ಸಂದೇಶ ಸಾರಿದರು. ಅವರನ್ನು ರಾಜ್ಯ ಸರ್ಕಾರ ಸಾಂಸ್ಕೃತಿಕ ನಾಯಕ ಎಂದು ಘೋಷಿಸಿದೆ. ಆದರೆ ಮಾನವೀಯ ಮೌಲ್ಯಗಳನ್ನು ನಿರಂತರವಾಗಿ ಬಿತ್ತಿ ದೇಶ ಮಾತ್ರವಲ್ಲದೇ ವಿಶ್ವಕ್ಕೆ ನಾಯಕರಾಗಿದ್ದಾರೆ ಎಂದರು.

ಪ್ರಸ್ತುತ ಕನ್ನಡಕ್ಕೆ 8 ಜ್ಞಾನಪೀಠ ಪ್ರಶಸ್ತಿ ದೊರೆತಿದೆ ಅಂದು ಬಸವಣ್ಣನವರು ಕನ್ನಡದಲ್ಲಿ ವಚನ ರಚಿಸುವಂತೆ ಅನುಭವ ಮಂಟಪದಲ್ಲಿ ಎಲ್ಲರನ್ನೂ ಪ್ರೇರೇಪಿಸಿದ್ದರು ಎಂದರು.

ಕಾರ್ಯಕ್ರಮದಲ್ಲಿ ಶಿವಪ್ರಸಾದ್, ಗಣಾಚಾರ ವೇದಿಕೆಯ ಲಿಂಗರಾಜಪ್ಪ ಬಸವಣ್ಣ, ಡಿ.ಎಂ. ಕುಮಾರ್, ಜಾಗತಿಕ ಲಿಂಗಾಯತ ಮಹಾಸಭಾ ಅಧ್ಯಕ್ಷ ರವಿ, ಕಾರ್ಯದರ್ಶಿ ಬಸಪ್ಪ, ಗ್ರಾಪಂ ಸದಸ್ಯರಾದ ಪ್ರಭು, ಕುಮಾರ, ಮತ್ತಿತರರಿದ್ದರು.

ಸರಸ್ವತಿಪುರಂ 'ಶ್ರೀರಾಮ ಪಾರ್ಕ್' ದುಸ್ಥಿತಿ....



"ನಾನು ನಗರ ಪಾಲಿಕೆ ಸದಸ್ಯನಾಗಿದ್ದಾಗ ಸರಸ್ವತಿಪುರಂ ವ್ಯಾಪ್ತಿಯ ಪಾರ್ಕ್‌ಗಳ ನಿರ್ವಹಣೆ, ರಸ್ತೆ, ಶೌಚಾಲಯಗಳ ಸ್ವಚ್ಛತೆ, ಫುಟ್‌ಪಾತ್ ಒತ್ತುವರಿ ತೆರವಿಗೆ ಮೊದಲ ಆದ್ಯತೆ ನೀಡುತ್ತಿದ್ದೆ. ಇದೀಗ ಪಾಲಿಕೆಗೆ ಚುನಾವಣೆ ನಡೆಯದ ಹಿನ್ನೆಲೆಯಲ್ಲಿ ಅಧಿಕಾರಿಗಳೇ ದರ್ಬಾರ್ ನಡೆಸುತ್ತಿದ್ದಾರೆ. ಈ ಬಡಾವಣೆ ಮಾತ್ರವಲ್ಲದೆ, ಮೈಸೂರು ನಗರದ ಬಹುತೇಕ ಬಡಾವಣೆಗಳಲ್ಲಿ ಸ್ವಚ್ಛತೆ, ಸೌಂದರ್ಯಕ್ಕೆ ಧಕ್ಕೆ ಬಂದಿದೆ. ಅಲ್ಲದೆ, ಮೈಸೂರಿನ ಯಾವುದೇ ಪಾರ್ಕ್‌ಗಳು ಸರಿಯಾಗಿ ನಿರ್ವಹಣೆಯಾಗುತ್ತಿಲ್ಲ.


– ಆರ್.ಲಿಂಗಪ್ಪ, ಮಾಜಿ ಮೇಯರ್

ಮೈಸೂರು, ಫೆ.27(ಎಸ್‌ಪಿಎನ್)– ಸರಸ್ವತಿಪುರಂ 'ಶ್ರೀರಾಮ ಪಾರ್ಕ್' ಅನ್ನು 2020–21ನೇ ಸಾಲಿನ ಎಸ್‌ಎಫ್‌ಸಿ ಯೋಜನೆಯಡಿ 50 ಲಕ್ಷ ರೂ. ವೆಚ್ಚದಲ್ಲಿ ಅಭಿವೃದ್ಧಿಪಡಿಸಿದ್ದರೂ ಕೆಲ ತಿಂಗಳಿಂದ ನಿರ್ವಹಣೆ ಇಲ್ಲದೆ, ಪಾರ್ಕ್‌ನಲ್ಲಿ ಗಿಡ–ಗಂಟಿ ಬೆಳೆದು ಪಾಳುಬಿದ್ದ ವನದಂತಾಗಿದೆ.

ಈ ಹಿಂದೆ ಎಲ್.ನಾಗೇಂದ್ರ ಚಾಮರಾಜ ಕ್ಷೇತ್ರದ ಶಾಸಕರಾಗಿದ್ದಾಗ 50 ಲಕ್ಷ ರೂ. ಅನುದಾನ ಬಿಡುಗಡೆಗೊಳಿಸಿದ್ದರು. ಹಾಗಾಗಿ ಅಭಿವೃದ್ಧಿಗೊಂಡಿತ್ತು. ಈ ಪಾರ್ಕ್ ನಿರ್ವಹಣೆಗೆ ಸಿಬ್ಬಂದಿ ನೇಮಿಸಲೂ ಪಾಲಿಕೆಯಿಂದ ಸಾಧ್ಯವಾಗುತ್ತಿಲ್ಲವೇ ಎಂದು ಖಾಸಗಿ ಕಂಪನಿಯ ಉದ್ಯೋಗಿ ನಾಗರಾಜು ಪ್ರಶ್ನಿಸಿದ್ದಾರೆ.

ಈ ಪಾರ್ಕ್‌ನಲ್ಲಿ ಬಗೆಬಗೆಯ ಜಿಮ್ ಸೆಟ್ ಅಳವಡಿಸಲಾಗಿದೆ. ಸಿಮೆಂಟ್ ಟೈಲ್ಸ್ ಅಳವಡಿಸಿ ವಾಕಿಂಗ್ ಪಾತ್ ಮಾಡಲಾಗಿದೆ. ಈ ಉದ್ಯಾನವನಕ್ಕೆ ನಿರ್ವಹಣಾ ಸಿಬ್ಬಂದಿ ಇಲ್ಲದ ಹಿನ್ನೆಲೆಯಲ್ಲಿ ಗಿಡ–ಗಂಟಿ ಬೆಳೆದು ಪಾಳು ಬಿದ್ದಿದೆ.

ನಾನು ಇದೇ ಬಡಾವಣೆಯ ಖಾಸಗಿ ಶೋ ರೂಂನಲ್ಲಿ ಕೆಲಸ ಮಾಡುತ್ತಿದ್ದೇನೆ. ಮಧ್ಯಾಹ್ನದ ವೇಳೆ ಸಹೋದ್ಯೋಗಿಗಳ ಜತೆ ಊಟಕ್ಕೆ ಈ ಪಾರ್ಕ್‌ಗೆ ಬರುತ್ತೇವೆ. ಕೆಲ ತಿಂಗಳ ಹಿಂದೆ ಈ ಪಾರ್ಕ್ ನಿರ್ವಹಣೆ ಚೆನ್ನಾಗಿತ್ತು. ಇದೀಗ ಪಾರ್ಕ್‌ನಲ್ಲಿಟ್ಟಿರುವ ಕಸದ ಬುಟ್ಟಿಗಳು ತುಂಬಿ ಎಷ್ಟೋ ದಿನಗಳಾಗಿವೆ. ಆ ಕಸವನ್ನು ಈ ವ್ಯಾಪ್ತಿಯ ಅಧಿಕಾರಿಗಳು ವಿಲೇವಾರಿ ಮಾಡಿಸಿಲ್ಲ. ಇದರಿಂದ ದುರ್ನಾತ ಬೀರುತ್ತಿದೆ ಎಂದು ತುಂಬಿ ತುಳುಕುತ್ತಿದ್ದ ಕಸದ ಬುಟ್ಟಿ ಕಡೆ ಕೈತೋರಿದರು.





ಶೌಚಾಲಯ ದುರ್ನಾತ: ಈ ಪಾರ್ಕ್‌ನಲ್ಲಿರುವ ಸಾರ್ವಜನಿಕ ಶೌಚಾಲಯ ನಿರ್ವಹಣೆ ಇಲ್ಲದೆ, ದುರ್ನಾತ ಬೀರುತ್ತಿದೆ. ಶೌಚಾಲಯ ಬಳಸಿ ನೀರು ಹಾಕುವವರೂ ಗತಿಯಿಲ್ಲ. ನಿರ್ವಹಣೆ ಮಾಡಲು ಸಾಧ್ಯವಾಗದಿದ್ದರೆ, ಶೌಚಾಲಯಗಳನ್ನು ಪಾರ್ಕ್‌ಗಳಲ್ಲಿ ಏಕೆ ನಿರ್ಮಾಣ ಮಾಡಬೇಕಿತ್ತು. ಈ ಪಾರ್ಕ್ ಮಧ್ಯದಲ್ಲಿ ಶ್ರೀರಾಮ ಭಜನಾ ಮಂದಿರವಿದೆ. ಇಲ್ಲಿ ಬೆಳಗ್ಗೆ–ಸಂಜೆ ನಿತ್ಯ ಮಹಿಳಾ ಸಂಘಟನೆಗಳಿಂದ ಭಜನ್ ಕಾರ್ಯಕ್ರಮ ಇರುತ್ತದೆ. ಈ ದುರ್ನಾತದ ನಡುವೆಯೇ ಭಜನೆ ಮಾಡುವ ದುರ್ಗತಿ ಮಹಿಳಾ ಭಕ್ತರ ಪಾಲಿಗೆ ಒದಗಿ ಬಂದಿದೆ ಎಂದು ಬೇಸರ ಹೊರಹಾಕಿದರು.



ಗಿಡ–ಗಂಟಿ ಬೆಳೆದು ಪಾಳುಬಿದ್ದ ಪಾರ್ಕ್

ಪಕ್ಷಾಂತರ ಆರೋಪದಲ್ಲಿ ಆಂಧ್ರದ 8 ಶಾಸಕರ ಅನರ್ಹಗೊಳಿಸಿದ ಸ್ಪೀಕರ್

ಅಮರಾವತಿ, ಫೆ.27– ದೇಶಾದ್ಯಂತ ರಾಜ್ಯಸಭೆ ಚುನಾವಣಾ ಮತದಾನ ಬಿರುಸಿನಿಂದ ಸಾಗಿರುವಂತೆಯೇ ಇತ್ತ ಆಂಧ್ರ ಪ್ರದೇಶದಲ್ಲಿ ವಿಧಾನಸಭೆಯ ಸ್ಪೀಕರ್ 8 ಶಾಸಕರನ್ನು ಅನರ್ಹಗೊಳಿಸಿದ್ದಾರೆ. ಆಂಧ್ರಪ್ರದೇಶ ವಿಧಾನಸಭೆಯ ಸ್ಪೀಕರ್ ತಮ್ಮಿನೇನಿ ಸೀತಾರಾಮ್ ಅವರು ಪಕ್ಷಾಂತರಿಗಳ ವಿರುದ್ಧ ನಿರ್ಣಾಯಕ ನಿಲುವನ್ನು ತೆಗೆದುಕೊಂಡಿದ್ದು, 8 ಶಾಸಕರನ್ನು ಅನರ್ಹಗೊಳಿಸಿದ್ದಾರೆ. ಯುವಜನ ಶ್ರಮಿಕ ರೈತ ಕಾಂಗ್ರೆಸ್ ಪಕ್ಷ (ವೈಎಸ್‌ಆರ್‌ಸಿಪಿ) ಸಲ್ಲಿಸಿದ ಅರ್ಜಿಯ ಮೇರೆಗೆ ಆ ಪಕ್ಷದ ಆನಂ ರಾಮನಾರಾಯಣ ರೆಡ್ಡಿ, ಮೇಕಪತಿ ಚಂದ್ರಶೇಖರ್ ರೆಡ್ಡಿ, ಕೋಟಂ ರೆಡ್ಡಿ ಶ್ರೀಧರ್ ರೆಡ್ಡಿ ಮತ್ತು ಉಂಡವಲ್ಲಿ ಶ್ರೀದೇವಿ ಅವರನ್ನು ಅನರ್ಹಗೊಳಿಸಲಾಗಿದೆ ಎಂದು ಮುಖ್ಯಮಂತ್ರಿ ಕಚೇರಿ (ಸಿಎಂಒ) ಅಧಿಕೃತ ಪ್ರಕಟಣೆಯಲ್ಲಿ ತಿಳಿಸಿದೆ.

ಇದಲ್ಲದೆ, ತೆಲುಗು ದೇಶಂ ಪಕ್ಷ (ಟಿಡಿಪಿ) ಸಲ್ಲಿಸಿದ ಅರ್ಜಿಯ ಆಧಾರದ ಮೇಲೆ ಮದ್ದಲಗಿರಿ, ಕರಣಂ ಬಲರಾಮ್, ವಲ್ಲಭನೇನಿ ವಂಶಿ ಮತ್ತು ವಾಸುಪಲ್ಲಿ ಗಣೇಶ್ ಅವರನ್ನೂ ಅನರ್ಹಗೊಳಿಸಲಾಗಿದೆ. ಅನರ್ಹಗೊಳಿಸುವ ವೇಳೆ 'ಅನರ್ಹಗೊಂಡ ಶಾಸಕರು ತಮ್ಮ ಮೂಲ ಪಕ್ಷದಿಂದ ಬೇರೆ ಪಕ್ಷಕ್ಕೆ ತಮ್ಮ ನಿಷ್ಠೆಯನ್ನು ಬದಲಾಯಿಸಿದ್ದಾರೆ. ಇದು ಪ್ರಜಾಪ್ರಭುತ್ವದ ರಚನೆ ಮತ್ತು ಮತದಾರರ ಆದೇಶವನ್ನು ದುರ್ಬಲಗೊಳಿಸುತ್ತದೆ ಎಂದು ಸ್ಪೀಕರ್ ಅಭಿಪ್ರಾಯಪಟ್ಟಿದ್ದಾರೆ.